

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಜುಲೈ 14 ಭಾನುವಾರ 2024
ಸಂಪುಟ: 45 | ಸಂಚಿಕೆ: 89 | ಪುಟಗಳು: 12
₹4
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಮುಡಾ ಭೂ ಹಗರಣದಲ್ಲಿ ಸಿಎಂ ಸಿದ್ದರಾಮಯ್ಯ ವಿರುದ್ಧ

ತನಿಖೆಗೆ ರಾಜ್ಯಪಾಲರು ಅನುಮತಿ ನೀಡಬೇಕು

● ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮನವಿ ● ಎರಡು ನಿವೇಶನ ಪಡೆಯಬೇಕಾದಲ್ಲಿ 14 ನಿವೇಶನ ಪಡೆದಿದ್ದಾರೆ ● ಇಡೀ ಭೂ ವ್ಯವಹಾರವೇ ಕಾನೂನುಬಾಹಿರ: ಹೆಚ್‌ಡಿಕೆ ಆರೋಪ ● ಹಿರಿಯ ನ್ಯಾಯವಾದಿ ಕೋರ್ಟ್‌ಗೆ ಹೋಗಲು ಮನವಿ ಮಾಡಿದರೆ ರಾಜ್ಯಪಾಲರು ಅನುಮತಿಸಬೇಕು

ಬೆಂಗಳೂರು, ಜು.13(ಕೆಎಂಶಿ)– **ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಡೆದಿರುವ ಭೂಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪಾತ್ರ ಸ್ಪಷ್ಟವಾಗಿದ್ದು, ಪ್ರಕರಣದ ತನಿಖೆ ಹಾಗೂ ನ್ಯಾಯಾಲಯಕ್ಕೆ ಹೋಗಲು ರಾಜ್ಯಪಾಲರು ಅನುಮತಿ ನೀಡಬೇಕು ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಇಂದಿಲ್ಲಿ ಮನವಿ ಮಾಡಿದ್ದಾರೆ.**


ಪತ್ರಿಕಾಗೋಷ್ಠಿಯಲ್ಲಿ ಸಚಿವ ಎಚ್.ಡಿ.ಕುಮಾರಸ್ವಾಮಿ

ಆಡಳಿತದಲ್ಲಿದ್ದ ಸಂದರ್ಭದಲ್ಲಿ ಅಧಿಕಾರ ದುರುಪಯೋಗ ಮಾಡಿಕೊಂಡು ಮುಡಾದಲ್ಲಿ ಭಾರಿ ಅವ್ಯವಹಾರ ನಡೆಸಿದ್ದಾರೆಂದು ಪತ್ರಿಕಾಗೋಷ್ಠಿಯಲ್ಲಿ ದಾಖಲೆಗಳನ್ನು ಮುಂದಿಟ್ಟರು. ಪ್ರಕರಣಕ್ಕೆ ಸಂಬಂಧಿಸಿದಂತೆ ಹಿರಿಯ ನ್ಯಾಯವಾದಿಯೊಬ್ಬರು ಎಲ್ಲಾ ದಾಖಲೆಗಳನ್ನು ರಾಜ್ಯಪಾಲರ ಮುಂದಿಟ್ಟು ಮುಖ್ಯಮಂತ್ರಿ ವಿರುದ್ಧ ತನಿಖೆ ಮತ್ತು ನ್ಯಾಯಾಲಯಕ್ಕೆ ಹೋಗಲು ಅವರಿಂದ ಅನುಮೋದನೆ ಪಡೆದುಕೊಳ್ಳಬೇಕು. ಸರ್ಕಾರ ಮಾಡುವ ತನಿಖೆ, ಇಲ್ಲವೇ ನಾವು ಒತ್ತಾಯ ಮಾಡಿ ನಡೆಸುವ ಮತ್ತೊಂದು ತನಿಖೆಯಿಂದ ಸತ್ಯ ಹೊರ ಬೀಳುವುದಿಲ್ಲ. ಸಿದ್ದರಾಮಯ್ಯ ಅವರ ಮೂಗಿನಡಿಯೇ ಅವರ ಕುಟುಂಬದವರು ಮಾಡಿರುವ ಹಗರಣದ ಬಗ್ಗೆ ನ್ಯಾಯಾಲಯವೇ ತೀರ್ಮಾನಿಸಿ, ತಪ್ಪಿತಸ್ಥರಿಗೆ ಶಿಕ್ಷೆ ನೀಡಬೇಕು.

ಕರ್ನಾಟಕದಲ್ಲಿ ಈ ಹಿಂದೆ ಇಂತಹ ಅನೇಕ ಘಟನೆಗಳು ನಡೆದಿವೆ. ಮುಡಾ ಭೂಮಿಯನ್ನೇ ಒತ್ತುವರಿ ಮಾಡಿ, ಅದನ್ನು ತಮ್ಮದೆಂದು ಹೇಳಿಕೊಂಡು ಅತ್ಯಂತ ಬೆಲೆ ಬಾಳುವ 14 ನಿವೇಶನ ಪಡೆದಿರುವುದು ಮಹಾಪರಾಧ.

ಸಿದ್ದರಾಮಯ್ಯ ಅವರು ಉಪ ಮುಖ್ಯಮಂತ್ರಿ ಹಾಗೂ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲೇ 3.16 ಎಕರೆ ಭೂಮಿಗೆ ಸಂಬಂಧಿಸಿದಂತೆ ಎಲ್ಲ ವ್ಯವಹಾರವೂ ನಡೆದಿದೆ.

ಇವರು ಹೇಳಿಕೊಳ್ಳುವ ಭೂಮಿ, ನಿಂಗ ಉರುಫ್ ಜವರ ಎಂಬುವರಿಗೆ ಸೇರಿದ್ದು, ಆ ಭೂಮಿಯನ್ನು ಮುಡಾ ಭೂಸ್ವಾಧೀನ ಮಾಡಿಕೊಂಡು ಮಾಲೀಕರಿಗೆ 3.26 ಲಕ್ಷ ರೂ. ಪರಿಹಾರ ಸಂದಾಯ ಮಾಡಿದೆ. ಈ ಭೂಮಿಗೆ 1992ರಲ್ಲಿ

■ 5ನೇ ಪುಟಕ್ಕೆ

ನಾಳೆಯಿಂದ ವಿಧಾನಮಂಡಲ ಅಧಿವೇಶನ

ಮುಡಾ ಹಗರಣ, ವಾಲ್ಮೀಕಿ ನಿಗಮದ ಅವ್ಯವಹಾರವೇ 'ಕಲಾಪ' ನುಂಗುವ ಸಾಧ್ಯತೆ



ಬೆಂಗಳೂರು, ಜು.13 (ಕೆಎಂಶಿ)–ಸೋಮವಾರದಿಂದ ಆರಂಭಗೊಳ್ಳಲಿರುವ ವಿಧಾನ ಮಂಡಲದ ಅಧಿವೇಶನದಲ್ಲಿ ಮುಡಾ ಹಗರಣ, ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಅವ್ಯವಹಾರ ವಿಷಯಗಳು ಪ್ರತಿಧ್ವನಿಸಲಿವೆ.

ಸಿದ್ದರಾಮಯ್ಯ ತಮ್ಮ ಮೊದಲ ಅಧಿಕಾರಾವಧಿಯಲ್ಲಿ ಯಾವುದೇ ಹಗರಣಗಳಲ್ಲೂ ಸಿಲುಕಿರಲಿಲ್ಲ, ಆದರೆ, ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿ ಒಂದು ವರ್ಷ ಪೂರೈಸಿದ ಬೆನ್ನಲ್ಲೇ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಡೆದಿರುವ ನಿವೇಶನ ಹಂಚಿಕೆ ಹಾಗೂ ವಾಲ್ಮೀಕಿ ನಿಗಮದ 187 ಕೋಟಿ ರೂ. ಅಕ್ರಮ ವರ್ಗಾವಣೆ ಆರೋಪ ಉರುಳುಸುತ್ತಿಕೊಳ್ಳುತ್ತಿದೆ. ಪ್ರತಿಪಕ್ಷ ಎನ್‌ಡಿಎ ಮೈತ್ರಿಕೂಟದ ಬಿಜೆಪಿ–ಜೆಡಿಎಸ್, ಈ ಎರಡೂ ಹಗರಣಗಳನ್ನು ಸದನಗಳಲ್ಲಿ ಪ್ರಸ್ತಾಪಿಸಿ,

■ 5ನೇ ಪುಟಕ್ಕೆ

ಬಾಡಿಗೆ ಮನೆ ಕೇಳುವ ನೆಪದಲ್ಲಿ ಬಂದು ನಿವೃತ್ತ ಶಿಕ್ಷಕಿ ಕಟ್ಟಿಹಾಕಿ ಚಿನ್ನಾಭರಣ ದರೋಡೆ

3.85 ಲಕ್ಷ ರೂ. ಬೆಲೆ ಬಾಳುವ 77 ಗ್ರಾಂ ಚಿನ್ನದ ಮಾಂಗಲ್ಯ ಸರ, ಬಳೆಗಳನ್ನು ದೋಚಿ ಯುವಕ–ಯುವತಿ ಪರಾರಿ; ಮೈಸೂರಿನ ಹೆಬ್ಬಾಳು ಬಡಾವಣೆಯಲ್ಲಿ ಜು.10ರಂದು ದುಷ್ಕೃತ್ಯ

ಮೈಸೂರು, ಜು.13(ಆರ್‌ಕೆ)– ಯುವಕ–ಯುವತಿ, ಹಾಡಹಗಲೇ ಬಾಡಿಗೆಗೆ ಮನೆ ಕೇಳುವ ನೆಪದಲ್ಲಿ ಬಂದು ನಿವೃತ್ತ ಶಿಕ್ಷಕಿಯನ್ನು ಕಟ್ಟಿಹಾಕಿ 3.85 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಿತ್ತುಕೊಂಡು ಪರಾರಿಯಾಗಿರುವ ಘಟನೆ ಮೈಸೂರಿನ ಹೆಬ್ಬಾಳು ಬಡಾವಣೆಯಲ್ಲಿ ಜುಲೈ 10ರಂದು ಸಂಭವಿಸಿದೆ.

ಹೆಬ್ಬಾಳು 1ನೇ ಹಂತ 3ನೇ ಮುಖ್ಯರಸ್ತೆಯ ಇಡಬ್ಲ್ಯೂಎಸ್‌ನ ನಂ.67ನೇ ಮನೆ ನಿವಾಸಿ ಮಲ್ಲಯ್ಯ ಅವರ ಪತ್ನಿ ಶಾಂತಮ್ಮ(65) ಚಿನ್ನಾಭರಣ ಕಳೆದುಕೊಂಡವರು. ಜುಲೈ 10ರಂದು ಮಧ್ಯಾಹ್ನ 12.45 ಗಂಟೆಯಲ್ಲಿ ಯುವತಿಯೊಂದಿಗೆ ಬಂದ ಯುವಕ, ತಾವು ಗಂಡ–ಹೆಂಡತಿ ಎಂದು ಹೇಳಿ ಬಾಡಿಗೆಗೆ ಮನೆ ಬೇಕಾಗಿದೆ ಎಂದಿದ್ದಾರೆ. ಮನೆ ಖಾಲಿ ಇದ್ದ ಕಾರಣ ಅವರನ್ನು ಕರೆದು ಮನೆಯೊಳಗೆ ಕೂರಿಸಿದ ಶಾಂತಮ್ಮ ಅವರನ್ನು ಉದ್ದೇಶಿಸಿ ಯುವತಿ, ನಾನು ಗರ್ಭಿಣಿ. ಏನಾದರೂ ತಿನ್ನಲು–ಕುಡಿಯಲು ಕೊಡಿ ಎಂದು ಕೇಳಿದ್ದರಿಂದ ಕಾಫಿ ಮಾಡಿಕೊಟ್ಟಿದ್ದಾರೆ. ನಂತರ ಖಾಲಿ ಇದ್ದ ನೆಲಮಹಡಿಯ ಎರಡು ಕೊಠಡಿಗಳುಳ್ಳ ಮನೆ ತೋರಿಸಿ ಏನೇನು ಸೌಲಭ್ಯವಿದೆ ಎಂಬುದನ್ನು ವಿವರಿಸಿದ್ದಾರೆ. ನಮಗೆ ಮನೆ ಒಪ್ಪಿಗೆಯಾಗಿದೆ. ಊಟ ಮಾಡಿಕೊಂಡು ಎಟಿಎಂನಲ್ಲಿ ಹಣ ಡ್ರಾ ಮಾಡಿಕೊಂಡು ಮಧ್ಯಾಹ್ನ ಬಂದು ಅಡ್ವಾನ್ಸ್ ಕೊಡುತ್ತೇವೆಂದು ಹೇಳಿ ಯುವಕ–ಯುವತಿ ಹೋಗಿದ್ದಾರೆ. ಈ ವೇಳೆ ಶಾಂತಮ್ಮ ಧರಿಸಿದ್ದ ಒಡವೆಗಳನ್ನು ನೋಡಿಕೊಂಡಿದ್ದ ಆ ಖತರ್ನಾಕ್‌ಗಳು, ಮತ್ತೆ ಮಧ್ಯಾಹ್ನ 3 ಗಂಟೆಗೆ ವಾಪಸ್

■ 5ನೇ ಪುಟಕ್ಕೆ

ಪ್ರವಾಸೋದ್ಯಮ ಇಲಾಖೆಯಲ್ಲೂ ಗೋಲ್‌ಮಾಲ್; 2.47 ಕೋಟಿ ರೂ. ಅಕ್ರಮ ಹಣ ವರ್ಗಾವಣೆ

ಕಳೆದ ಅಕ್ಟೋಬರ್ 28ರಿಂದ ಕಳೆದ ಫೆಬ್ರವರಿ 22ರವರೆಗೆ ವಹಿವಾಟು: ಐಡಿಬಿಐ ಬ್ಯಾಂಕ್ ವಿರುದ್ಧ ಕೇಸ್

ಬಾಗಲಕೋಟೆ: ರಾಜ್ಯದಲ್ಲಿ ವಾಲ್ಮೀಕಿ ನಿಗಮದ ಹಗರಣ ಸರ್ಕಾರದ ಕೊರಳಿಗೆ ಕುಣಿಕೆಯಾಗುತ್ತಿದೆ. ಈಗಾಗಲೇ ಸಚಿವ ಬಿ. ನಾಗೇಂದ್ರ ತಲೆದಂಡ ಕೂಡ ಆಗಿದ್ದು ಇಡಿ ಅಧಿಕಾರಿಗಳು ಬಂಧಿಸಿದ್ದಾರೆ. ಇದರ ಮಧ್ಯೆ ಅದೇ ಮಾದರಿಯಲ್ಲಿ ಮತ್ತೊಂದು ಇಲಾಖೆಗೆ ಸಂಬಂಧಿಸಿದ ಬ್ಯಾಂಕ್ ಖಾತೆಯಲ್ಲಿ ವಂಚನೆ ಆಗಿರುವುದು ಬೆಳಕಿಗೆ ಬಂದಿದೆ.

ಬಾಗಲಕೋಟೆ ಜಿಲ್ಲಾ ಪ್ರವಾಸೋದ್ಯಮ ಇಲಾಖೆಯಲ್ಲಿ 2,47,73,999 ರೂ. ವಂಚನೆಯಾಗಿದ್ದು, ಬಾಗಲಕೋಟೆ ಐಡಿಬಿಐ ಬ್ಯಾಂಕ್ ಖಾತೆಗಳ ಮೂಲಕ ಹಣ ವಿವಿಧ ಖಾತೆಗೆ ಅಕ್ರಮವಾಗಿ ವರ್ಗಾವಣೆಯಾಗಿದೆ. ಅಕ್ರಮ ಬೆಳಕಿಗೆ ಬರುತ್ತಿದ್ದಂತೆ ಜುಲೈ 11 ರಂದು ಪ್ರವಾಸೋದ್ಯಮ ಇಲಾಖೆ ಅಧಿಕಾರಿ ಗೋಪಾಲ ಹಿತ್ತಲಮನಿ, ಬ್ಯಾಂಕ್ ಮ್ಯಾನೇಜರ್ ಹಾಗೂ ಸಿಬ್ಬಂದಿ ವಿರುದ್ಧ ಬಾಗಲಕೋಟೆ ಸಿಇಎನ್ ಠಾಣೆಯಲ್ಲಿ ದೂರು ನೀಡಿದ್ದು ಪೊಲೀಸರು ಅಕ್ರಮ ವ್ಯವಹಾರಗಳ ಬಗ್ಗೆ ತನಿಖೆ ಆರಂಭಿಸಿದ್ದಾರೆ.

ವಂಚನೆ ಹೇಗೆ: ಜಿಲ್ಲಾ ಪ್ರವಾಸೋದ್ಯಮ ಇಲಾಖೆಗೆ ಸಂಬಂಧಿಸಿದಂತೆ ಒಟ್ಟು ಮೂರು ಖಾತೆಗಳನ್ನು ಬಾಗಲಕೋಟೆ ಐಡಿಬಿಐ ಬ್ಯಾಂಕ್‌ನಲ್ಲಿ ನಿರ್ವಹಣೆ ಮಾಡಲಾಗುತ್ತಿದ್ದು, ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಅಧ್ಯಕ್ಷರ (ಹೆಡ್) ಹೆಸರಲ್ಲಿ ಐಡಿಬಿಐ ಬ್ಯಾಂಕ್‌ನಲ್ಲಿ ಖಾತೆ ತೆರೆಯಲಾಗಿದೆ. ಮೂರು ಬ್ಯಾಂಕ್ ಖಾತೆಯಿಂದ ಕಳೆದ ಅಕ್ಟೋಬರ್ 28 ರಿಂದ ಈ ಫೆಬ್ರವರಿ 22 ರವರೆಗೆ ವಿವಿಧ ಖಾತೆಗಳಿಗೆ ಹಣ ವರ್ಗಾವಣೆಯಾಗಿದೆ.

ಯಾವ ಖಾತೆಯಿಂದ ಎಷ್ಟು: 107110400160063 ಖಾತೆ ಮೂಲಕ 1,35,96,500 ರೂ., 1071104000165228 ಮೂಲಕ 1,01,33,750 ರೂ., ಮೂರನೇ ಖಾತೆ 1071104000165501 ಯಿಂದ 10,43,749 ರೂ. ಹಣ ವರ್ಗಾವಣೆಯಾಗಿದೆ. ಒಂದು ಖಾತೆಯಿಂದ 28 ಬಾರಿ, ಮತ್ತೊಂದು ಖಾತೆಯಿಂದ 25 ಬಾರಿ, ಮೂರನೇ ಖಾತೆಯಿಂದ ಒಂದು ಬಾರಿ ಸೇರಿ ಒಟ್ಟು 54 ಬಾರಿ ಹಣ ವರ್ಗಾವಣೆಯಾಗಿದೆ.

ಪ್ರವಾಸೋದ್ಯಮ ಇಲಾಖೆ ಅನುಮತಿಯಿಲ್ಲದೆ, ಅಧಿಕಾರಿಗಳಿಗೆ ಗೊತ್ತಿಲ್ಲದಂತೆ ಇಲಾಖೆಗೆ ಸಂಬಂಧಿಸಿದ ಹಣವನ್ನು ಆರೋಪಿಗಳು ತಮಗೆ ಬೇಕಾದ ರೀತಿಯಲ್ಲಿ ವರ್ಗಾವಣೆ ಮಾಡಿದ್ದಾರೆ. ಇಲಾಖೆಯ ಹಣ ತೆಗೆದುಕೊಂಡು ಸರಕಾರಕ್ಕೆ ಮೋಸ ಮಾಡಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡಿದ ಬಾಗಲಕೋಟೆ ಎಸ್‌ಪಿ ಅಮರನಾಥ ರೆಡ್ಡಿ, ಪ್ರವಾಸೋದ್ಯಮ ಇಲಾಖೆಯ ಖಾತೆಯಿಂದ ನಿರ್ಮಿತಿ ಕೇಂದ್ರ, ಸಮಾಜ ಕಲ್ಯಾಣ ಇಲಾಖೆಗೂ ದುಡ್ಡು ಹೋಗಿದೆ. ಹಣ ವರ್ಗಾವಣೆ ಬಗ್ಗೆ ಐಡಿಬಿಐ ಬ್ಯಾಂಕ್ ಬಳಿಯೂ ದಾಖಲೆ ಇಲ್ಲ, ಯಾರು ದುರುಪಯೋಗ ಪಡಿಸಿಕೊಂಡಿದ್ದಾರೆ ಎನ್ನುವುದು ತನಿಖೆ ನಂತರ ಗೊತ್ತಾಗಲಿದೆ. ಒಂದು ತಂಡ ರಚಿಸಿ ತನಿಖೆ ನಡೆಸಿದ್ದೇವೆ. ದಾಖಲೆ ಸಂಗ್ರಹಣೆ ಬಳಿಕ ಸತ್ಯಾಸತ್ಯತೆ ಗೊತ್ತಾಗಲಿದೆ.

ಬ್ಯಾಂಕ್‌ನವರಿಗೆ ನೋಟಿಸ್ ನೀಡಲಾಗಿದ್ದು, ಎಷ್ಟು ಖಾತೆಗಳಿಗೆ ಹೋಗಿದೆ ಎನ್ನುವುದರ ಮಾಹಿತಿ ಕೇಳಿದ್ದೇವೆ. ಬೇರೆ ಬೇರೆ ಇಲಾಖೆಗಳ ಖಾತೆಗಳ ಬಗ್ಗೆಯೂ ಪರಿಶೀಲನೆ ಮಾಡಲಾಗುವುದು. ಯಾರೇದರೂ ದೂರು ನೀಡಿದರೆ ಖಂಡಿತ ತನಿಖೆ ನಡೆಸುತ್ತೇವೆ. ಪ್ರವಾಸೋದ್ಯಮ ಇಲಾಖೆಯಲ್ಲಿ 2021ರಿಂದ ಇಲ್ಲಿಯವರೆಗೂ ಬಂದ ಡಿಡಿಗಳ ಬಳಿಯೂ ಮಾಹಿತಿ ಪಡೆಯಲಿದ್ದೇವೆ. ಬ್ಯಾಂಕ್‌ನಿಂದ ವಿವರಣೆ ಬಂದ ಬಂದ ಮೇಲೆ ವೈಯಕ್ತಿಕವಾಗಿಯೂ ನೋಟಿಸ್ ನೀಡಲಿದ್ದೇವೆ. ಬೇರೆ ಖಾತೆಗಳಿಗೆ ಹೋಗಿದೆಯೋ, ಬೇರೆ ಇಲಾಖೆ ಖಾತೆಗಳಿಗೆ ಹೋಗಿದೆಯೋ ಎಂಬುದನ್ನೂ ಪರಿಶೀಲನೆ ಮಾಡುತ್ತೇವೆ ಎಂದಿದ್ದಾರೆ.

ಮಲಬಾರ್ ಗೋಲ್ಡ್ & ಡೈಮಂಡ್ಸ್‌ನಲ್ಲಿ ‘ಹೆರಿಟೇಜ್ ಪೋಲ್ಕಿ ಜ್ಯುವೆಲರಿ ಶೋ’



ಮೈಸೂರಿನ ಮಲಬಾರ್ ಗೋಲ್ಡ್ & ಡೈಮಂಡ್ಸ್ ನಲ್ಲಿ ಹೆರಿಟೇಜ್ ಪೋಲ್ಕಿ ಜ್ಯುವೆಲ್ಲರಿ ಶೋ, ಚಿನ್ನ, ವಜ್ರ ಮತ್ತು ಅಮೂಲ್ಯ ರತ್ನದ ಆಭರಣಗಳ ವಿಶೇಷ ಪ್ರದರ್ಶನ ಮತ್ತು ಮಾರಾಟವನ್ನು ಶ್ರೀಮತಿ ನಗ್ಮಾ ಖಾನ್ ಮತ್ತು ದಿವ್ಯಶ್ರೀ ಬಾಬು ಅನಾವರಣಗೊಳಿಸಿದರು.

ಮೈಸೂರು, ಜು. 13– ಮೈಸೂರಿನ ಬಿ.ಎನ್.ರಸ್ತೆಯಲ್ಲಿರುವ ಮಲಬಾರ್ ಗೋಲ್ಡ್ & ಡೈಮಂಡ್ಸ್‌ನಲ್ಲಿ ಹೆರಿಟೇಜ್ ಪೋಲ್ಕಿ ಜ್ಯುವೆಲ್ಲರಿ ಶೋ, ಚಿನ್ನ, ವಜ್ರ ಮತ್ತು ಅಮೂಲ್ಯ ರತ್ನದ ಆಭರಣಗಳ ವಿಶೇಷ ಪ್ರದರ್ಶನ ಮತ್ತು ಮಾರಾಟವನ್ನು ಶ್ರೀಮತಿ ನಗ್ಮಾ ಖಾನ್ ಮತ್ತು ದಿವ್ಯಶ್ರೀ ಬಾಬು ಅನಾವರಣಗೊಳಿಸಿದರು. ಪಿ.ಶರಫುದ್ದೀನ್ ದಕ್ಷಿಣ ವಲಯದ ಮುಖ್ಯಸ್ಥರು, ಶೋ ರೂಂ ಮುಖ್ಯಸ್ಥರು, ಫಸಲ್ ರೆಹಮಾನ್, ಸಹಾಯಕ ಶೋರೂಂ ಮುಖ್ಯಸ್ಥರು, ಇತರ ನಿರ್ವಹಣಾ ಸದಸ್ಯರು ಉಪಸ್ಥಿತರಿದ್ದರು. ಜುಲೈ 13ರಿಂದ ಜುಲೈ 21ರವರೆಗೆ ಹೆರಿಟೇಜ್ ಪೋಲ್ಕಿ ಆಭರಣ ಪ್ರದರ್ಶನವಿದೆ.

ಬೆಳಗಾವಿಯಲ್ಲಿ ಮೈಸೂರು ಮಹಿಳೆ ಸಂಶಯಾಸ್ಪದ ಸಾವು

ಕೊಲೆ ಶಂಕೆ; ಪತಿ, ಅತ್ತೆ–ಮಾವನ ಬಂಧನ

ಮೈಸೂರು,ಜು.13(ಆರ್‌ಕೆ)– ಮೈಸೂರು ಮಹಿಳೆಯೊಬ್ಬರು ಬೆಳಗಾವಿಯಲ್ಲಿ ಸಂಶಯಾಸ್ಪದ ರೀತಿ ಸಾವನ್ನಪ್ಪಿದ್ದಾರೆ. ನೇಣು ಬಿಗಿದ ಸ್ಥಿತಿಯಲ್ಲಿ ಮಹಿಳೆ ಶವ ಪತ್ತೆಯಾಗಿದ್ದು, ಕೊಲೆ ಶಂಕೆ ವ್ಯಕ್ತವಾಗಿದೆ.

ಮೈಸೂರಿನ ಕುಂಬಾರಕೊಪ್ಪಲು ನಿವಾಸಿ ಮಂಜುಳಾ ಅಲಿಯಾಸ್ ನಯನ(22) ಸಾವನ್ನಪ್ಪಿದ ಮಹಿಳೆ. ಕಳೆದ ಒಂದೂವರೆ ವರ್ಷದ ಹಿಂದೆ ಬೆಳಗಾವಿ ಜಿಲ್ಲೆ ಮಚ್ಚೆ ಗ್ರಾಮದ ಬೋರೇಶ್ ಅವರನ್ನು ಪ್ರೀತಿಸಿ ಮದುವೆಯಾಗಿದ್ದ ಮಂಜುಳಾ, ಇನ್‌ಸ್ಟಾಗ್ರಾಂ, ಫೇಸ್‌ಬುಕ್‌ನಲ್ಲಿ ಸಕ್ರಿಯವಾಗಿದ್ದರು.

ಹಾಗೆಯೇ ಸಾಮಾಜಿಕ ಜಾಲತಾಣದಿಂದ ಪರಿಚಯವಾಗಿದ್ದ ಬೋರೇಶ್‌ನೊಂದಿಗೆ ಸಂಪರ್ಕದಲ್ಲಿದ್ದ ಆಕೆ, ನಂತರ ಮದುವೆಯಾಗಿದ್ದರು. ರೀಲ್ಸ್ ಮಾಡುವ ವಿಚಾರದಲ್ಲಿ ಕೆಲ ಸಮಯ ದಂಪತಿಗಳಿಬ್ಬರ ನಡುವೆ ವೈಮನಸ್ಸು ಉಂಟಾಗಿತ್ತು.

ಕುಟುಂಬದ ಹಿರಿಯರು ಬುದ್ಧಿವಾದ ಹೇಳಿ ಒಂದುಗೂಡಿಸಿದ್ದರಿಂದ ಬೆಳಗಾವಿಯ ಮಚ್ಚೆ ಗ್ರಾಮದ ಗಂಡನ ಮನೆಯಲ್ಲಿ ವಾಸವಾಗಿದ್ದ ಮಂಜುಳಾ ದೇಹ, ಶುಕ್ರವಾರ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ. ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ತೆರಳಿದ ಬೆಳಗಾವಿ ಗ್ರಾಮಾಂತರ ಠಾಣೆ ಪೊಲೀಸರು, ಮಹಜರು ನಡೆಸಿ ಮೃತದೇಹವನ್ನು ಸಾರ್ವಜನಿಕ ಆಸ್ಪತ್ರೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ಬಳಿಕ ಶುಕ್ರವಾರ ಸಂಜೆ ವಾರಸುದಾರರಿಗೆ ಒಪ್ಪಿಸಿದರು.



ಬೋರೇಶ್ ಮತ್ತು ಮಂಜುಳಾ.

ಸ್ಥಳಕ್ಕೆ ಧಾವಿಸಿದ ಮಂಜುಳಾ ಪೋಷಕರು ಹಾಗೂ ಸಂಬಂಧಿಕರು, ಆಕೆ ಆತ್ಮಹತ್ಯೆ ಮಾಡಿಕೊಂಡಿಲ್ಲ, ಪತಿ ಬೋರೇಶ್, ಅತ್ತೆ ಕಮಲಮ್ಮ ಹಾಗೂ ಮಾವ ಬಾಳಪ್ಪ ವರದಕ್ಷಿಣೆ ಕಿರುಕುಳ ನೀಡಿ ಹೊಡೆದು ಕೊಲೆ ಮಾಡಿ ನೇಣು ಹಾಕಿದ್ದಾರೆ ಎಂದು ಆರೋಪಿಸಿ, ಲಿಖಿತ ದೂರು ನೀಡಿದ್ದಾರೆ.

ಅದರನ್ವಯ ಕೊಲೆ, ವರದಕ್ಷಿಣೆ ಕಿರುಕುಳದಡಿ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಮೂವರನ್ನೂ ಬಂಧಿಸಿದ್ದಾರೆ. 3 ತಿಂಗಳ ಗರ್ಭಿಣಿಯಾಗಿದ್ದ ಮಂಜುಳಾ ದೇಹವನ್ನು ಇಂದು ಬೆಳಗ್ಗೆ ಮೈಸೂರಿಗೆ ತಂದು ಅಂತ್ಯಕ್ರಿಯೆ ನಡೆಸಲಾಯಿತು ಎಂದು ಕುಟುಂಬದವರು ತಿಳಿಸಿದ್ದಾರೆ.

ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ದುಂಡು ಮೇಜಿನ ಸಭೆ

ಮುಡಾ ಹಗರಣ: ಸಿಎಂ ಸಿದ್ದರಾಮಯ್ಯ ಪರ ನಿಲ್ಲಲು ನಿರ್ಧಾರ



ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ವತಿಯಿಂದ ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ವಿವಿಧ ಸಮುದಾಯದ ಮುಖಂಡರು ಮತ್ತು ಪ್ರಗತಿಪರ ಚಿಂತಕರ ದುಂಡು ಮೇಜಿನ ಸಭೆ ನಡೆಸಲಾಯಿತು.

ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳು

● ಸಿದ್ದರಾಮಯ್ಯ ಅವರನ್ನು ಶಾಶ್ವತ ಮುಖ್ಯಮಂತ್ರಿ ಎಂದು ನಿರ್ಧಾರ ಮಾಡಬೇಕು. ● ಗಾಂಧಿ ಪ್ರತಿಮೆ ಮುಂದೆ ದಾಖಲೆ ಸಮೇತ ಬಿಜೆಪಿ ನಾಯಕರ ಬಹಿರಂಗ ಚರ್ಚೆಗೆ ಆಹ್ವಾನ ● ಕಳೆದ 40 ವರ್ಷಗಳಿಂದ ರಾಜ್ಯದಲ್ಲಿ ಮುಖ್ಯಮಂತ್ರಿಯಾಗಿದ್ದವರ ಆಸ್ತಿ ವಿವರದ ಬಗ್ಗೆ ಶ್ವೇತಪತ್ರ ಹೊರಡಿಸಬೇಕು. ● ಆಗಸ್ಟ್ 15ರಂದು ಬೆಳಗ್ಗೆ 8ರಿಂದ ರಾತ್ರಿ 8ರವರೆಗೆ ನಗರದ ಅಂಬೇಡ್ಕರ್ ಪ್ರತಿಮೆ ಮುಂದೆ ಮೌನ ಪ್ರತಿಭಟನೆ ನಡೆಸುವುದು. ● ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮಗಳು ಬದಲಾಗಬೇಕು. ● ಮುಡಾದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳನ್ನು ಬೇರೆ ಇಲಾಖೆಗೆ ವರ್ಗಾವಣೆ ಮಾಡಬೇಕು. ● 50:50 ಅನುಪಾತದಲ್ಲಿ ನೋಂದಣಿ ಮಾಡಿಸಿಕೊಂಡಿರುವುದನ್ನು ರದ್ದುಗೊಳಿಸಬೇಕು. ● ವಾರದೊಳಗೆ ‘ಕ್ಲೀನ್ ಮುಡಾ’ ದೊಣ್ಣೆ ಚಳುವಳಿ ಸಾಂಕೇತಿಕವಾಗಿ ಪ್ರತಿಭಟನೆ ಮಾಡಿ ರಾಜ್ಯಕ್ಕೆ ಸಂದೇಶ ರವಾನಿಸಬೇಕು.

ಮೈಸೂರು,ಜು.13(ಜಿಎ)–ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಬಿಜೆಪಿ ಹುನ್ನಾರ ನಡೆಸಿದೆ ಎಂದು ಆರೋಪಿಸಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ವತಿಯಿಂದ ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ವಿವಿಧ ಸಮುದಾಯದ ಮುಖಂಡರು ಮತ್ತು ಪ್ರಗತಿಪರ ಚಿಂತಕರ ದುಂಡು ಮೇಜಿನ ಸಭೆ ನಡೆಸಲಾಯಿತು.

ರಾಜ್ಯದಲ್ಲಿ ಆಡಳಿತಾರೂಢ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ವಿರೋಧಿ ಅಲೆ ಸೃಷ್ಟಿಸುವ ಪ್ರಯತ್ನ ಮಾಡುತ್ತಿದ್ದು, ಸಿದ್ದರಾಮಯ್ಯ ಅವರ ವಿರುದ್ಧವೂ ಷಡ್ಯಂತ್ರ ನಡೆಸುತ್ತಿದೆ. ಇದರ ವಿರುದ್ಧ ನಾವೆಲ್ಲ ಹೋರಾಟ ಮಾಡಬೇಕಿದೆ ಎಂದು ಸಭೆಯಲ್ಲಿ ತೀರ್ಮಾನಿಸಿ, ಕೆಲವು ನಿರ್ಣಯ ಕೈಗೊಂಡರು. ಸಭೆಯಲ್ಲಿ ಹಿಂದುಳಿದ ವರ್ಗದ ಜಾಗೃತ ವೇದಿಕೆ ಅಧ್ಯಕ್ಷ ಕೆ.ಶಿವರಾಮು ಮಾತನಾಡಿ, ಸಿಎಂ ಸಿದ್ದರಾಮಯ್ಯ ಅವರ ಏಳಿಗೆ ಸಹಿಸಲಾರದೆ ಸಿಎಂ ಕುರ್ಚಿಯಿಂದ ಅವರನ್ನು ಕೆಳಗಿಸಲು ಬಿಜೆಪಿ ಹುನ್ನಾರ ಮಾಡುತ್ತಿದೆ. ಸಿದ್ದರಾಮಯ್ಯ ಹಿಂದುಳಿದ ನಾಯಕರಾಗಿದ್ದು ಅವರು ಎರಡನೇ ಬಾರಿ ಮುಖ್ಯಮಂತ್ರಿಯಾಗಿರುವ ಕಾರಣ ಸಹಿಸಿಕೊಳ್ಳಲಾಗದೆ ಅವರ ಮೇಲೆ ಇಲ್ಲಸಲ್ಲದ ಆರೋಪವನ್ನು ಮಾಡುತ್ತಿದ್ದಾರೆ. ಇದೆಲ್ಲ ಸತ್ಯಕ್ಕೆ ದೂರವಾದದ್ದು ಎಂದರು.

ಸಿಎಂ ಪತ್ನಿ ಶ್ರೀಮತಿ ಪಾರ್ವತಿ ಅವರಿಗೆ ಮುಡಾ ನಿವೇಶನ ಹಂಚಿಕೆ ಮಾಡಿರುವುದು ಕಾನೂನುಬದ್ಧವಾಗಿದೆ. ಬಿಜೆಪಿ, ಜೆಡಿಎಸ್ ಸೇರಿ ಆಡಳಿತಾರೂಢ ಕಾಂಗ್ರೆಸ್ ಪಕ್ಷದ ಮೇಲೆ ವಿನಾಕಾರಣ ಆರೋಪ ಮಾಡುತ್ತಿದೆ. ಹಿಂದುಳಿದ, ದಲಿತ, ಅಲ್ಪಸಂಖ್ಯಾತರ ಸಮುದಾಯಗಳ ಅಭಿವೃದ್ಧಿಗೆ ಬೆನ್ನೆಲುಬಾಗಿ ನಿಂತಿರುವ ಸಿದ್ದರಾಮಯ್ಯ ಅವರನ್ನು ರಾಜಕೀಯವಾಗಿ ಹತ್ತಿಕ್ಕುವ ಪ್ರಯತ್ನ ಮಾಡುತ್ತಿದ್ದಾರೆ. ಹಾಗಾಗಿ ನಾವೆಲ್ಲ ಇಂತಹ ಸಮಯದಲ್ಲಿ ಸಿದ್ದರಾಮಯ್ಯ ಅವರ ಪರವಾಗಿ ನಿಂತು ಬಿಜೆಪಿ ವಿರುದ್ಧ ಹೋರಾಟ ಮಾಡಬೇಕಿದೆ ಎಂದರು.

ಮುಡಾ ಹಗರಣದ ನಿಜವಾದ ಪಿತಾಮಹ ಬಿ.ವೈ.ವಿಜಯೇಂದ್ರ ಮತ್ತು ಅವರ ತಂದೆ ಯಡಿಯೂರಪ್ಪ. ಇದೆಲ್ಲಾ ನಡೆದಿರುವುದು ಬಿಜೆಪಿ ಕಾಲದಲ್ಲಿ. ಕೆಎಎಸ್ ಕಿರಿಯ ಶ್ರೇಣಿಯ ಅಧಿಕಾರಿಯಾಗಿದ್ದ ನಟೇಶ್ ಅವರನ್ನ ಮುಡಾ ಆಯುಕ್ತರನ್ನಾಗಿ ನೇಮಕ ಮಾಡಿದ ಪರಿಣಾಮ ಅವರಿದ್ದ ಸಂದರ್ಭದಲ್ಲಿ ಸಾಕಷ್ಟು ಅಕ್ರಮಗಳು ನಡೆದವು. ಸಿಎಂ ಸಿದ್ದರಾಮಯ್ಯ ಅವರ ಧರ್ಮಪತ್ನಿಯ ಹೆಸರಿಗೆ ಕಾನೂನು ಬದ್ಧವಾಗಿ ನಿವೇಶನ ಹಂಚಿಕೆ ಮಾಡಿದ್ದು ಅವರ ಕಾಲದಲ್ಲೇ. ಈಗ ಸಿದ್ದರಾಮಯ್ಯ ಅವರ ಏಳಿಗೆ ಸಹಿಸಲಾರದೆ ಸಿಎಂ ಕುರ್ಚಿಯಿಂದ ಕೆಳಗಿಸುವ ಹುನ್ನಾರವನ್ನು ಬಿಜೆಪಿ ಮಾಡುತ್ತಿದೆ. ಇದೆಲ್ಲದರ ವಿರುದ್ಧ ನಾವು ಹೋರಾಟದ ರೂಪುರೇಷೆ ತಯಾರಿಸಲು ಇಂದು ಸಭೆ ಕರೆಯಲಾಗಿದೆ ಎಂದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯ್‌ಕುಮಾರ್ ಮಾತನಾಡಿ, ಸಿದ್ದರಾಮಯ್ಯ ಅವರ ಸುದೀರ್ಘ 40 ವರ್ಷಗಳ ರಾಜಕೀಯ ಜೀವನದ ಬಗ್ಗೆ ಎಲ್ಲರಿಗೂ ಗೌರವವಿದೆ. ಅವರ ಈ ಅವಧಿ ಪೂರ್ಣಗೊಳ್ಳುವ ಸಂದರ್ಭಕ್ಕೆ 80 ವರ್ಷ ಪೂರೈಸಲಿದ್ದಾರೆ. ಮತ್ತೊಂದೆಡೆ ನಾನು ಮುಂದೆ ಚುನಾವಣಾ ರಾಜಕಾರಣದಲ್ಲಿ ಇರುವುದಿಲ್ಲ ಎಂದು ಸಾರ್ವಜನಿಕವಾಗಿ ಹೇಳಿಕೆ ನೀಡಿದ್ದಾರೆ. ಈ ನಡುವೇ ಬಿಜೆಪಿಯವರು ಅವರ ವಿರುದ್ಧ ಸತ್ಯಕ್ಕೆ ದೂರವಾದ ಆರೋಪ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಸಿದ್ದರಾಮಯ್ಯ ಅವರೊಟ್ಟಿಗೆ ನಾವು ಇರೋಣ ಎಂದು ಕರೆ ನೀಡಿದರು. ಸಭೆಯಲ್ಲಿ ಪ್ರಗತಿಪರ ಚಿಂತಕ ಪ್ರೊ.ಕೆ.ಎಸ್.ಭಗವಾನ್, ರಂಗಾಯಣ ಮಾಜಿ ಅಧ್ಯಕ್ಷ ಜನ್ನಿ, ದಸಂಸ ಸಂಚಾಲಕ ನಾರಾಯಣ್, ಯೋಗೇಶ್ ಉಪ್ಪಾರ್, ರವಿನಂದನ್, ಲೋಕೇಶ್ ಮಾದಾಪುರ ಮತ್ತಿತರರು ಉಪಸ್ಥಿತರಿದ್ದರು.

ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಮಹಿಳಾ ಮೋರ್ಚಾ ಪದಾಧಿಕಾರಿಗಳ ಸಭೆ




ಚಾಮುಂಡೇಶ್ವರಿ ಕ್ಷೇತ್ರ ಬಿಜೆಪಿ ಮಹಿಳಾ ಮೋರ್ಚಾ ಪದಾಧಿಕಾರಿಗಳ ಸಭೆ ಶಾರದಾದೇವಿನಗರದಲ್ಲಿ ನಡೆಯಿತು. ಸಭೆಯಲ್ಲಿ ಮೈಸೂರು ನಗರ ಬಿಜೆಪಿ ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ನಗರ ಮಹಿಳಾ ಮೋರ್ಚಾ ಅಧ್ಯಕ್ಷೆ ರೇಣುಕಾರಾಜು, ಚಂದ್ರಕಲಾ, ಚಾಮುಂಡೇಶ್ವರಿ ಕ್ಷೇತ್ರ ಅಧ್ಯಕ್ಷ ರಾಕೇಶ್‌ಭಟ್, ಮಹಿಳಾ ಮೋರ್ಚಾ ಅಧ್ಯಕ್ಷೆ ಲಕ್ಷ್ಮಿ, ಮಂಡಲ ಉಪಾಧ್ಯಕ್ಷರಾದ ಎಚ್.ಜಿ.ರಾಜಮಣಿ, ಆರ್.ಸೋಮಶೇಖರ್, ಮಂಜುಳಾ, ಪುಟ್ಟಮಣಿ, ಹೇಮಲತಾ, ರಮಬಾಯಿ, ಬಿ.ಎಂ.ಲೀಲಾವತಿ ವೆಂಕಟೇಶ್, ಪದ್ಮಾವತಿ, ಶ್ರುತಿ, ರಾಧಾ ಮುತಲೀಕ್, ಸುಮಾ ಪ್ರಾಣೇಶ್, ರೇಖಾನಾಗರಾಜ್, ಪದ್ಮ ಪ್ರಕಾಶ್, ಸುಮತಿ, ಗಾಯಿತ್ರಿ, ಸೋಮವತಿ, ರಜಾತಿ, ಆಶಾ, ಶ್ರೀವಿದ್ಯಾ, ನಿರ್ಮಲ, ಮಮತ, ಪಂಕಜ, ವಸಂತ, ಜ್ಯೋತಿ, ಮಹಾಲಕ್ಷ್ಮಿ ಮುಂತಾದವರು ಉಪಸ್ಥಿತರಿದ್ದರು.

ವಿವಿಧ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನ

ಮೈಸೂರು, ಜು.13–2024–25ನೇ ಸಾಲಿನ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ ಡಿಪ್ಲೊಮಾ ಪ್ರವೇಶಕ್ಕಾಗಿ ವಿವಿಧ ಕೋರ್ಸ್‌ಗಳಿಗೆ ಪ್ರವೇಶಾತಿಯನ್ನು ಪ್ರಾರಂಭ ಮಾಡಲಾಗಿದ್ದು, ಎಸ್.ಎಸ್.ಎಲ್.ಸಿ ಪಾಸಾದ ಅರ್ಹ ಅಭ್ಯರ್ಥಿಗಳಿಂದ ಆಫ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಎಸ್.ಎಸ್.ಎಲ್.ಸಿ ಪಾಸಾದ ಅಭ್ಯರ್ಥಿಗಳಿಗೆ ಡಿಪ್ಲೊಮಾ ಇನ್ ಟೂಲ್ ಅಂಡ್ ಡೈ ಮೇಕಿಂಗ್, ಡಿಪ್ಲೊಮಾ ಇನ್ ಪ್ರಿಸಿಷನ್ ಮ್ಯಾನುಫ್ಯಾಕ್ಚರಿಂಗ್ ಕೋರ್ಸ್‌ಗಳು ಲಭ್ಯವಿದ್ದು, ಎರಡು ವರ್ಷ ಹಾಗೂ ಕಡ್ಡಾಯ ಒಂದು ವರ್ಷದ ಇಂಟರ್ನ್‌ಷಿಪ್ ತರಬೇತಿಯನ್ನು ನೀಡಲಾಗುವುದು. ಜುಲೈ 15ರಿಂದ 31ರವರೆಗೆ ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಬೆಳಗೊಳ ಕೈಗಾರಿಕಾ ಪ್ರದೇಶದ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ದೂ.ಸಂ: 821–2582750 ಹಾಗೂ ಸಹಾಯವಾಣಿ: 155267, ಮೊ.ನಂ: 9980557205, 8660139259, 9141630315, 9880068986 ಅಥವಾ ವೆಬ್‌ಸೈಟ್ https://gttc.karnataka.gov.in ಹಾಗೂ http://cetonline.karnataka.gov.in/kea ಅನ್ನು ಸಂರ್ಕಿಸಬಹುದು ಎಂದು ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

14.07.2024 ಭಾನುವಾರ, ಮಳೆ ನಕ್ಷತ್ರ: ಪುನರ್ವಸು 6.07.2024ರಿಂದ 19.07.2024 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಚಿತ್ತ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಆಲ್ಕೋಹಾಲ್‌ನಿಂದ ಉಂಟಾಗುವ ಯಕೃತ್ತಿನ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಅಜ್ಜನ ಮನೆ ಕಲಾ ಪ್ರಪಂಚ :** ಕಿಶೋರ ಗಾಯನ ನಮನ, ಗಾಯನ – ಸುಘೋಷ್, ಪ್ರಣವ್ ಅಡಿಗ, ಕು. ಅಂಜನಾ ಮಠಮ್, ಶ್ರೀವತ್ಸ–ಪಿಟೀಲು, ಅತ್ರಿ ಕೌಶಿಕ್–ಮೃದಂಗ, ಸ್ಥಳ: ಶ್ರೀವಾಸುದೇವಾಚಾರ್ಯರ ನಿವಾಸ, ಅಗ್ರಹಾರ, ಬೆಳಗ್ಗೆ 9.30ಕ್ಕೆ.

■ **ಜೆಎಸ್‌ಎಸ್ ಮಹಾ ವಿದ್ಯಾಪೀಠ, ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್:** ಗುಜರಾತ್ ಕರಕುಶಲ ಉತ್ಸವ–2024, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10ರಿಂದ.

■ **ಹರಿವು ಬುಕ್ಸ್:** ಡಾ.ಟಿ.ಆರ್.ಅನಂತರಾಮು ಅವರು ಸಂಪಾದಿಸಿರುವ ಕರ್ನಾಟಕದಲ್ಲಿ ಸ್ಮಾರ್ತ ಬ್ರಾಹ್ಮಣರು: ನೆಲೆ ಹಿನ್ನೆಲೆ ಪುಸ್ತಕ ಲೋಕಾರ್ಪಣೆ ಸಮಾರಂಭ, ಕೃತಿ ಲೋಕಾರ್ಪಣೆ: ಹಿರಿಯ ಸಂಸ್ಕೃತ ವಿದ್ವಾಂಸರಾದ ಡಾ.ಎಚ್.ವಿ.ನಾಗರಾಜರಾವ್, ಅಧ್ಯಕ್ಷತೆ: ಹಿರಿಯ ವಿದ್ವಾಂಸರು, ಪಂಪ ಪ್ರಶಸ್ತಿ ಪುರಸ್ಕೃತರಾದ ಡಾ. ಟಿ.ವಿ.ವೆಂಕಟಾಚಲಶಾಸ್ತ್ರಿ, ಮುಖ್ಯ ಅತಿಥಿಗಳು: ನಿವೃತ್ತ ಕನ್ನಡ ಪ್ರಾಧ್ಯಾಪಕ ಡಾ.ಎನ್.ಎಸ್.ತಾರಾನಾಥ, ಉಪಸ್ಥಿತರು: ಕರ್ನಾಟಕದಲ್ಲಿ ಸ್ಮಾರ್ತ ಬ್ರಾಹ್ಮಣರು: ನೆಲೆ ಹಿನ್ನೆಲೆ ಪುಸ್ತಕದ ಸಂಪಾದಕ ಡಾ. ಟಿ.ಆರ್. ಅನಂತರಾಮು, ಸ್ಥಳ: ಕುವೆಂಪುನಗರ, ಗಾನಭಾರತಿ ಸಂಗೀತ ಮತ್ತು ನೃತ್ಯ ಶಾಲೆ, ಬೆಳಗ್ಗೆ 10 ಗಂಟೆಗೆ

■ **ಸಹಾರ ಮಹಿಳಾ ಸ್ವ ಸಹಾಯ ಸಂಘ, ಸಹಾರ ಹ್ಯಾಂಡಿಕ್ರಾಫ್ಟ್, ಹ್ಯಾಂಡ್‌ಲೂಮ್ ಅಸೋಸಿಯೇಷನ್:** ಸಹಾರ ಆರ್ಟ್ ಅಂಡ್ ಕ್ರಾಫ್ಟ್ ಶಾಪಿಂಗ್ ಫೆಸ್ಟಿವಲ್–2024 ಪ್ರದರ್ಶನ ಮತ್ತು ಮಾರಾಟ, ಸ್ಥಳ: ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನ, ಹಳೇ ಜಿಲ್ಲಾಧಿಕಾರಿ ಕಚೇರಿ ಹಿಂಭಾಗ, ಬೆಳಗ್ಗೆ 10 ಗಂಟೆಯಿಂದ.

■ **ಜೆಎಸ್‌ಎಸ್ ವೈದ್ಯಕೀಯ ಕಾಲೇಜು ಕಿವಿ, ಮೂಗು, ಗಂಟಲು ವಿಭಾಗ :** ಲ್ಯಾರಿಂಗಾಲಜಿ ಸಮ್ಮೇಳನ, ಸ್ಥಳ: ಜೆಎಸ್‌ಎಸ್ ಆಸ್ಪತ್ರೆ ರಾಜೇಂದ್ರ ಶತಮಾನೋತ್ಸವ ಸಭಾಂಗಣ, ಬೆಳಗ್ಗೆ 10ಕ್ಕೆ

■ **ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಜಿಲ್ಲಾ ಘಟಕ :** ಮಾಜಿ ಸೈನಿಕರ ಪೂರ್ವಭಾವಿ ಸಭೆ, ಸ್ಥಳ : ವಿಜಯನಗರ 3ನೇ ಹಂತ 19ನೇ ಮೇನ್ ಬಿ ಬ್ಲಾಕ್, ಬೆಳಗ್ಗೆ 10ಕ್ಕೆ.

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್:** ಅಕ್ಯೂಪ್ರೆಶರ್, ಸುಜೋಕ್, ಅಕ್ಯು ಡಿಜಿಟಲ್ ಫಿಸಿಯೋಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: ಶ್ರೀ ಸಂಕಷ್ಟಹರ ಗಣಪತಿ ಸೇವಾ ಸಮಿತಿ ಆವರಣ, ಶ್ರೀರಾಂಪುರ 2ನೇ ಹಂತ, ಬೆಳಗ್ಗೆ 10.30ರಿಂದ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸುವರ್ಣ ಕರ್ನಾಟಕ ಕಾರ್ಮಿಕರ ವೇದಿಕೆ :** ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ : ಶ್ರೀದತ್ತ ವಿಜಯಾನಂದತೀರ್ಥ ಸ್ವಾಮೀಜಿ, ಉದ್ಘಾಟನೆ : ಸಂಸದ ಯದುವೀರ ಶ್ರೀಕಂಠದತ್ತ ಚಾಮರಾಜ ಒಡೆಯರ್, ಅಧ್ಯಕ್ಷತೆ : ಶಾಸಕ ಕೆ. ಹರೀಶ್‌ಗೌಡ, ಮುಖ್ಯ ಅತಿಥಿಗಳು : ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಆಯೂಬ್ ಖಾನ್, ಶಿವಪ್ರಸಾದ್, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ದತ್ತಪೀಠ, ಬೆಳಗ್ಗೆ 10.30ಕ್ಕೆ.

■ **ಜಾಗತಿಕ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕ:** ವಚನ ಸಂಗ್ರಹ ಪಿತಾಮಹ ಶರಣ ಡಾ.ಫಕೀರಪ್ಪ ಗುರುಬಸಪ್ಪ ಹಳಕಟ್ಟಿ ಅವರ ಜನ್ಮೋತ್ಸವ ಹಾಗೂ ವಚನ ಸಂಪುಟಗಳ ಶತಮಾನೋತ್ಸವ ಕಾರ್ಯಕ್ರಮ, ಸಾನ್ನಿಧ್ಯ: ಶ್ರೀ ಚಿದಾನಂದ ಸ್ವಾಮೀಜಿ, ಸಮ್ಮುಖ: ಸಿದ್ದಮಲ್ಲಸ್ವಾಮೀಜಿ, ಗುರುಶಾಂತ ಸ್ವಾಮೀಜಿ, ಮುಖ್ಯ ಅತಿಥಿಗಳು: ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಡಾ.ಸುದರ್ಶನ್, ಡಾ.ಎಂ.ಎಸ್. ಮದಭಾವಿ ಅವರಿಂದ ಉಪನ್ಯಾಸ, ಸ್ಥಳ: ಶ್ರೀಹೊಸಮಠದ ನಟರಾಜ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಶ್ರೀ ಬಸವೇಶ್ವರ ಬಳಗ :** ಬಸವ ಜಯಂತಿ, ವೈಎಂಎಂ ಮಲ್ಲಿಕಾರ್ಜುನಸ್ವಾಮಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ವಿಜಯ ಅವರಿಂದ ಉಪನ್ಯಾಸ, ಸನ್ಮಾನ : ನಿವೃತ್ತ ಇಂಜಿನಿಯರ್ ಬಿ.ಡಿ. ಪಂಚಾಕ್ಷರಿ ಶೆಟ್ಟಿ, ಅಧ್ಯಕ್ಷತೆ : ಬಸವ ಬಳಗದ ಅಧ್ಯಕ್ಷ ಡಾ.ಸಿ.ಶರತ್‌ಕುಮಾರ್, ವೈಷ್ಣವಿ ಭಜನಾ ಮಂಡಳಿ ಅವರಿಂದ ವಚನ ಗಾಯನ, ಸ್ಥಳ: ಹಿರಿಯ ನಾಗರಿಕ ಮಂಡಳಿ, ಜಯಲಕ್ಷ್ಮಿಪುರಂ, ಬೆಳಗ್ಗೆ 11ಕ್ಕೆ.

■ **ಮೈಸೂರು ವೈದ್ಯಕೀಯ ಕಾಲೇಜು ಅಲ್ಯೂಮ್ನಿ ಅಸೋಸಿಯೇಷನ್:** ವಿಶಿಷ್ಟ ಸೇವಾ ಪುರಸ್ಕಾರ ಸಮಾರಂಭ, ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಅಧ್ಯಕ್ಷತೆ: ಶಾಸಕ ಕೆ.ಹರೀಶ್‌ಗೌಡ, ಅತಿಥಿಗಳು: ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಸಂಸದ ಡಾ. ಸಿ.ಎನ್. ಮಂಜುನಾಥ್, ಶಾಸಕ ಡಾ.ಎನ್.ಟಿ.ಶ್ರೀನಿವಾಸ್, ಡಾ.ಎಂ.ಕೆ.ರಮೇಶ್, ಆದಿಚುಂಚನಗಿರಿ ವಿವಿ ಉಪಕುಲಪತಿ ಡಾ. ಎಂ.ಎ. ಶೇಖರ್, ನಿವೃತ್ತ ಕುಲಪತಿ ಡಾ. ಕಾಂತಾ, ಡಾ. ಕೆ.ಆರ್. ದಾಕ್ಷಾಯಿಣಿ, ಡಾ.ಸಿ.ಡಿ.ಶ್ರೀನಿವಾಸಮೂರ್ತಿ, ಡಾ.ಹೆಚ್.ಎನ್. ದಿನೇಶ್, ಡಾ. ಹೆಚ್.ಬಿ. ಶಶಿಧರ್, ಡಾ. ಸರ್ವೇಶ ರಾಜೇ ಅರಸ್, ಸ್ಥಳ: ಹೊಸ ಗ್ರಂಥಾಲಯ ಕಟ್ಟಡ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ರಂಗವಲ್ಲಿ ಹಾಗೂ ಮೈಸೂರು ಆರ್ಟ್ ಸೆಂಟರ್ :** ಪ್ರಸನ್ನ ಅವರ ‘ಇಂಡಿಯನ್ ಮೆಥಡ್ ಇನ್ ಆಕ್ಟಿಂಗ್’ ಪರಿಷ್ಕೃತ ಆವೃತ್ತಿಯ ಪುಸ್ತಕ ಬಿಡುಗಡೆ ಸಮಾರಂಭ, ಮುಖ್ಯ ಅತಿಥಿಗಳು : ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಕುಲಪತಿಗಳು ಪ್ರೊ. ನಾಗೇಶ್, ಹಿರಿಯ ಲೇಖಕ ಓ.ಎಲ್. ನಾಗಭೂಷಣ್, ಉಪಸ್ಥಿತರು : ಲೇಖಕ ಪ್ರಸನ್ನ, ಸ್ಥಳ: ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ, ಹಾರ್ಡ್ವಿಕ್ ಶಾಲೆ ಆವರಣ, ಸಂಜೆ 4ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಕಲಾಕೂಟ :** ಡಾ.ಯಲ್ಲಪ್ಪ ಕೆ.ಕೆ. ಪುರ ಅವರ ಬಿಸಿಲ ಬೆರಗು ಅಭಿನಂದನಾ ಕೃತಿ ಲೋಕಾರ್ಪಣೆ, ಉದ್ಘಾಟನೆ : ನಿವೃತ್ತ ಮುಖ್ಯ ಸಂಚಾರ ವ್ಯವಸ್ಥಾಪಕ ಶರಣ ಸಾರಂಗಮಠ ಹಂಪಯ್ಯ, ಕೃತಿ ಬಿಡುಗಡೆ : ಮಾಜಿ ಸಂಸದ ಡಾ. ಎಲ್. ಹನುಮಂತಯ್ಯ, ಕೃತಿ ಕುರಿತು : ವಿಶ್ರಾಂತ ಪ್ರಾಧ್ಯಾಪಕ ಡಾ. ಸಿ. ನಾಗಣ್ಣ, ಮುಖ್ಯ ಅತಿಥಿಗಳು: ಕವಿ ಡಾ. ಜಯಪ್ಪ ಹೊನ್ನಾಳಿ, ಅಧ್ಯಕ್ಷತೆ : ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಆಶಯ ನುಡಿ : ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್, ಉಪಸ್ಥಿತರು : ಸಾಹಿತಿ ಡಾ. ಯಲ್ಲಪ್ಪ ಕೆ.ಕೆ. ಪುರ, ಸ್ಥಳ: ಜಿಲ್ಲಾ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಸಂಜೆ 4.30ಕ್ಕೆ.

■ **ಶ್ರೀ ಕೃಷ್ಣ ಗಾನಸಭಾ :** ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್ 230ನೇ ಜಯಂತ್ಯುತ್ಸವ, ಮುಖ್ಯ ಅತಿಥಿಗಳು : ಕಪ್ಪಡಿ ಮಠಾಧಿಪತಿ ಶ್ರೀ ವರ್ಚಸ್ವಿ ಸಿದ್ದಲಿಂಗರಾಜೇ ಅರಸ್, ಅಧ್ಯಕ್ಷತೆ : ಶ್ರೀ ಕೃಷ್ಣಗಾನ ಸಭಾ ಅಧ್ಯಕ್ಷ ಬಿ.ಎಸ್. ಶ್ರೀಧರರಾಜೇ ಅರಸ್, ಸ್ಥಳ: ಗೋಕುಲಂ 3ನೇ ಹಂತದಲ್ಲಿರುವ ಆಳ್ವಾರ್ ಕಲಾಭವನ, ಶ್ರೀ ಕೃಷ್ಣ ದೇವಸ್ಥಾನ, ಸಂಜೆ 6ಕ್ಕೆ.

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್ :** ಶ್ರೀ ಮಹಾವಾರಾಹಿ ಗುಪ್ತ (ಆಷಾಢ) ನವರಾತ್ರಿ ಮಹೋತ್ಸವ, ಬೆಳಗ್ಗೆ 8.30 ರಿಂದ ಮಹಾಭಿಷೇಕ, ಸಪ್ತಶತಿ ಪಾರಾಯಣ, ಶ್ರೀಚಕ್ರಾರ್ಚನೆ, ನವಾವರಣ ಪೂಜಾ, ಸಂಜೆ 5.30ಕ್ಕೆ ಶತ್ರು ಸ್ತಂಭನಕಾರಿಣಿ ಶ್ರೀ ಬಗಳಾಮುಖಿ ಹೋಮ, ಶ್ರೀ ದಶವಾರಾಹಿ ಆವರಣಾಂಗ ಹೋಮ, ಶ್ರೀ ಲಘುವಾರಾಹಿ, ಶ್ರೀ ತಿರಸ್ಕರಣೀವಾರಾಹಿ, ಶ್ರೀ ಸ್ವಪ್ನವಾರಾಹಿ, ಶ್ರೀ ಧೂಮ್ರವಾರಾಹಿ, ಶ್ರೀ ಕಿರಾತವಾರಾಹಿ, ಶ್ರೀ ಅಶ್ವಾರೂಢವಾರಾಹಿ, ಶ್ರೀ ವಾರಾಹಿ, ಪರಮೇಶ್ವರಿ, ಶ್ರೀ ಶತ್ರುಸಂಹಾರ ವಾರಾಹಿ, ಶ್ರೀ ವನದುರ್ಗಾ ಹೋಮ, ಪೂರ್ಣಾಹುತಿ, ಕುಂಕುಮಾರ್ಚನೆ, ಬಲಿಹರಣ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಫೌಂಡೇಷನ್ ಆವರಣ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಸರ್ವಜಯಾನಂದ ಅವರಿಂದ ಶ್ರೀ ಶ್ರೀ ರಾಮಕೃಷ್ಣ ಚರಿತೆ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ನಟನ ರಂಗಶಾಲೆ :** ವಾರಾಂತ್ಯ ನಾಟಕ, ಸ್ಥಾವರವೂ ಜಂಗಮ ನಾಟಕ ಪ್ರದರ್ಶನ, ನಿರ್ದೇಶನ : ಮಂಡ್ಯ ರಮೇಶ್, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ

■ **ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ :** ಶ್ರೀ ಗಿರಿಜಾ ಕಲ್ಯಾಣ ಮಹೋತ್ಸವ, ಅಷ್ಟಮಿ ಭಾನುವಾರ ಬೆಳಗ್ಗೆ ನಾಕ ಬಲಿ ಹೊಳಲು ಸುತ್ತುವುದು, ಅವಭೃತ ತೀರ್ಥ ಸ್ನಾನ, ರಾತ್ರಿ 7ಕ್ಕೆ ಹೂವಿನ ಪಲ್ಲಕ್ಕಿ ಉತ್ಸವ, ಸ್ಥಳ: ಕೋಟೆ ತ್ರಿನೇಶ್ವರ ದೇವಸ್ಥಾನ, ಅರಮನೆ ಆವರಣ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನಿಮಾ ಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಪಿ.ಸುರಭಿ, ವ್ಯಾಖ್ಯಾನ: ಡಾ.ಹೆಚ್.ಎನ್.ಮಂಜುರಾಜ್, 6.50 ರೈತರಿಗೆ ಸಲಹೆ, 7.15 ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ವಿಕಾಸ ಅಕಾಡೆಮಿ, ಕಲಬುರ್ಗಿ, 8.30 ಕನ್ನಡ ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ ಕಾರ್ಯಕ್ರಮ: ‘ನೋವು ನಿವಾರಣೆಗಾಗಿ ಅಗ್ನಿಕರ್ಮ ಚಿಕಿತ್ಸೆ’ ಕುರಿತು ಮಂಡ್ಯ ಜಿಲ್ಲೆ ಮದ್ದೂರು ತಾಲೂಕಿನ ತಗ್ಗಹಳ್ಳಿಯ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯದ ಆಯುಷ್ ವೈದ್ಯಾಧಿಕಾರಿ ಡಾ. ಭಾಗ್ಯಲಕ್ಷ್ಮೀ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ: ಕಥೆ ಕೇಳು ಪುಟ್ಟ, ಕಥೆ ಹೇಳುತ್ತಾರೆ ಬಿ.ಜಿ.ಕವಿತಾ, 10.30 ಮಕ್ಕಳ ಮಂಟಪ: ಕುಕ್ಕರಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಮಿಶ್ರ ಮಾಧುರ್ಯ **ಮಧ್ಯಾಹ್ನ:** 12.30 ದೇವರನಾಮ, 12.45 ಜನಪದ ಸಂಗೀತ: ಕಸಲಗೆರೆ ಕೆಂಪಮ್ಮ ಮತ್ತು ಸಂಗಡಿಗರಿಂದ ಜನಪದ ಗೀತೆಗಳು, 1.20 ಭಾವಗೀತೆಗಳು–ಎಸ್.ಮಂಜುಳಾ, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ ‘ಜೀವನ ಜ್ಯೋತಿ’ 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಯಕ್ಷಗಾನ: ತಾಳ ಮದ್ದಲೆ, ಪ್ರಸಂಗ: ಹರಿ ದರ್ಶನ, ಪ್ರಸ್ತುತಿ: ಕಾಸರಗೋಡಿನ ಬದಿಯಡ್ಕದ ರಂಗಸಿರಿ ಸಾಂಸ್ಕೃತಿಕ ವೇದಿಕೆಯ ಕಲಾವಿದರು, 4.00 ಭಾರತ ಮತ್ತು ಜಿಂಬಾಂಬ್ವೆ ತಂಡಗಳ ನಡುವೆ ಹರಾರೆ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ನಡೆಯುವ 5ನೇ ಟಿ–20 ಕ್ರಿಕೆಟ್ ಪಂದ್ಯದ ವೀಕ್ಷಕ ವಿವರಣೆ, 7.45 ಸೌಹಾರ್ದತೆಯ ಸಂಕೇತಗಳು–ಬಾನುಲಿ ಮಾಲಿಕೆ, 8.00‘ಹಾದಿಯಲ್ಲಿ ಕಂಡ ಮುಖ’ ಬಾನುಲಿ ಸರಣಿ, ಪ್ರಸ್ತುತಿ: ಅಬ್ದುಲ್ ರಶೀದ್, 9.15 ರಂಗಗೀತೆಗಳು–ಜಿ.ಆರ್.ರಾಮಚಂದ್ರ, 9.30 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ, ಶ್ರೀಮತಿ ಎನ್.ಗಾಯತ್ರಿ–ಗಾಯನ

ಮೈಸೂರು ಮಿತ್ರ

ಭಾನುವಾರ 14 ಜುಲೈ 2024

ಕೇಂದ್ರ ಸಚಿವ ಕುಮಾರಸ್ವಾಮಿಯವರಿಂದ

'ಕಾವೇರಿ' ಸಮಸ್ಯೆಗೆ ಪರಿಹಾರ ಯತ್ನ

ಪ್ರಧಾನಿಗಳೊಂದಿಗೆ ಸದ್ಯದಲ್ಲೇ ಚರ್ಚೆ: ಮಾಜಿ ಸಚಿವ ಪುಟ್ಟರಾಜು

● ನೀರು ಬಿಡದಿರಲು ಸರ್ಕಾರ ದೃಢ ನಿರ್ಧಾರ ಕೈಗೊಳ್ಳಬೇಕು

● ಎಲ್ಲಾ ನಮ್ಮದು ಎನ್ನುತ್ತಿದ್ದ ಕಾಂಗ್ರೆಸಿಗರು 'ಕಾವೇರಿ' ವಿಷಯದಲ್ಲಿ ಪಲಾಯನ

ಪಾಂಡವಪುರ:ಜು:13– ಕಾವೇರಿ ನದಿ ನೀರು ಹಂಚಿಕೆ ಸಮಸ್ಯೆಗೆ ಸಂಬಂಧಿಸಿದಂತೆ ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಪ್ರಧಾನಮಂತ್ರಿಗಳೊಂದಿಗೆ ಚರ್ಚಿಸಲಿದ್ದಾರೆ. ಅಲ್ಲಿಯವರೆಗೆ ರಾಜ್ಯ ಸರಕಾರ ದೃಢ ನಿರ್ಧಾರ ಕೈಗೊಂಡು ತಮಿಳುನಾಡಿಗೆ ನೀರು ಹರಿಸಬಾರದು ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಸರಕಾರವನ್ನು ಒತ್ತಾಯಿಸಿದರು.

ಪಟ್ಟಣದ ಪಾಂಡವ ಕ್ರೀಡಾಂಗಣದ ಮುಂಭಾಗ ಹಮ್ಮಿಕೊಂಡಿರುವ ಎಚ್.ಡಿ.ಕುಮಾರಸ್ವಾಮಿ ಅವರ ಅಭಿನಂದನೆ ಹಾಗೂ ಕೃತಜ್ಞತೆ ಸಮಾರಂಭದ ವೇದಿಕೆಯ ಸಿದ್ದತೆಯನ್ನು ವೀಕ್ಷಣೆ ಮಾಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು.

ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಜಿಲ್ಲೆಯ ಕೃಷಿ ಭೂಮಿ ಗೆದ್ದಲು ಹಿಡಿದಿದೆ. ಅಣೆಕಟ್ಟೆಯಲ್ಲಿಯೇ ನೀರು ಇಲ್ಲದ ಪರಿಸ್ಥಿತಿಯಲ್ಲಿ ತಮಿಳುನಾಡಿಗೆ ನೀರು ಹರಿಸಬಾರದು. ನೀರು ಹರಿಸುವ ವಿಚಾರವಾಗಿ ರಾಜ್ಯ ಸರಕಾರ ದೃಢ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು.

ಕಾವೇರಿ ನದಿ ನೀರು ಹಂಚಿಕೆ ಸಮಸ್ಯೆ ಇತ್ಯಾರ್ಥಕ್ಕೆ ಸಂಬಂಧಿಸಿದಂತೆ ಎಚ್‌ಡಿಕೆ ಪ್ರಧಾನಿ ನರೇಂದ್ರ ಮೋದಿ ಅವರ ಜತೆ ಮಾತುಕತೆ ನಡೆಸಲಿದ್ದಾರೆ. ಕಾನೂನು ಚೌಕಟ್ಟಿನಲ್ಲಿ ಪರಿಹಾರ ಹುಡುಕಲಿದ್ದಾರೆ. ಕಾಂಗ್ರೆಸ್ ನಾಯಕರು ಇಷ್ಟು ದಿನಗಳ ಕಾಲ ಎಲ್ಲವೂ ನಮ್ಮದು ಎನ್ನುತ್ತಿದ್ದರು. ಈಗ ಕಾವೇರಿ ಸಮಸ್ಯೆಯನ್ನು ಕುಮಾರಸ್ವಾಮಿ ಅವರ ಹೆಗಲಿಗೆ ಹಾಕಿ ಕದ್ದು ಓಡಾಡುತ್ತಿದ್ದಾರೆ. ಯಾರು ಕೂಡ ಹೊಣೆಗಾರಿಕೆಯಿಂದ ನುಣುಚಿಕೊಳ್ಳಲು ಸಾಧ್ಯವಿಲ್ಲ. ಕೇಂದ್ರ ಮಂತ್ರಿಯಾಗಿ ಕುಮಾರಸ್ವಾಮಿ ಅವರ ಜವಾಬ್ದಾರಿ ಅರಿತು ಕೆಲಸ ಮಾಡಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರು ಅವರ ಕೆಲಸ ಮಾಡಲಿ ಎಂದು ಪರೋಕ್ಷವಾಗಿ ಸಚಿವ ಚಲುವರಾಯ ಸ್ವಾಮಿ ಅವರಿಗೆ ಟಾಂಗ್ ನೀಡಿದರು.

ಚಾಮರಾಜನಗರದಲ್ಲಿ ನಡೆದ ಜನತಾ ದರ್ಶನ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಜನರ ಅಹವಾಲು ಸ್ವೀಕರಿಸಿ, ಅವುಗಳ ಕಸದ ಬುಟ್ಟಿಗೆ ಎಸೆದು ಹೋಗಿದ್ದರು. ಆದರೆ ಎಚ್‌ಡಿಕೆ ಆ ರೀತಿಯ ನಾಯಕರಲ್ಲ. ಮೊನ್ನೆ ನಡೆದ ಜನತಾದರ್ಶನ ಕಾರ್ಯಕ್ರಮದಲ್ಲಿ ಸಂಜೆವರೆಗೂ ಜನರ ಸಮಸ್ಯೆ ಆಲಿಸಿ ಪರಿಹಾರ ಕೊಡಿಸುವ ನಿಟ್ಟಿನಲ್ಲಿ ಪ್ರಯತ್ನಿಸಿದ್ದಾರೆ. ಆದರೆ ಸರಕಾರ ಕೆಲ ಸಚಿವರ ಆಕ್ಷೇಪಣೆ ನಡುವೆಯೂ ಜನತಾದರ್ಶನಕ್ಕೆ ಜಿಲ್ಲಾ ಮಟ್ಟದ ಅಧಿಕಾರಿಗಳು ಹೋಗದಂತೆ ಕ್ಯಾಬಿನೆಟ್ ಸಭೆಯಲ್ಲಿ ತೀರ್ಮಾನ ಮಾಡಿ ಆದೇಶ ಹೊರಡಿಸುತ್ತಾರೆ ಎಂದು ಸರಕಾರದ ನಿರ್ಧಾರವನ್ನು ಟೀಕಿಸಿದರು. ನಾಲೆಗೆ ನೀರು ಹರಿದ ಮಾರನೇ ದಿನವೇ ಒಂದು ದಿನದ ಅಂತರದಲ್ಲೇ ಲೈನಿಂಗ್ ಕುಸಿದು ಬಿದ್ದಿದೆ. ಇನ್ನೊಂದು ತಿಂಗಳು ಕಾಲ ನೀರು ಹರಿದರೆ ಕಾಮಗಾರಿಯ ಗುಣಮಟ್ಟವನ್ನು ಎಷ್ಟರ ಮಟ್ಟಿಗೆ ಕಾಯ್ದುಕೊಳ್ಳಲಾಗಿದೆ ಎಂಬುದು ಸಾಬೀತಾಗುತ್ತದೆ. ನಾಲಾ ಆಧುನೀಕರಣ ಕಾಮಗಾರಿಗಾಗಿ ಒಡಂಬಡಿಕೆ ಮಾಡಿಕೊಂಡು ಸ್ಟಾರ್ ಚಂದ್ರು ಅವರನ್ನು ಲೋಕಸಭಾ ಚುನಾವಣೆಯಲ್ಲಿ ಕಣಕ್ಕಿಳಿಸಲಾಗಿತ್ತು ಎಂದು ಆರೋಪಿಸಿದರು. ಸಂದರ್ಭದಲ್ಲಿ ಮಾಜಿ ಶಾಸಕ ಅನ್ನದಾನಿ, ಜಿಪಂ ಮಾಜಿ ಸದಸ್ಯರಾದ ಸಿ.ಅಶೋಕ್, ಎಚ್.ಮಂಜುನಾಥ್, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ತಾಲೂಕು ಅಧ್ಯಕ್ಷ ಎಸ್.ಎ.ಮಲ್ಲೇಶ್, ಮುಖಂಡರಾದ ನಂಜೇಗೌಡ, ಪುರಸಭೆ ಸದಸ್ಯರಾದ ಆರ್.ಸೋಮಶೇಖರ್, ಎಂ.ಗಿರೀಶ್, ಚಂದ್ರು, ದಿಲೀಪ್, ಆರ್ಮುಗಂ, ಮಾಣಿಕ್ಯನಹಳ್ಳಿ ಅಶೋಕ ಇದ್ದರು.



ಕೇಂದ್ರದ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಭಾನುವಾರ ಆಯೋಜಿಸಿರುವ ಅಭಿನಂದನಾ ಕಾರ್ಯಕ್ರಮ ಹಿನ್ನೆಲೆಯಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ವೇದಿಕೆ ಸಿದ್ದತೆ ವೀಕ್ಷಿಸಿದರು. ಅನ್ನದಾನಿ, ಡಿ.ರಮೇಶ್, ಸಿ.ಅಶೋಕ್ ಇತರರು ಇದ್ದರು.

ಇಂದು ಎಚ್‌ಡಿಕೆಗೆ ಅಭಿನಂದನೆ

ಮಂಡ್ಯ ಲೋಕಸಭಾ ಕ್ಷೇತ್ರದ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ತೆರಳಿ ಮತದಾರರಿಗೆ ಕೃತಜ್ಞತೆ ಸಮರ್ಪಿಸಬೇಕು ಎಂಬ ಕೇಂದ್ರ ಸಚಿವ ಕುಮಾರಸ್ವಾಮಿ ಅವರ ಅಭಿಪ್ರಾಯವಾಗಿತ್ತು. ಅದರಂತೆ ಜು.14ರಂದು ಪ್ರಥಮವಾಗಿ ಪಾಂಡವಪುರ ಪಟ್ಟಣದ ಪಾಂಡವ ಕ್ರೀಡಾಂಗಣದ ಸಮೀಪ ಬೆಳಗ್ಗೆ 11.30 ಗಂಟೆಗೆ ಕೇಂದ್ರ ಸಚಿವರಾದ ಕುಮಾರಸ್ವಾಮಿ ಅವರಿಗೆ ಜೆಡಿಎಸ್ ಮತ್ತು ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರಿಂದ ಬೃಹತ್ ಅಭಿನಂದನಾ ಸಮಾರಂಭ ಏರ್ಪಡಿಸಲಾಗಿದೆ.

ಸಮಾರಂಭದಲ್ಲಿ 30 ರಿಂದ 40 ಸಾವಿರ ಜನ ಭಾಗವಹಿಸಲಿದ್ದು, ಎಲ್ಲರಿಗೂ ಮಾಂಸಾಹಾರ ಭೋಜನ ಏರ್ಪಡಿಸಲಾಗಿದೆ. ಜತೆಗೆ ಸಸ್ಯಹಾರವೂ ಕೂಡ ಇರುತ್ತದೆ. ಪಟ್ಟಣದ ಡಾ.ರಾಜ್‌ಕುಮಾರ್ ವೃತ್ತದಿಂದ ಪಾಂಡವ ಕ್ರೀಡಾಂಗಣದ ಬಳಿಯ ವೇದಿಕೆವರೆಗೂ ಕುಮಾರಸ್ವಾಮಿ ಅವರನ್ನು ಭವ್ಯ ಮೆರವಣಿಗೆಯಲ್ಲಿ ಕರೆತರಲಾಗುವುದು ಎಂದು ವಿವರಿಸಿದರು.

ವಿರೋಧಿಗಳಿಂದ ಅಪಪ್ರಚಾರಕ್ಕೆ ಸಂಚು: ಕಾರ್ಯಕ್ರಮ ಯಶಸ್ವಿಗೆ ತಡೆಯೊಡ್ಡಲು ವಿರೋಧಿಗಳು ಅಪಪ್ರಚಾರ ನಡೆಸುವ ಹುನ್ನಾರ ನಡೆಸಿದ್ದಾರೆ. ಕಾರ್ಯಕ್ರಮಕ್ಕೆ ಬರುವ ಕೆಲವರಿಗೆ ಮದ್ಯ ಹಂಚಿಕೆ ಮಾಡಿ ಕೆಟ್ಟ ಹೆಸರು ತರಲು ಪ್ರಯತ್ನಿಸಲಾಗುತ್ತಿದೆ. ಹೀಗಾಗಿ ನಮ್ಮ ಪಕ್ಷದ ಯುವ ಸಮುದಾಯ ಮತ್ತು ಕಾರ್ಯಕರ್ತರು ಶಿಸ್ತಿನಿಂದ ವರ್ತಿಸಬೇಕು. ಈ ಬಗ್ಗೆ ಜಿಲ್ಲಾಧಿಕಾರಿಗಳು ಅಬಕಾರಿ ಇಲಾಖೆಗೆ ಸೂಚನೆ ನೀಡಿ ಕಟ್ಟುನಿಟ್ಟಿನ ಕ್ರಮ ವಹಿಸಬೇಕು ಎಂದು ಮನವಿ ಮಾಡಿದರು.

ಅನಂತ್ ಅಂಬಾನಿ, ರಾಧಿಕಾ ವಿವಾಹದಲ್ಲಿ ಪ್ರಧಾನಿ ಮೋದಿ ಭಾಗಿ

ನೂತನ ವಧು-ವರರಿಗೆ ಆಶೀರ್ವಾದ



ಮುಂಬೈ: ಏಷ್ಯಾದ ಅತ್ಯಂತ ಶ್ರೀಮಂತ ಉದ್ಯಮಿ ಮುಖೇಶ್ ಅಂಬಾನಿ ಅವರ ಕಿರಿಯ ಪುತ್ರ ಅನಂತ್ ಅಂಬಾನಿ ಮತ್ತು ರಾಧಿಕಾ ಮರ್ಚೆಂಟ್ ಅವರ ವೈಭವೋಪೇತ ಮದುವೆ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಶನಿವಾರ ಪಾಲ್ಗೊಂಡರು. ಮುಂಬೈನ ಜಿಯೋ ವರ್ಲ್ಡ್ ಡ್ರೈವ್‌ನಲ್ಲಿರುವ ಅಂಬಾನಿ ಒಡೆತನದ ಕನ್ವೆನ್ಷನ್ ಸೆಂಟರ್‌ನಲ್ಲಿ ವಿವಾಹಮಹೋತ್ಸವದ ಭಾಗವಾಗಿ ಇಂದು ನಡೆದ ಅನಂತ್ ಅಂಬಾನಿ ಮತ್ತು ರಾಧಿಕಾ ಮರ್ಚೆಂಟ್ ಅವರ ಶುಭ ಆಶೀರ್ವಾದ ಸಮಾರಂಭದಲ್ಲಿ ಪ್ರಧಾನಿ ಮೋದಿ ಭಾಗವಹಿಸಿ, ನವ ಜೋಡಿಗೆ ಆಶೀರ್ವದಿಸಿದರು.

29 ವರ್ಷದ ಅನಂತ್ ಅಂಬಾನಿ ಅವರು, ಭಾರತೀಯ ಫಾರ್ಮಾ ಉದ್ಯಮಿಗಳಾದ ವೀರೇನ್ ಮತ್ತು ಶೈಲಾ ಮರ್ಚೆಂಟ್ ಅವರ ಪುತ್ರಿ ರಾಧಿಕಾ ಅವರೊಂದಿಗೆ ನಿನ್ನೆ ರಾತ್ರಿ ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಈ ಅದ್ಧೂರಿ ಮದುವೆಗೆ ಜಗತ್ತಿನ ಅತಿ ಜನಪ್ರಿಯ ಸೆಲೆಬ್ರಿಟಿಗಳು, ರಾಜಕಾರಣಿಗಳು, ಹಾಲಿವುಡ್ ಸೆಲೆಬ್ರಿಟಿಗಳು, ಬಾಲಿವುಡ್ ತಾರೆಯರು, ದಕ್ಷಿಣ ಭಾರತದ ಸಿನಿಮಾ ಮಂದಿ ಸೇರಿದಂತೆ ನೂರಾರು ಗಣ್ಯರು ಸಾಕ್ಷಿಯಾದರು.

ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಅಪಘಾತ

ಚಾಮುಂಡಿ ಬೆಟ್ಟದಲ್ಲಿ ಆಷಾಢ ಪೂಜೆ ಮುಗಿಸಿ ಮರಳುತ್ತಿದ್ದ ತಾಯಿ-ಮಗ ದುರ್ಮರಣ

ಮಗಳು-ಅಳಿಯನಿಗೆ ತೀವ್ರ ಗಾಯ, ಮಂಡ್ಯ ಆಸ್ಪತ್ರೆಗೆ ದಾಖಲು



ಮದ್ದೂರು,ಜು.13– ರಸ್ತೆ ವಿಭಜಕಕ್ಕೆ ಕಾರು ಡಿಕ್ಕಿ ಹೊಡೆದ ಪರಿಣಾಮ ಚಾಮುಂಡಿಬೆಟ್ಟದಲ್ಲಿ ಆಷಾಢ ಶುಕ್ರವಾರದ ಪೂಜೆ ಮುಗಿಸಿ, ಮರಳುತ್ತಿದ್ದ ತಾಯಿ-ಮಗ ಸ್ಥಳದಲ್ಲೇ ಸಾವಿಗೀಡಾಗಿ ಮಗಳು ಮತ್ತು ಅಳಿಯ ತೀವ್ರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ಬೆಂಗಳೂರು-ಮೈಸೂರು ರಾಷ್ಟ್ರೀಯ ಹೆದ್ದಾರಿಯ ರುದ್ರಾಕ್ಷಿಪುರ ಗ್ರಾಮದ ಬೈಪಾಸ್ ರಸ್ತೆಯಲ್ಲಿ ಶುಕ್ರವಾರ ಸಂಭವಿಸಿದೆ.

ಮೂಲತಃ ಬೆಂಗಳೂರಿನ ಬಗಲಗುಂಟೆ ನಿವಾಸಿಗಳಾದ ದರ್ಶನ್ (21), ತಾಯಿ ಕಲಾ (40) ಸ್ಥಳದಲ್ಲೇ ಮೃತಪಟ್ಟರೆ, ಕಲಾ ಅವರ ಮಗಳು ಮೇಘ (23) ಹಾಗೂ ಅಳಿಯ ಮಂಜುನಾಥ್ ತೀವ್ರವಾಗಿ ಗಾಯಗೊಂಡಿದ್ದು, ಮದ್ದೂರು ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮಂಡ್ಯ ಮಿಮ್ಸ್ ಆಸ್ಪತ್ರೆಗೆ ರವಾನಿಸಲಾಗಿದೆ. ಮೂಲತಃ ತುಮಕೂರು ಜಿಲ್ಲೆಯ ಕುಣಿಗಲ್ ನಿವಾಸಿಗಳಾದ ಈ ಕುಟುಂಬ ಬೆಂಗಳೂರಿನ ಬಗಲಗುಂಟೆಯಲ್ಲಿ ವಾಸವಾಗಿದೆ. ತಾಯಿ ಚಾಮುಂಡೇಶ್ವರಿ ಭಕ್ತರಾದ ಈ ಕುಟುಂಬ ಆಷಾಢ ಶುಕ್ರವಾರದ ಹಿನ್ನೆಲೆಯಲ್ಲಿ ಕುಟುಂಬ ಸಮೇತ ಮೈಸೂರಿನ ಚಾಮುಂಡಿಬೆಟ್ಟಕ್ಕೆ ಹೋಗಿ ದೇವರ ದರ್ಶನ ಪಡೆದು ವಾಪಸ್ ಬೆಂಗಳೂರಿಗೆ ಸ್ವಿಫ್ಟ್ ಕಾರಿನಲ್ಲಿ ಹಿಂತಿರುಗುತ್ತಿದ್ದ ಸಂದರ್ಭದಲ್ಲಿ ಕಾರು ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದಾಗ ಈ ದುರಂತ ಸಂಭವಿಸಿದೆ. ಮಂಜುನಾಥ್ ಕಾರು ಚಾಲನೆ ಮಾಡುತ್ತಿದ್ದರು ಎಂದು ತಿಳಿದು ಬಂದಿದೆ. ಅಪ ಘಾತಕ್ಕೆ ಅತಿವೇಗವೇ ಕಾರಣವೆಂದು ಪೊಲೀಸರು ತಿಳಿಸಿದ್ದಾರೆ.

ಮದ್ದೂರು ಸಂಚಾರಿ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಮೃತದೇಹಗಳನ್ನು ಮದ್ದೂರು ಸರ್ಕಾರಿ ಆಸ್ಪತ್ರೆಯ ಶವಗಾರಕ್ಕೆ ಸಾಗಿಸಿ, ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಿದರು. ಅಪಘಾತದಲ್ಲಿ ನಜ್ಜು-ಗುಜ್ಜಾಗಿರುವ ಕಾರನ್ನು ವಶಪಡಿಸಿಕೊಳ್ಳಲಾಗಿದೆ.

ಮುಡಾ ಹಗರಣದಲ್ಲಿ ಬಿಜೆಪಿಯವರದ್ದೇ ಪಾರುಪತ್ಯ

ಕುರುಬರ ಸಂಘದ ಮಾಜಿ ಅಧ್ಯಕ್ಷ ಸುಬ್ರಹ್ಮಣ್ಯ ಆರೋಪ



ಬಿ.ಸುಬ್ರಹ್ಮಣ್ಯ

ಮೈಸೂರು, ಜು.13(ಎಸ್‌ಬಿಡಿ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ ನಡೆದಿರುವ ಹಗರಣದಲ್ಲಿ ಬಿಜೆಪಿಯವರದ್ದೇ ಪಾರುಪತ್ಯವಿದ್ದು, ಅದೆಲ್ಲಿ ಬಯಲಾಗುತ್ತದೋ ಎಂಬ ಆತಂಕದಲ್ಲಿ ಪ್ರತಿಭಟನೆ ನಾಟಕವಾಡಿದ್ದಾರೆ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ತಿರುಗೇಟು ನೀಡಿದ್ದಾರೆ. ಮುಡಾ ಹಗರಣ ಹಿನ್ನೆಲೆಯಲ್ಲಿ ಬಿಜೆಪಿ ಬೃಹತ್ ಪ್ರತಿಭಟನೆ ನಡೆಸಿದ್ದರ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಅವರು, 2006ರಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿ ಸರ್ಕಾರ ಬಂದ ನಂತರದಲ್ಲಿ ಮುಡಾ ಆಡಳಿತ ಹಾದಿ ತಪ್ಪಿತು. ಬಿಜೆಪಿ, ಸರ್ಕಾರ ನಡೆಸಿದ ಅವಧಿಯಲ್ಲಂತೂ ಅತೀ ಹೆಚ್ಚು ಹಗರಣಗಳು ನಡೆದಿವೆ. ಬಿಜೆಪಿ ಮಾಜಿ ಶಾಸಕರುಗಳೇ ಅಕ್ರಮದ ಫಲಾನುಭವಿಗಳಾಗಿದ್ದಾರೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದ ಹಗರಣಗಳೇ ಈಗ ಸದ್ದು ಮಾಡುತ್ತಿವೆ. ಅದು ಬೆಳಕಿಗೆ ಬರಬಹುದೆಂಬ ಆತಂಕದಲ್ಲಿ ಬಿಜೆಪಿಯವರೇ ಪ್ರತಿಭಟನೆ ನಡೆಸುತ್ತಿದ್ದಾರೆ ಎಂದು ಆರೋಪಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಧರ್ಮಪತ್ನಿಯವರಿಗೆ ಸೇರಿದ ಜಮೀನಿಗೆ ಸಂಬಂಧಿಸಿದಂತೆ ಈಗಾಗಲೇ ಸ್ಪಷ್ಟನೆ ನೀಡಿದ್ದಾರೆ. ಒಂದು ವೇಳೆ ಮುಖ್ಯಮಂತ್ರಿಯವರು ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಕಠಿಣ ನಿರ್ಧಾರಕ್ಕೆ ಮುಂದಾದರೆ ತಮ್ಮೆಲ್ಲಾ ಹಗರಣಗಳು ಬಯಲಾಗಬಹುದೆಂದು ಪ್ರಕರಣವನ್ನು ಸಿಬಿಐಗೆ ವಹಿಸುವಂತೆ ಒತ್ತಾಯಿಸುತ್ತಿದ್ದಾರೆ. ಕೇಂದ್ರದಲ್ಲಿ ತಮ್ಮದೇ ಸರ್ಕಾರವಿರುವುದರಿಂದ ಸಿಬಿಐ ತನಿಖೆಗೆ ವಹಿಸಿದರೆ ಪಾರಾಗಬಹುದೆಂಬ ಯೋಚನೆ ಅವರದ್ದಾಗಿದೆ. ರಾಜ್ಯದ ಜನತೆ ಬಿಜೆಪಿ ನಾಟಕವನ್ನು ನೋಡುತ್ತಿದ್ದಾರೆ ಎಂದು ಸುಬ್ರಹ್ಮಣ್ಯ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ವಿಧಾನಸಭಾ ಉಪ ಚುನಾವಣೆಯಲ್ಲಿ

ಇಂಡಿಯಾ ಮೈತ್ರಿಕೂಟಕ್ಕೆ 10 ಕ್ಷೇತ್ರಗಳಲ್ಲಿ ಗೆಲುವು

ಬಿಜೆಪಿಗೆ ಕೇವಲ 2 ಸ್ಥಾನ



ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಬೆಂಬಲಿಗರ ವಿಜಯೋತ್ಸವ

ನವದೆಹಲಿ: ಏಳು ರಾಜ್ಯಗಳ 13 ಕ್ಷೇತ್ರಗಳಿಗೆ ಈ ವಾರದ ಆರಂಭದಲ್ಲಿ ನಡೆದಿದ್ದ ವಿಧಾನಸಭಾ ಉಪ ಚುನಾವಣೆಯ ಫಲಿತಾಂಶ ಶನಿವಾರ ಪ್ರಕಟವಾಗಿದ್ದು, ಇಂಡಿಯಾ ಮೈತ್ರಿಕೂಟ 10 ಕ್ಷೇತ್ರಗಳಲ್ಲಿ ಜಯಭೇರಿ ಬಾರಿಸಿದ್ದರೆ, ಬಿಜೆಪಿ 2 ಹಾಗೂ ಪಕ್ಷೇತರ ಅಭ್ಯರ್ಥಿ ಒಂದು ಕ್ಷೇತ್ರದಲ್ಲಿ ಗೆಲುವು ಸಾಧಿಸಿದ್ದಾರೆ.

ಪಶ್ಚಿಮ ಬಂಗಾಳದ 4, ಹಿಮಾಚಲ ಪ್ರದೇಶದ 3, ಉತ್ತರಾಖಂಡ್‌ನ 2 ಹಾಗೂ ಪಂಜಾಬ್, ಮಧ್ಯಪ್ರದೇಶ, ಬಿಹಾರ ಮತ್ತು ತಮಿಳುನಾಡಿನ ತಲಾ ಒಂದು ವಿಧಾನಸಭಾ ಕ್ಷೇತ್ರದಲ್ಲಿ ಬುಧವಾರ ಉಪ ಚುನಾವಣೆ ನಡೆದಿತ್ತು. ಈ ಚುನಾವಣೆಯಲ್ಲಿ ಇಂಡಿಯಾ ಮೈತ್ರಿಕೂಟದ ಕಾಂಗ್ರೆಸ್, ಟಿಎಂಸಿ, ಎಎಪಿ, ಡಿಎಂಕೆ ಅಭ್ಯರ್ಥಿಗಳು ಕಣದಲ್ಲಿದ್ದರು.

ಪಂಜಾಬ್‌ನ ಜಲಂಧರ್ ಪೂರ್ವ ವಿಧಾನಸಭಾ ಕ್ಷೇತ್ರದಲ್ಲಿ ಆಡಳಿತಾರೂಢ ಎಎಪಿಯ ಮೊಹಿಂದರ್ ಭಗತ್ ತನ್ನ ಸಮೀಪದ ಬಿಜೆಪಿ ಅಭ್ಯರ್ಥಿ ಶೀತಲ್ ಅಂಗುರಲ್ ಅವರನ್ನು 37, 325 ಮತಗಳ ಅಂತರದಿಂದ ಸೋಲಿಸಿದ್ದಾರೆ.

ತಮಿಳುನಾಡಿನ ವಿಕ್ರವಂದಿ ವಿಧಾನಸಭಾ ಕ್ಷೇತ್ರದಲ್ಲಿ ಆಡಳಿತಾರೂಢ ಡಿಎಂಕೆ ಅಭ್ಯರ್ಥಿ ಅನ್ನಿಯುರ್ ಶಿವ ತನ್ನ ಸಮೀಪದ ಎನ್ ಡಿಎ ಅಭ್ಯರ್ಥಿ ಸಿ. ಅಂಬುಮಣಿ ಅವರನ್ನು 67, 757 ಮತಗಳ ಅಂತರದಿಂದ ಸೋಲಿಸಿದ್ದಾರೆ. ಇನ್ನೂ ಪಶ್ಚಿಮ ಬಂಗಾಳದ ರಾಯಗಂಜ್ ಕ್ಷೇತ್ರದಲ್ಲಿ ಟಿಎಂಸಿ ಅಭ್ಯರ್ಥಿ ಕೃಷ್ಣ ಕಲ್ಯಾಣಿ ಅವರು 50,077 ಮತಗಳ ಅಂತರದಿಂದ ಬಿಜೆಪಿ ಅಭ್ಯರ್ಥಿ ಮಾನಸ ಕುಮಾರ್ ಘೋಷ್ ಅವರನ್ನು ಮಣಿಸಿದ್ದಾರೆ. ರಣಘಾಟ್ ದಕ್ಷಿಣ ಕ್ಷೇತ್ರದಲ್ಲಿ ಟಿಎಂಸಿಯ ಮುಕುತ್ ನಮಿ ಅಧಿಕಾರಿ ಅವರು ಬಿಜೆಪಿಯ ಮನೋಜ್ ಕುಮಾರ್ ಬಿಸ್ವಾಸ್ ಅವರನ್ನು 74,485 ಮತಗಳ ಅಂತರದಿಂದ ಸೋಲಿಸಿದ್ದಾರೆ. ಬಾಗ್ದಾ ಕ್ಷೇತ್ರದಲ್ಲಿ ಟಿಎಂಸಿಯ ಮಧುಪರ್ಣಾ ಠಾಕೂರ್ ಅವರು ಬಿಜೆಪಿಯ ಬಿನಯ್ ಕುಮಾರ್ ಬಿಸ್ವಾಸ್ ಅವರನ್ನು 74, 251 ಮತಗಳ ಅಂತರದಿಂದ ಸೋಲಿಸಿ ಗೆದ್ದು ಬೀಗಿದ್ದಾರೆ. ಸುಪ್ತಿ ಪಾಂಡೆ ಬಿಜೆಪಿಯ ಕಲ್ಯಾಣ್ ಚುಬೆ ಅವರನ್ನು 62,312 ಮತಗಳಿಂದ ಸೋಲಿಸಿದ್ದಾರೆ ಎಂದು ಚುನಾವಣಾ ಆಯೋಗ ಮಾಹಿತಿ ನೀಡಿದೆ.

ಹಿಮಾಚಲ ಪ್ರದೇಶದ ದೆಹ್ರಾ ಕ್ಷೇತ್ರದಲ್ಲಿ ಸಿಎಂ ಸುಖ್ವಿಂದರ್ ಸಿಂಗ್ ಪತ್ನಿ ಹಾಗೂ ಕಾಂಗ್ರೆಸ್ ಅಭ್ಯರ್ಥಿ ಕಮಲೇಶ್ ಠಾಕೂರ್ ಅವರು ಬಿಜೆಪಿಯ ಹೊಶಿಯಲ್ ಸಿಂಗ್ ಅವರನ್ನು 9, 399 ಮತಗಳ ಅಂತರದಿಂದ ಸೋಲಿಸಿದ್ದಾರೆ. ನಾಲಗಢದಲ್ಲಿ ಕಾಂಗ್ರೆಸ್‌ನ ಹರ್ದೀಪ್ ಸಿಂಗ್ ಬಾವಾ ಅವರು ಬಿಜೆಪಿಯ ಕೆಎಲ್ ಠಾಕೂರ್ ವಿರುದ್ಧ 25,618 ಮತಗಳಿಂದ ಜಯಗಳಿಸಿದ್ದಾರೆ. ಹಮೀರ್‌ಪುರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಆಶಿಶ್ ಶರ್ಮಾ ಗೆಲುವು ಸಾಧಿಸಿದ್ದಾರೆ.

ಉತ್ತರಾಖಂಡದಲ್ಲಿ ಬದರಿನಾಥ್ ಮತ್ತು ಮಂಗಳೌರ್ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್‌ನ ಅಭ್ಯರ್ಥಿಗಳಾದ ಲಖಪತ್ ಸಿಂಗ್ ಬುಟೋಲಾ ಮತ್ತು ಖಾಜಿ ಮೊಹಮ್ಮದ್ ನಿಜಾಮುದ್ದೀನ್ ಗೆಲುವು ಸಾಧಿಸಿದ್ದಾರೆ. ಬುಟೋಲಾ ಅವರು ಬಿಜೆಪಿಯ ರಾಜೇಂದ್ರ ಸಿಂಗ್ ಭಂಡಾರಿ ಅವರನ್ನು 5,224 ಮತಗಳಿಂದ ಸೋಲಿಸಿದ್ದರೆ, ನಿಜಾಮುದ್ದೀನ್ ಅವರು ಬಿಜೆಪಿಯ ಕರ್ತಾರ್ ಸಿಂಗ್ ಭದಾನ ಅವರನ್ನು 422 ಮತಗಳ ಅಲ್ಪ ಅಂತರದಿಂದ ಸೋಲಿಸಿದ್ದಾರೆ.

ಮಧ್ಯಪ್ರದೇಶದ ಅಮರವಾರ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿಯ ಕಮಲೇಶ್ ಪ್ರತಾಪ್ ಶಾ ಅವರು ಕಾಂಗ್ರೆಸ್‌ನ ಧೀರನ್ ಸಾಹ್ ಇನ್ವಾಟಿ ವಿರುದ್ಧ 3,027 ಮತಗಳ ಅಂತರದಿಂದ ಜಯಗಳಿಸಿದರೆ, ಬಿಹಾರದ ರುಪೌಲಿ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿ ಶಂಕರ್ ಸಿಂಗ್ ತಮ್ಮ ಸಮೀಪದ ಪ್ರತಿಸ್ಪರ್ಧಿ ಜೆಡಿಯುನ ಕಲಾಧರ್ ಪ್ರಸಾದ್ ಮಂಡಲ್ ಅವರನ್ನು 8,246 ಮತಗಳ ಅಂತರದಿಂದ ಸೋಲಿಸಿ ಜಯಗಳಿಸಿದ್ದಾರೆ ಎಂದು ಚುನಾವಣಾ ಆಯೋಗದ ವೆಬ್ ಸೈಟ್ ನಲ್ಲಿ ಮಾಹಿತಿ ನೀಡಲಾಗಿದೆ.

ಭಾರೀ ಬೆಲೆಯ ಮೂಲೆ ನಿವೇಶನಗಳೂ 50:50ರ ಅನುಪಾತದಡಿ ಪರಭಾರೆ!

ಮುಡಾ ಆರ್ಥಿಕ ದಿವಾಳಿಗೆ ಕಾರಣರಾಗಿರುವವರ ವಿರುದ್ಧ ಕಠಿಣ ಕ್ರಮಕ್ಕೆ ಸಾರ್ವಜನಿಕರ ಆಗ್ರಹ



ಮೈಸೂರು, ಜು.13(ಆರ್‌ಕೆ)– ಪ್ರಾಧಿಕಾರಕ್ಕೆ ಆದಾಯ ಗಳಿಸುವ ಉದ್ದೇಶದಿಂದ ಕಾಯ್ದಿರಿಸಿದ್ದ ಅತೀ ಹೆಚ್ಚು ಬೆಲೆ ಬಾಳುವ ಬೃಹತ್ ಮೂಲೆ ನಿವೇಶನ (ಕಾರ್ನರ್ ಸೈಟ್)ಗಳನ್ನು ಕಟ್ ಮಾಡಿ ಶೇ.50:50ರ ಅನುಪಾತದಡಿ ಮನಸೋ ಇಚ್ಛೆ ಹಂಚಿಕೆ ಮಾಡಲಾಗಿದೆ.

ಮುಡಾ ನಿವೇಶನಗಳ ಹಂಚಿಕೆ ಹಗರಣ ಸಂಬಂಧ ದಾಖಲೆಗಳನ್ನು ಪರಿಶೀಲಿಸುತ್ತಿರುವ ಹಿರಿಯ ಐಎಎಸ್ ಅಧಿಕಾರಿ ವೆಂಕಟಾಚಲಪತಿ ನೇತೃತ್ವದ ತನಿಖಾಧಿಕಾರಿಗಳು ಭವಿಷ್ಯದಲ್ಲಿ ಪ್ರಾಧಿಕಾರವನ್ನು ಆರ್ಥಿಕವಾಗಿ ಸದೃಢಗೊಳಿಸಲೆಂದು ಹಂಚಿಕೆ ಮಾಡದೇ ಸಂರಕ್ಷಿಸಿರುವ, ಎರಡೂ ಕಡೆ ರಸ್ತೆ ಹೊಂದಿರುವ ವಿಶಾಲವಾದ ಮೂಲೆ ನಿವೇಶನಗಳನ್ನೂ ಕಾನೂನು ಧಿಕ್ಕರಿಸಿ ಹಂಚಿಕೆ ಮಾಡಿರುವುದನ್ನು ಪತ್ತೆ ಹಚ್ಚಿದ್ದಾರೆ.

ಮೈಸೂರು ನಗರದಾದ್ಯಂತ ಮುಡಾದಿಂದ ಈ ಹಿಂದೆ ರಚಿಸಿರುವ ಪ್ರತಿಷ್ಠಿತ ವಸತಿ ಬಡಾವಣೆಗಳಲ್ಲಿ ಲಭ್ಯವಾಗಿರುವ ಕಾರ್ನರ್ ಸೈಟ್‌ಗಳನ್ನೇ ಹಂಚಿಕೆ ಮಾಡಿ ಅಧಿಕಾರಿಗಳು, ಮಧ್ಯವರ್ತಿಗಳು ನೂರಾರು ಕೋಟಿ ರೂ. ಹಣ ಗಳಿಸಿ ಪ್ರಾಧಿಕಾರವನ್ನು ಬರಿದು ಮಾಡಿರುವ ಆಘಾತಕಾರಿ ವಿಷಯ ಬೆಳಕಿಗೆ ಬಂದಿದೆ. ಇನ್ನೂ ಅಭಿವೃದ್ಧಿಪಡಿಸದ ಅತೀ ಕಡಿಮೆ ಬೆಲೆಯ ಭೂಮಿಗೆ ಪರಿಹಾರದ ರೂಪದಲ್ಲಿ ಕೋಟ್ಯಾಂತರ ರೂ. ಬೆಲೆ ಬಾಳುವ ಪ್ರತಿಷ್ಠಿತ ಬಡಾವಣೆಗಳ ಕಾರ್ನರ್ ಸೈಟ್‌ಗಳನ್ನು ಶೇ.50:50ರ ಅನುಪಾತದಡಿ ಹಂಚಿಕೆ ಮಾಡುವ ಮೂಲಕ ಮುಡಾಗೆ ನೂರಾರು ಕೋಟಿ ರೂ. ಆರ್ಥಿಕ ನಷ್ಟ ಉಂಟು ಮಾಡಿದ್ದಾರೆ ಎಂಬುದು ಗಮನಾರ್ಹ.

ಖಾಲಿ ಇರುವ ಕಾರ್ನರ್ ಸೈಟುಗಳ ಮಾಹಿತಿಯನ್ನು ಕೆಳ ಹಂತದ ಅಧಿಕಾರಿಗಳಿಂದ ಪತ್ತೆ ಮಾಡಿ ಸಿಡಿ ಪಟ್ಟಿಯನ್ನು ತರಿಸಿಕೊಂಡು ಸಭೆ ಗಮನಕ್ಕೂ ತಾರದೆ ಫೈಲ್‌ನಲ್ಲಿ ನಮೂದಿಸಿ ಏಕಪಕ್ಷೀಯವಾಗಿ ಅಧಿಕೃತ ಜ್ಞಾಪನಾಪತ್ರ ಹೊರಡಿಸಿ ಪರಿಹಾರದ ಬದಲಾಗಿ ಹಂಚಿಕೆ ಮಾಡಿರುವ ನೂರಾರು ಪ್ರಕರಣಗಳು ತನಿಖೆ ವೇಳೆ ಪತ್ತೆಯಾಗಿವೆ. ಭೂಮಿ ಸ್ವಾಧೀನಪಡಿಸಿಕೊಳ್ಳದ ಪ್ರಕರಣಗಳಲ್ಲೂ 4(1) ನೋಟಿಫಿಕೇಷನ್ ಮಾಡಲಾಗಿದೆ ಎಂದು ವಿಶೇಷ ಭೂ ಸ್ವಾಧೀನಾಧಿಕಾರಿಗಳಿಂದ ನೋಟ್ ಬರೆಸಿ, ಭೂ ಮಾಲೀಕರನ್ನು ಮಧ್ಯವರ್ತಿಗಳ ಮೂಲಕ ಕರೆಸಿ ನಿವೇಶನ ಹಂಚಿಕೆ ಮಾಡಲಾಗಿರುವುದು ತನಿಖೆ ವೇಳೆ ತಿಳಿದು ಬಂದಿದೆ.

ಕೆಲವು ಪ್ರಕರಣಗಳಲ್ಲಿ ಮಾಲೀಕರು ಬದುಕಿಲ್ಲದಿದ್ದರೂ, ಅದೇ ಹೆಸರಿನ ಬೇರೆ ವ್ಯಕ್ತಿಯನ್ನು ಕರೆತಂದು ಸ್ವಲ್ಪ ಹಣದ ಆಮಿಷ ತೋರಿಸಿ ಮೊದಲು ಜಿಪಿಎ ಮಾಡಿಕೊಂಡು, ಅವರಿಗೆ ಹಂಚಿಕೆ ಮಾಡಿ, ತಮ್ಮ ಹೆಸರಿಗೆ ಬೇರೆಯವರು ನೋಂದಣಿ ಮಾಡಿಕೊಂಡಿದ್ದಾರೆ.

ಈ ಎಲ್ಲಾ ದಂಧೆ ಮೂಲಕ ಮುಡಾ ದಿವಾಳಿ ಅಂಚಿಗೆ ತಂದು ನಿಲ್ಲಿಸಿರುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಸಾರ್ವಜನಿಕರು ಆಗ್ರಹಪಡಿಸಿದ್ದಾರೆ.

ಈ ಹಿಂದೆಯೂ ನಕಲಿ ದಾಖಲೆ ಸೃಷ್ಟಿಸಿ ನಿವೇಶನಗಳ ಕಂಡ ಕಂಡವರಿಗೆ ಪರಭಾರೆ ಮಾಡಿದವರಲ್ಲಿ ಹಲವರು ಸ್ವಯಂ ನಿವೃತ್ತಿ ಪಡೆದಿದ್ದು, ಅಂತಹವರ ಕಾಲದ ದಾಖಲೆ ಪರಿಶೀಲಿಸಿ, ಅವರ ವಿರುದ್ಧವೂ ಕ್ರಮವಾಗಬೇಕು ಎಂದು ಒತ್ತಾಯಿಸಿದ್ದಾರೆ.

ಚಾಮರಾಜ ಕ್ಷೇತ್ರದಲ್ಲಿ ಶಾಸಕ ಹರೀಶ್‌ಗೌಡರ ಡೆಂಗ್ಯೂ ಮುನ್ನೆಚ್ಚರಿಕೆ; ವಿವಿಧ ಬಡಾವಣೆಯಲ್ಲಿ ವ್ಯಾಪಕ ಫಾಗಿಂಗ್



ಮೈಸೂರಿನ ಚಾಮರಾಜ ಕ್ಷೇತ್ರದ ವಿವಿಧೆಡೆ ಸೊಳ್ಳೆ ನಿಯಂತ್ರಣಕ್ಕೆ ಫಾಗಿಂಗ್ ಮಾಡಲಾಗುತ್ತಿದೆ.



ಹರೀಶ್‌ಗೌಡ

ಮೈಸೂರು, ಜು.13(ಎಸ್‌ಬಿಡಿ)– ಮೈಸೂರಿನಲ್ಲಿ ಡೆಂಗ್ಯೂ ಭೀತಿ ಇರುವ ಹಿನ್ನೆಲೆಯಲ್ಲಿ ಶಾಸಕ ಕೆ.ಹರೀಶ್‌ಗೌಡರ ಸೂಚನೆ ಮೇರೆಗೆ ಚಾಮರಾಜ ಕ್ಷೇತ್ರದಲ್ಲಿ ಸೊಳ್ಳೆ ನಿಯಂತ್ರಣಕ್ಕೆ ಕ್ರಮ ವಹಿಸಲಾಗಿದೆ.

ಡೆಂಗ್ಯೂ ಹರಡುವ ಈಡಿಸ್ ಸೊಳ್ಳೆಗಳ ಉತ್ಪತ್ತಿಯಾಗುವ ಸ್ಥಳಗಳು ಸೇರಿದಂತೆ ಎಲ್ಲಾ ರಸ್ತೆಗಳಲ್ಲೂ ಫಾಗಿಂಗ್ ಮಾಡಲಾಗುತ್ತಿದೆ. ವಿ.ವಿ. ಮೊಹಲ್ಲಾ, ಜಯಲಕ್ಷ್ಮೀಪುರಂ, ಗಂಗೋತ್ರಿ, ಗೋಕುಲಂ, ಬೃಂದಾವನ ಬಡಾವಣೆ, ಪಡು ವಾರಹಳ್ಳಿ, ಕುಂಬಾರಕೊಪ್ಪಲು, ಮಹದೇಶ್ವರ ಬಡಾವಣೆ, ಸುಬ್ಬರಾಯನಕೆರೆ, ಮಂಡಿ ಮೊಹಲ್ಲಾ, ತಿಲಕ್‌ನಗರ ಸೇರಿದಂತೆ ಹಲವು ಬಡಾವಣೆಗಳಲ್ಲಿ ಫಾಗಿಂಗ್ ನಡೆಸಿ, ಡೆಂಗ್ಯೂ ಹರಡದಂತೆ ನಿಗಾ ವಹಿಸಲಾಗಿದೆ.

ಸಾರ್ವಜನಿಕರು ಸಹಕರಿಸಿ: ಡೆಂಗ್ಯೂ ನಿಯಂತ್ರಣದಲ್ಲಿ ಸಾರ್ವಜನಿಕರ ಸಹಕಾರ ಬಹಳ ಮುಖ್ಯ. ಪ್ರತಿಯೊಬ್ಬರೂ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಮನೆಯೊಳಗೆ ಹಾಗೂ ಸುತ್ತಮುತ್ತ ನೀರು ನಿಲ್ಲದಂತೆ ಮುನ್ನೆಚ್ಚರಿಕೆ ವಹಿಸಬೇಕು. ಹಳೇ ಟೈರ್‌ಗಳು, ಪ್ಲಾಸ್ಟಿಕ್ ಬಾಟಲ್, ಟೀ ಕಪ್, ತೆಂಗಿನ ಚಿಪ್ಪು, ಡಬ್ಬಿಗಳು, ಹೂಕುಂಡಗಳು ಸೇರಿದಂತೆ ಎಲ್ಲಿಯೂ ನೀರು ಶೇಖರಣೆಯಾಗದಂತೆ ನಿಗಾ ವಹಿಸಬೇಕು. ಕರ್ಟನ್ ಸೇರಿದಂತೆ ಸೊಳ್ಳೆ ನಿಯಂತ್ರಣ ಕ್ರಮ ಅನುಸರಿಸಬೇಕು. ಮಕ್ಕಳ ಬಗ್ಗೆ ಹೆಚ್ಚು ನಿಗಾ ವಹಿಸಬೇಕು. ಆರೋಗ್ಯದಲ್ಲಿ ವ್ಯತ್ಯಯವಾದರೆ ಕೂಡಲೇ ಆಸ್ಪತ್ರೆಗೆ ತೆರಳಿ ವೈದ್ಯರ ಭೇಟಿ ಮಾಡಬೇಕು. ವೈದ್ಯರು ಸಲಹೆ ನೀಡಿದರೆ ನಿರ್ಲಕ್ಷಿಸದೆ ಡೆಂಗ್ಯೂ ಪರೀಕ್ಷೆ ಮಾಡಿಸಿಕೊಳ್ಳಬೇಕು. ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಉಚಿತ ಚಿಕಿತ್ಸೆ ಲಭ್ಯವಿದ್ದು, ವಿಳಂಬ ಮಾಡದೆ ಚಿಕಿತ್ಸೆ ಪಡೆದುಕೊಳ್ಳಬೇಕು. ಒಟ್ಟಾರೆ ಡೆಂಗ್ಯೂ ನಿಯಂತ್ರಣಕ್ಕೆ ಸರ್ಕಾರ, ಜಿಲ್ಲಾಡಳಿತ ಹಾಗೂ ನಗರಪಾಲಿಕೆ ಜೊತೆಗೆ ಸಾರ್ವಜನಿಕರೂ ಕೈಜೋಡಿಸಬೇಕು ಎಂದು ಶಾಸಕ ಕೆ.ಹರೀಶ್‌ಗೌಡರು ಮನವಿ ಮಾಡಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಬಸ್ಯಾ : ಅಂಗಿ ಹೊಲಸಾಕ ಒಂದು ಚಲೋ ಅರಿಬಿ ತೋರಿಸಪ್ಪ
ಅಂಗಡಿಯವ : ಪ್ಲೇನ್‌ದಾಗ ತೋರಿಸ್ಲೇನರಿ ಸಾಹೇಬ್ರ!
ಬಸ್ಯಾ : ಇಲ್ಲ ಹೆಲಿಕ್ಯಾಪ್ಟರ್‌ದಾಗ ತೋರ್ಸು!
ಮಂಗ್ಯಾನ ಮಗನ, ಇಲ್ಲೆ ತೋರಸ್ಲೆ!

ಮೈಸೂರು ಮಿತ್ರ

ಭಾನುವಾರ, 14 ಜುಲೈ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಕೋಪ ಇದ್ದವನಿಗೆ ಬೇರೆ ಶತ್ರುವೇ ಬೇಡ. ಜ್ಞಾನವುಳ್ಳವನಿಗೆ ಬೇರೆ ಸಂಪತ್ತು ಬೇಡ. ಕರುಣೆ ಉಳ್ಳವನಿಗೆ ಮತ್ಯಾವ ರಕ್ಷಣೆಯೂ ಬೇಡ. –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಆಳಾಗದವ ಅರಸನಲ್ಲ / ಹಟ ಹಿಡಿದವ ಸಾಮ್ರಾಟನಲ್ಲ

ನಿಮ್ಮ ಪತ್ರಗಳು

ಓದುಗರ ಪತ್ರಕ್ಕೆ ಕೋರ್ಟ್ ಮನ್ನಣೆ!

ಮಾನ್ಯರೆ,

ಬೆಂಗಳೂರಿನಲ್ಲಿ ಹೆಚ್ಚುತ್ತಿರುವ ಡೆಂಗ್ಯೂ ಜ್ವರದ ಬಗ್ಗೆ ಆತಂಕ ವ್ಯಕ್ತಪಡಿಸಿ ಓದುಗರೊಬ್ಬರು ಪತ್ರಿಕೆಯೊಂದರ 'ಓದುಗರ ಪತ್ರ' ವಿಭಾಗಕ್ಕೆ ಇತ್ತೀಚೆಗೆ ಬರೆದ ಪತ್ರವನ್ನು ಗಂಭೀರವಾಗಿ ಪರಿಗಣಿಸಿದ ರಾಜ್ಯದ ಉಚ್ಚ ನ್ಯಾಯಾಲಯ, ಸ್ವಯಂಪ್ರೇರಿತವಾಗಿ (suo motto) ದೂರನ್ನು ದಾಖಲಿಸಿಕೊಂಡು, ಸಂಬಂಧಪಟ್ಟವರಿಗೆ ನೋಟಿಸ್ ಜಾರಿಗೊಳಿಸಿರುವುದು ಮಹತ್ವದ ಸಂಗತಿಯಾಗಿದೆ.



ಓದುಗರ ಪತ್ರಗಳ ಬಗ್ಗೆ ಅನೇಕರು ತಲೆಕೆಡಿಸಿಕೊಳ್ಳುವುದಿಲ್ಲ. ಕೆಲಸವಿಲ್ಲದವರು, ಏನೋ ತಮ್ಮ ಮನಸ್ಸಿಗೆ ಬಂದ ಹಾಗೆ ಬರೆಯುತ್ತಾರೆ ಅಥವಾ ಅದೊಂದು ಖಯಾಲಿ ಎಂದು ಭಾವಿಸುವವರೂ ಇದ್ದಾರೆ.

ಅದೊಂದು ಪ್ರಚಾರದ ಗೀಳು ಎಂದು ಕೂಡ ಅನೇಕರು ಭಾವಿಸಬಹುದು. ಆದರೆ ಓದುಗರ ಪತ್ರಗಳನ್ನು ಕೆಲವರು ಅತ್ಯಂತ ಕಾಳಜಿ ಮತ್ತು ಬದ್ಧತೆಯಿಂದ, ಎಲ್ಲಾ ಮಾಹಿತಿಗಳನ್ನು ಕಲೆ ಹಾಕಿ, ಸತ್ಯಾಸತ್ಯತೆಗಳನ್ನು ಅರ್ಥೈಸಿಕೊಂಡು ಬರೆಯುತ್ತಾರೆ. ಸಾಮಾನ್ಯವಾಗಿ ಓದುಗರ ಪತ್ರಗಳು ಸಮಾಜದ ಅಂಕುಡೊಂಕುಗಳನ್ನು ಓರೆಕೋರೆಗಳನ್ನು ತಿದ್ದುವ ಜೊತೆಗೆ ನಾಗರಿಕರ ದೈನಂದಿನ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುತ್ತವೆ. ಕೆಲವರು ತಾವು ವಾಸಿಸುವ ಪ್ರದೇಶಗಳಲ್ಲಿ ನಾಗರಿಕ ಸೌಲಭ್ಯಗಳ ಕೊರತೆಗಳ (lack of civic amenities) ಬಗ್ಗೆ ಬರೆಯಬಹುದು.

ಸಮಾಜದ ಗಣ್ಯ ವ್ಯಕ್ತಿಗಳು, ಖ್ಯಾತನಾಮರು ನಿಧನ ಹೊಂದಿದಾಗ ಅವರ ಸ್ಮರಣಾರ್ಥ ಲೇಖನ ರೂಪದ ಪತ್ರಗಳನ್ನು ಬರೆಯಬಹುದು. ಓದುಗರ ಪತ್ರಗಳಿಗೆ ಯಾವುದೇ ರೀತಿಯ ಚೌಕಟ್ಟಿಲ್ಲ. ಓದುಗರಿಗಾಗಿ ಮೀಸಲಿಟ್ಟ ವೇದಿಕೆಯೇ ಅದು. ಹಾಗಂತ, ಮನಸ್ಸಿಗೆ ಬಂದದ್ದನ್ನೆಲ್ಲಾ ಬರೆಯಲು ಸಾಧ್ಯವಿಲ್ಲ. ಪತ್ರಗಳನ್ನು ಪ್ರಕಟಿಸುವ ಮೊದಲು ಪತ್ರಿಕೆಯ ಸಂಪಾದಕ ವರ್ಗದವರು ಅವುಗಳನ್ನು ಓದಿ ನೋಡಿ, ಪ್ರಕಟಿಸಬಹುದು ಎಂದು ನಿರ್ಧರಿಸಿದರೆ ಮಾತ್ರ ಪತ್ರ ಪ್ರಕಟಗೊಳ್ಳುತ್ತದೆ. ಪತ್ರಗಳನ್ನು ಬರೆಯುವವರಿಗೆ ಸಾಮಾಜಿಕ ಬದ್ಧತೆ, ಕಾಳಜಿ ಇರಬೇಕು. ಪ್ರಸಕ್ತ ವಿದ್ಯಮಾನಗಳ ಬಗ್ಗೆ ಕೂಡ ಅವರು ತಿಳಿದು ಕೊಂಡಿರಬೇಕು. ಕೆಲವರು ನಿಯಮಬದ್ಧವಾಗಿ ಪತ್ರಗಳನ್ನು ಬರೆಯುತ್ತಾರೆ. ಓದುಗರು ಸಹಾ ಅಂತಹ ಪತ್ರಗಳನ್ನು ಗಮನವಿಟ್ಟು ಓದುತ್ತಾರೆ. ಕೆಲವು ಪತ್ರಿಕೆಗಳ ಸಂಪಾದಕರು ಓದುಗರ ಪತ್ರಗಳಿಗೆ ಹೆಚ್ಚಿನ ಮಹತ್ವ ನೀಡುತ್ತಾರೆ. ಕೆಲವೊಮ್ಮೆ ಅಂತಹ ಪತ್ರಗಳನ್ನು ಪತ್ರಿಕೆಯ ಮುಖಪುಟದಲ್ಲೇ ಪ್ರಕಟಿಸುವ ಮೂಲಕ ಅವುಗಳ ಮಹತ್ವ ವನ್ನು ಹೆಚ್ಚಿಸುತ್ತಿದ್ದಾರೆ. ಕೆಲವು ರಾಜಕಾರಣಿಗಳು ಸಹಾ ಓದುಗರ ಪತ್ರಗಳ ಬಗ್ಗೆ ಗಮನಹರಿಸುತ್ತಾರೆ. ಮಂತ್ರಿ ಮಹೋದಯರು ಕೂಡ ಇವುಗಳನ್ನು ಓದುವುದಲ್ಲದೇ ತಮ್ಮ ತಮ್ಮ ವ್ಯಾಪ್ತಿಯಲ್ಲಿ ಕ್ರಮಗಳನ್ನು ಜರುಗಿಸಿರುವ ಉದಾಹರಣೆಗಳು ಉಂಟು. ಅಧಿಕಾರಿ ವರ್ಗದವರು ಸಹ ಓದುಗರ ಪತ್ರಗಳನ್ನು ಓದಿ ಎಚ್ಚೆತ್ತುಕೊಂಡು ಅಗತ್ಯವಿರುವ ಕ್ರಮಗಳನ್ನು ಕೈಗೊಳ್ಳುತ್ತಾರೆ. ಅಷ್ಟರಮಟ್ಟಿಗೆ ಓದುಗರ ಪತ್ರಗಳು 'ನಿದ್ರಿಸುತ್ತಿರುವವರನ್ನು ಎಚ್ಚರಿಸುವ ಗಂಟೆ' ಎಂದು ಕರೆಯಬಹುದು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಮರೆಯಾದ ಕನ್ನಡತಿ ಅಪರ್ಣಾ

ಮಾನ್ಯರೆ,



ಸ್ವಚ್ಛವಾದ ಕನ್ನಡ ಉಚ್ಚಾರಣೆ ಮಾಡುತ್ತಿದ್ದ ನಿರೂಪಕಿ, ರೇಡಿಯೋ ಉದ್ಘೋಷಕಿ, ನಟಿ, ಬರಹಗಾರ್ತಿ, ಅಚ್ಚ ಕನ್ನಡತಿ ಅಪರ್ಣಾ ನಮ್ಮನ್ನ ಅಗಲಿರುವುದು ನೋವು ತಂದಿದೆ. ನಿರರ್ಗಳವಾಗಿ ನಿರೂಪಣೆ ಮಾಡಿ ಅಸಂಖ್ಯಾತ ಕಾರ್ಯಕ್ರಮಗಳು, ಮಜಾ ಟಾಕೀಸ್‌ನಲ್ಲಿ ಸೃಜನ್ ಜೊತೆ ಸೇರಿ ಅವರು ಕೊಡುತ್ತಿದ್ದ ಮಜಾ, ಸಿಎಸ್‌ಪಿ ಹೆಂಡತಿ, ವಕೀಲೆಯಾಗಿ ಮುಕ್ತ, ಮುಕ್ತ ಮುಕ್ತ ಹಾಗೂ ಇತರ ಧಾರಾವಾಹಿ, 'ಮಸಣದ ಹೂ' ಸೇರಿದಂತೆ ಇತರ ಸಿನಿಮಾಗಳ ನಟನೆ, ಬಿಗ್‌ಬಾಸ್ ಕಾರ್ಯಕ್ರಮದಲ್ಲಿ ಅವರ ನಡುವಳಿಕೆ, ಬೆಂಗಳೂರು ಮೆಟ್ರೊದಲ್ಲಿ ಪ್ರಯಾಣಿಸುವಾಗ ಕೇಳುವ ಅವರ ಮಧುರವಾದ ಧ್ವನಿ.... ಯಾವುದೂ ಕೂಡ ಮರೆಯಲಾಗುವುದಿಲ್ಲ. ಬದುಕೆಂಬ 'ಮೆಟ್ರೋ' ರೈಲಿನಲ್ಲಿ ಅವರ ಅಂತಿಮ ಸ್ಥಳ ಬಂದಾಗ ಇಳಿದು ಬಾರದ ಜಾಗಕ್ಕೆ ಹೋಗಿದ್ದಾರೆ ಅಪರ್ಣಾ. ಆದರೆ ಈ ಕನ್ನಡತಿಯ ಅದ್ಭುತವಾದ 'ಧ್ವನಿ' ಸದಾ ನಮ್ಮೆಲ್ಲರ ನೆನಪಿನಲ್ಲಿ ಉಳಿಯುತ್ತದೆ.

–ರಾಘವೇಂದ್ರ ಜೋಯಿಸ್, ಮೈಸೂರು

ಮೋರಿಯಲ್ಲಿ ಗಿಡಗಂಟಿ ತೆರವಿಗೆ ಮನವಿ



ಮಾನ್ಯರೆ,

ಮೈಸೂರಿನ ರಾಮಕೃಷ್ಣನಗರದಲ್ಲಿರುವ ಕುವೆಂಪುನಗರ ಪೊಲೀಸ್ ಠಾಣೆ ಹಿಂಭಾಗದಲ್ಲಿ ಹಾದು ಹೋಗಿರುವ ಮಳೆ ನೀರು ಮೋರಿಯಲ್ಲಿ ಒಳಚರಂಡಿ ಪೈಪು ಒಡೆದು ಕಳೆದ ಮೂರು ತಿಂಗಳಿಂದ 9ನೇ ಕ್ರಾಸ್ ತಿರುವಿನಲ್ಲಿ ತ್ಯಾಜ್ಯ ನೀರು ಸಂಗ್ರಹವಾಗಿ ಇದರ ದುರ್ವಾಸನೆ ತಡೆಯಲು ಆಗುತ್ತಿಲ್ಲ. ಮೋರಿಯಲ್ಲಿ ಸಾಕಷ್ಟು ಗಿಡಗಳು ಬೆಳೆದಿದ್ದು ಸೊಳ್ಳೆ ಹಾವಳಿ ಹೆಚ್ಚಾಗಿದೆ. ಡೆಂಗ್ಯೂ ಭಯದ ಭೀತಿಯಲ್ಲಿ ನಿವಾಸಿಗಳು ವಾಸಿಸುವಂತಾಗಿದೆ. ನಗರಪಾಲಿಕೆಯವರಿಗೆ ಇದರ ಬಗ್ಗೆ ದೂರು ನೀಡಿದರೂ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಿ ಸಮಸ್ಯೆಯನ್ನು ನಿವಾರಿಸಬೇಕಾಗಿ ಮನವಿ.

– ನೊಂದ ನಿವಾಸಿಗಳು, ರಾಮಕೃಷ್ಣನಗರ.



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ಮೈಮರೆಸುವ ತಾಳ–ಮದ್ದಳೆ



ಜನಪದವು ಶಿಷ್ಟ ಕಲೆಗಳ ಮಾತೃಗರ್ಭ ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಆಲೋಚಿಸಿ ನೋಡಿದಾಗ ಈ ಮಾತು ಅದೆಷ್ಟು ಸತ್ಯ ಎಂಬುದು ಮನದಟ್ಟಾಗುತ್ತದೆ. ಯಾವುದೇ ಕಲೆಯ ಮೂಲ ರೂಪವನ್ನು, ಅದರ ಆರಂಭಿಕ ಹಂತವನ್ನು ಜಾನಪದ ಕಲೆಗಳಲ್ಲಿ ನಾವು ಗುರುತಿಸಬಹುದು. ಇಂದು ವೇದಿಕೆಯನ್ನೇರಿ, ವಿಜೃಂಭಿಸುತ್ತಿರುವ ಹತ್ತು ಹಲವು ಸಂಗೀತ ವಾದ್ಯಗಳ ಮೂಲವೂ ಅದೇ ಜನಪದವೇ. ಅಲ್ಲಿ ಹುಟ್ಟಿ, ಕ್ರಮೇಣ ಪರಿಷ್ಕರಣೆ ಹೊಂದುತ್ತಾ ಕೆಲವು ಶಾಸ್ತ್ರೀಯ ಸಂಗೀತದ ವಲಯದಲ್ಲಿ ಮಾನ್ಯತೆ ಪಡೆದರೆ, ಮತ್ತೆ ಕೆಲವು ಕಾಲಗರ್ಭದಲ್ಲಿ ಮರೆಯಾಗಿರುವುದೂ ಉಂಟು. ಯುದ್ಧಗಳಲ್ಲಿ ಬಳಕೆಯಾಗುತ್ತಿದ್ದ ರಣವಾದ್ಯಗಳು ಸಹಜವಾಗಿಯೇ ಹಿಂದೆ ಸರಿದಿರಲಿಕ್ಕೆ ಸಾಕು. ಪ್ರಯಾಣ ಹೊರಡುವಾಗ, ಜಲಕ್ರೀಡೆ ಆಡುವಾಗ, ಬೇಟೆ ಆಡುವಾಗ, ಆಸ್ಥಾನಗಳಲ್ಲಿ, ಶೃಂಗಾರ ಸಂದರ್ಭಗಳಲ್ಲಿ ಬಳಸುತ್ತಿದ್ದ ವಾದ್ಯಗಳು ಒಂದೇ ಎರಡೇ...?

ನಮ್ಮಲ್ಲಿ ಇದೀಗ 50–60 ವರುಷಗಳ ಹಿಂದೆ ಹಳ್ಳಿ ಹಳ್ಳಿಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತಿದ್ದ ಆವುಜ ಎಂಬ ವಾದ್ಯವು ಇಂದು ಎಲ್ಲಿದೆ? ಅದನ್ನು ಕುರಿತು ನಮ್ಮ ಕನ್ನಡ ಕಾವ್ಯಗಳಲ್ಲಿ ವಿಪುಲವಾದ ಆಧಾರಗಳು ಸಿಗುತ್ತವೆ. ಹರಿಹರನಂತಹ ಸಮರ್ಥ ಕವಿಗಳು ಅದರ ನಾದವನ್ನು ಕಿವಿ ತುಂಬುವಂತೆ ಶಬ್ದಗಳಲ್ಲಿ ಹಿಡಿದಿಟ್ಟಿದ್ದಾರೆ. ಅಷ್ಟೇ ಏಕೆ ಬೇಲೂರು, ಹಳೇಬೀಡಿನ ಶಿಲಾಬಾಲಿಕೆಯರ ಕೈಯಲ್ಲಿ ಆ ವಾದ್ಯದ ಅತ್ಯಂತ ಸ್ಪಷ್ಟ ರೂಪವನ್ನು ಕಾಣಬಹುದು. ಡಮರುವಿನ ಆಕಾರದ ಆ ವಾದ್ಯದ ಮಧ್ಯಭಾಗವನ್ನು ಎಡಗೈನಿಂದ ಹಿಡಿದು, ಬಲಗೈನಿಂದ ಅಥವಾ ಬಲಗೈಯಲ್ಲಿ ಹಿಡಿದ ಕೋಲಿನಿಂದ ನುಡಿಸುತ್ತಿರುವ ಸುಂದರ ಶಿಲ್ಪವು ಜೀವಂತಿಕೆಯಿಂದ ಕೂಡಿದೆ. ಆವುಜಕ್ಕೆ ಸುತ್ತಿರುವ ಹಗ್ಗವನ್ನು ಸಹ ಶಿಲ್ಪಿ ಅತ್ಯಂತ ಸೂಕ್ಷ್ಮವಾಗಿ ಕೆತ್ತಿರುವುದನ್ನು ನೋಡಬಹುದು. ಹೀಗೆ ಜನಪದದಿಂದ ಹುಟ್ಟಿ ಬಂದ ಅನೇಕ ವಾದ್ಯಗಳಷ್ಟೇ ಅಲ್ಲದೆ ಕಲಾ ಪ್ರಕಾರಗಳೂ ನಮ್ಮಲ್ಲಿ ಇವೆ.

ನಮ್ಮ ಕನ್ನಡ ಕಾವ್ಯಗಳು, ಅದರಲ್ಲೂ ಹಾಡುಗಬ್ಬಗಳು ಉಳಿದು ಬಂದಿರುವುದೇ ನಮ್ಮ ಜನಪದ ಪ್ರತಿಭೆಗಳಿಂದ ಎಂಬುದರಲ್ಲಿ ಎರಡು ಮಾತಿಲ್ಲ. ರೈತ, ತನ್ನ ಬಿಡುವಿಲ್ಲದ ಮಣ್ಣ ಕಾಯಕದಿಂದ ಬಿಡುವು ಪಡೆಯುವುದೇ ಮಳೆಗಾಲ ಮತ್ತು ನಂತರದಲ್ಲಿ. ಆಗ ಅವನಿಗೆ ಏನಾದರೂ ಮನರಂಜನೆ ಬೇಕಿರುತ್ತಿತ್ತಲ್ಲ. ಆಗ ಅವನ ಸುಪ್ತ ಪ್ರತಿಭೆ ಹೊರಹೊಮ್ಮಲು ಅವಕಾಶ ಉಂಟಾಗುತ್ತಿತ್ತು. ಕವಿರಾಜಮಾರ್ಗಕಾರ ಹೇಳುವಂತೆ ನಮ್ಮ ಕನ್ನಡಿಗರು, ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್. ಓದು–ಬರಹ ಬಾರದಿದ್ದರೇನಂತೆ, ಕಾವ್ಯವನ್ನು ಆಸ್ವಾದಿಸಲು ಅದನ್ನು ಕೇಳುವ, ಅರ್ಥೈಸಿಕೊಳ್ಳಬಲ್ಲ ಮನಸಿದ್ದರೆ ಸಾಕಲ್ಲ! ಹಾಗೆ ಇಡೀ ಕಾವ್ಯವನ್ನು ಹಾಡುವ, ಅರ್ಥೈಸುವ ಪ್ರತಿಭೆಗಳು ನಮ್ಮಲ್ಲಿ ಹೇರಳವಾಗಿದ್ದರು. ಅದೂ ಹಳಗನ್ನಡ ಕಾವ್ಯಗಳನ್ನು! ಈಗ ಬಿಡಿ, ಪಠ್ಯದಲ್ಲಿ ಹಳಗನ್ನಡವನ್ನು ಎಷ್ಟು ಮೊಟಕುಗೊಳಿಸಿದರೂ ಸಾಲದು ನಮಗೆ. ಹೇಳುವವರಿಗೆ, ಕೇಳುವವರಿಗೆ ಇಬ್ಬರಿಗೂ ಬೇಡಾದ ವಿಷಯ ಅದು.

> "ತಾಳ–ಮದ್ದಳೆಯಲ್ಲಿ ಒಬ್ಬ ಭಾಗವತ ಇರುತ್ತಾರೆ. ಅವರ ಕೆಲಸವೇನಿದ್ದರೂ ಸಂಭಾಷಣೆಯ ಮೊನಚನ್ನು ಹಾಡಿನ ಮೂಲಕ ಹೆಚ್ಚಿಸುವುದು ಎನ್ನಬಹುದು. ಅವರ ಕೈಯಲ್ಲಿ ತಾಳ. ಎಡ ಬಲದಲ್ಲಿ ಚಂಡೆ ಮತ್ತು ಮದ್ದಳೆಕಾರರು. ಇಬ್ಬರು ಪಾತ್ರಧಾರಿಗಳು. ಭಾಗವತರಿಗೆ ಕಾವ್ಯಗಳ, ಪದ್ಯಗಳ ಆಳವಾದ ಜ್ಞಾನ ಇರಬೇಕು. ಪಾತ್ರಧಾರಿಗಳಿಗೆ ಆಯಾ ಪ್ರಸಂಗದ ಆಮೂಲಾಗ್ರ ತಿಳುವಳಿಕೆಯ ಜೊತೆಗೆ ಆಯಾ ಪಾತ್ರಗಳ ಆಳವಾದ ಪರಿಚಯ ಮತ್ತು ಅದನ್ನು ಅತ್ಯಂತ ಸೂಕ್ಷ್ಮವಾಗಿ ವಿಶ್ಲೇಷಿಸುವ ಚತುರತೆಯೂ ಅಗತ್ಯವಾಗಿ ಇರಬೇಕು. ಅಂದಾಗ ಮಾತ್ರ ಪ್ರದರ್ಶನ ಕಳೆಗಟ್ಟುತ್ತದೆ.

ನಮ್ಮ ಕವಿಗಳ ಪರಿಚಯವನ್ನು ಮಕ್ಕಳಿಗೆ ಮಾಡಿಸುವುದು ನಮ್ಮ ಹೊಣೆ ಎಂಬ ಕನಿಷ್ಠ ಎಚ್ಚರಿಕೆಯೂ ಇಲ್ಲವಾಗಿದೆ. ಅಕ್ಷರಜ್ಞಾನವಿಲ್ಲದ ನಮ್ಮ ಗ್ರಾಮೀಣ ಪ್ರತಿಭೆಗಳು ಕನ್ನಡ ಕವಿಗಳನ್ನು ಜೀವಂತವಾಗಿ ಇಟ್ಟಿದ್ದರೆ, ಕಲಿತ ನಾವು ಅದನ್ನು ಕಣ್ಮರೆಯಾಗಿಸಲು ಪಣತೊಟ್ಟಿದ್ದೇವೆ.

ಯಕ್ಷಗಾನ, ದೊಡ್ಡಾಟ, ಬಯಲಾಟ, ತಾಳ ಮದ್ದಳೆ, ಕೋಲಾಟ, ಕರಡಿ ಮಜಲು, ನಂದಿ ಕುಣಿತ, ಸುಗ್ಗಿ ಕುಣಿತ, ಕಂಸಾಳೆ ನೃತ್ಯ ಒಂದೇ ಎರಡೇ, ಅದೆಷ್ಟು ಬಗೆಯ ಜನಪದ ಕಲಾ ಪ್ರಕಾರಗಳು! ಇವುಗಳು ನಶಿಸಿಹೋಗದಂತೆ ಕಾಪಿಟ್ಟುಕೊಳ್ಳುವ ದೊಡ್ಡ ಹೊಣೆಗಾರಿಕೆ ನಮ್ಮ ಮೇಲಿದೆ. ಅವುಗಳಲ್ಲಿ ಆಸಕ್ತಿ ಇರುವ ಕೆಲವರು ತಮ್ಮದೇ ತಂಡಗಳನ್ನು ಕಟ್ಟಿಕೊಂಡು ತಾಲೀಮು ಮಾಡುತ್ತಾ, ಪ್ರದರ್ಶನಗಳನ್ನು ನೀಡುತ್ತಾ ಕಲೆಯ ಉಳಿವಿಗಾಗಿ ಶ್ರಮಿಸುತ್ತಿರುವುದು ನಿಜಕ್ಕೂ ಅಭಿನಂದನೀಯ.

ಅಂತಹ ಒಂದು ಉತ್ಸಾಹೀ ತಂಡದವರಿಂದ ಇದೇ ಜುಲೈ 11ರಂದು ಮೈಸೂರಿನ ಗಾನಭಾರತಿಯು ತನ್ನ ವೀಣೆ ಶೇಷಣ್ಣ ಭವನದಲ್ಲಿ ಒಂದು ತಾಳ ಮದ್ದಳೆ ಕಾರ್ಯಕ್ರಮವನ್ನು ಏರ್ಪಡಿಸಿತ್ತು. ಯಾವ ವೇಷ ಭೂಷಣಗಳಿಲ್ಲದೆ, ರಂಗ ಪರಿಕರಗಳಿಲ್ಲದೆ, ಕೇವಲ ಪಾತ್ರಗಳ ಸಂಭಾಷಣೆಯ ಮೂಲಕವೇ ಪ್ರೇಕ್ಷಕರನ್ನು ಹಿಡಿದಿಟ್ಟುಕೊಳ್ಳುವ ಅನುಪಮ ಕಲಾ ಪ್ರಕಾರ ಈ ತಾಳ ಮದ್ದಳೆ. ಕರಾವಳಿ ಪ್ರದೇಶ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಇದು ತೀರಾ ಸಾಮಾನ್ಯವಾಗಿ ಪ್ರದರ್ಶಿತಗೊಳ್ಳುತ್ತದೆ. ಆದರೆ ಬಯಲು ಸೀಮೆಯವರಿಗೆ ಇದರ ಪರಿಚಯ ಅಷ್ಟಾಗಿ ಇರದು. ಅದರಲ್ಲೂ ಪಟ್ಟಣಗಳಲ್ಲಿ ಇದರ ಪರಿಚಯ ಸ್ವಲ್ಪ ಕಡಿಮೆ ಎಂದೇ ಹೇಳಬೇಕು. ಹಾಗಾಗಿ ಕುತೂಹಲದಿಂದ ಬಂದವರೂ ಎಷ್ಟೋ ಮಂದಿ ಇದ್ದರು.

ತಾಳ–ಮದ್ದಳೆಯಲ್ಲಿ ಒಬ್ಬ ಭಾಗವತ ಇರುತ್ತಾರೆ. ಅವರ ಕೆಲಸವೇನಿದ್ದರೂ ಸಂಭಾಷಣೆಯ ಮೊನಚನ್ನು ಹಾಡಿನ ಮೂಲಕ ಹೆಚ್ಚಿಸುವುದು. ಅವರ ಕೈಯಲ್ಲಿ ತಾಳ. ಎಡ ಬಲದಲ್ಲಿ ಚಂಡೆ ಮತ್ತು ಮದ್ದಳೆಕಾರರು. ಇಬ್ಬರು ಪಾತ್ರಧಾರಿಗಳು. ಭಾಗವತರಿಗೆ ಕಾವ್ಯಗಳ, ಪದ್ಯಗಳ ಆಳವಾದ ಜ್ಞಾನ ಇರಬೇಕು. ಪಾತ್ರಧಾರಿಗಳಿಗೆ ಆಯಾ ಪ್ರಸಂಗದ ಆಮೂಲಾಗ್ರ ತಿಳುವಳಿಕೆಯ ಜೊತೆಗೆ ಆಯಾ ಪಾತ್ರಗಳ ಆಳವಾದ ಪರಿಚಯ ಮತ್ತು ಅದನ್ನು ಅತ್ಯಂತ ಸೂಕ್ಷ್ಮವಾಗಿ ವಿಶ್ಲೇಷಿಸುವ ಚತುರತೆಯೂ ಅಗತ್ಯವಾಗಿ ಇರಬೇಕು. ಅಂದಾಗ ಮಾತ್ರ ಪ್ರದರ್ಶನ ಕಳೆಗಟ್ಟುತ್ತದೆ.

ಅಂದು ಭಾಗವತರಾಗಿ ಸಿರಿಬಾಗಿಲು ರಾಮಕೃಷ್ಣ ಮಯ್ಯ ಅವರು, ಮೊದಲನೆಯ ಶಲ್ಯನಾಗಿ ಸರ್ಪಂಗಳ ಈಶ್ವರ ಭಟ್, ದುರ್ಯೋಧನನಾಗಿ ರಾಧಾಕೃಷ್ಣ ಕಲ್ಚಾರ, ಕರ್ಣನಾಗಿ ಸುಣ್ಣಂಬಳ ವಿಶ್ವೇಶ್ವರ ಭಟ್, ಎರಡನೆಯ ಶಲ್ಯನಾಗಿ ಸುಂಕದಗುಂಡಿ ಗಣಪತಿ ಭಟ್ ಅವರುಗಳು ಪಾತ್ರಧಾರಿಗಳ ಹೊಣೆಯನ್ನು ಹೊತ್ತಿದ್ದರು. ಚಂಡೆಯಲ್ಲಿ ಜಗನ್ನಿವಾಸರಾವ್ ಪುತ್ತೂರು ಮತ್ತು ಮದ್ದಳೆಯಲ್ಲಿ ಅವಿನಾಶ್ ಬೈಪಾಡಿತ್ತಾಯ ಅವರು ಸಹಕರಿಸಿದರು. ಮೊದಲೇ ಹೇಳಿದಂತೆ ಇದು ಕೇವಲ ಸಂಭಾಷಣೆಯನ್ನೇ ಜೀವಾಳವನ್ನಾಗಿ ಮಾಡಿಕೊಂಡಿರುವ ಕಲೆ. ಆದ್ದರಿಂದ ಪಾತ್ರಧಾರಿಗಳ ಮಾತಿನಲ್ಲಿ ಸ್ಪಷ್ಟತೆ, ಭಾಷಾ ಪಾಂಡಿತ್ಯ, ನಿರರ್ಗಳತೆ, ತಲಸ್ಪರ್ಶಿ ಅಧ್ಯಯನ ಇವೆಲ್ಲವನ್ನೂ ಖಂಡಿತವಾಗಿಯೂ ಒಳಗೊಂಡಿರಬೇಕು. ಆದಿಕವಿ ಪಂಪ ಸೂಳ್ ಪಡೆಯಲಪ್ಪುದು ಕಾಣಾ ಮಹಾಜಿರಂಗದೊಳ್ ಎಂದು ಭೀಷ್ಮರ ಬಾಯಿಂದ ಕರ್ಣನಿಗೆ ಹೇಳಿಸಿರುವ ಮಾತಿನ ವಾಚ್ಯಾರ್ಥ ಬೇರೆ, ಸೂಚ್ಯಾರ್ಥ ಬೇರೆ. ನಿನಗೂ ಯುದ್ಧದಲ್ಲಿ ಅವಕಾಶ ಸಿಗುತ್ತದೆ ಕರ್ಣ? ಎಂದು ಮೇಲ್ನೋಟಕ್ಕೆ ಕಾಣುವ ಈ ಮಾತಿನ ಸೂಚ್ಯಾರ್ಥವು ನಮ್ಮೆಲ್ಲರಿಗೂ ಸಿಗುವುದು ಅವಕಾಶವೇ ಹೊರತು, ಜಯವಲ್ಲ ಎಂಬುದಾಗಿದೆ. ಹಾಗೆ ಒಳಾರ್ಥವನ್ನು ಗ್ರಹಿಸಬಲ್ಲ ಚಾಣಾಕ್ಷಮತಿಗಳೂ ಆಗಿರಬೇಕು ಈ ಪಾತ್ರಧಾರಿಗಳು. ಈ ನಾಲ್ಕೂ ಮಂದಿ ಪಾತ್ರಧಾರಿಗಳಲ್ಲಿ ಈ ಎಲ್ಲ ಗುಣಗಳೂ ಯಥೇಚ್ಛವಾಗಿ ಇದ್ದುವು. ಚಕಚಕನೆ ಸಾಗುವ ಸಂಭಾಷಣೆಯ ಓಘದಲ್ಲಿ ಪ್ರೇಕ್ಷಕರು ಕೊಚ್ಚಿಹೋಗುವುದಂತೂ ಖಾತ್ರಿ.

ಅಂದಿನ ಭಾಗವತರ ಕಂಚಿನ ಕಂಠದ ಗಾಯನ, ಚಂಡೆ ಮದ್ದಳೆಯ ಅಬ್ಬರದ ದನಿ, ಪಾತ್ರಧಾರಿಗಳ ಮಿಂಚಿನ ವೇಗದ ಸಂಭಾಷಣೆಯಲ್ಲಿ ಎರಡೂವರೆ ಗಂಟೆಗಳಾದುದು ಗೊತ್ತಾಗಲೇ ಇಲ್ಲ. ದ್ರೌಪದಿ ಬರುವುದು ರಾಮಾಯಣದಲ್ಲೋ ಮಹಾಭಾರತದಲ್ಲೋ ಅರಿಯದ ಇಂದಿನ ಮಕ್ಕಳು ಇಂತಹ ಕಲೆಯಿಂದ, ಕಲಾವಿದರಿಂದ ಸ್ಫೂರ್ತಿ ಪಡೆದರಾದರೆ, ಅದಕ್ಕಿಂತ ಉತ್ತಮ ಬೇರೇನಿಲ್ಲ.

ನಮ್ಮ ಮೈಸೂರಿನ ಅಸಾಮಾನ್ಯರು...



ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಹಿಡಿದು ಯದುವಂಶದ ಕೊನೆಯ ಮಹಾರಾಜರಾದ ಜಯಚಾಮರಾಜ ಒಡೆಯರ್ ಆಡಳಿತದ ಅವಧಿಯವರೆಗೆ ಅನೇಕ ಶ್ರೇಷ್ಠ ಮಹನೀಯರು ಮೈಸೂರು ರಾಜ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅಂತಹ ಕೆಲವರ ಹೆಸರುಗಳನ್ನು ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಇತಿಹಾಸದ ಪುಸ್ತಕಗಳಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಕಾಣುತ್ತೇವೆ. ಆಡಳಿತದ ಪ್ರಮುಖ ಹುದ್ದೆಯಲ್ಲಿದ್ದು, ಗಣನೀಯ ಸೇವೆ ಸಲ್ಲಿಸಿದ್ದ ಕೆಲವರ ಹೆಸರುಗಳು ಅವುಗಳಲ್ಲಿ ಕಂಡು ಬಂದರೂ, ಅವರಂತೆಯೇ ಅಪೂರ್ವ ಸೇವೆ ಸಲ್ಲಿಸಿರುವ ಇತರ ನೂರಾರು ಮಂದಿ ಎಲ್ಲಿಯೂ ಪ್ರಸ್ತಾಪಗೊಳ್ಳದೆ ಎಲೆಮರೆಕಾಯಿಯಾಗಿ ಉಳಿದು ಹೋಗಿದ್ದಾರೆ. ನೆನಪಿನ ಅಂಗಳದಿಂದ ಜಾರಿ ಹೋಗಿದ್ದಾರೆ. ಹಾಗೆ ಸೇವೆ ಸಲ್ಲಿಸಿದರಲ್ಲಿ ಹಲವಾರು ಮಂದಿ ಅಂದಿಗೆ ಖ್ಯಾತನಾಮರಾಗಿದ್ದರೂ ಇಂದು ಅವರ ಬಗ್ಗೆ ನಮಗೆ ಹೆಚ್ಚು ತಿಳಿಯದೆ ಹೋಗಿದೆ. ನೆನಪಿನಿಂದ ಅಳಿಸಿಹೋಗಿದ್ದಾರೆ. ಕೆಲವರ ಸೇವೆಯನ್ನಾದರೂ ಇಲ್ಲಿ ಗುರುತಿಸುವ ಪ್ರಯತ್ನ ನನ್ನದು. ಇಂತಹ ಪ್ರಯತ್ನ ಬಹಳ ಹಿಂದೆಯೇ ಪ್ರಾರಂಭಿಸುವ ಉದ್ದೇಶ ಹೊಂದಿದ್ದರೂ, ಅದು ಈಗ ಸಾಧ್ಯವಾಗುತ್ತಿದೆ. ನೆನಪಿನಂಗಳದಿಂದ ಮರೆಯಾದ ಮಹನೀಯರ ಪರಿಚಯ ಒಂದು ಮಾಲಿಕೆಯಾಗಿ ಪ್ರಕಟಗೊಳ್ಳಲಿದೆ. ಅವು 'ಮೈಸೂರು ಮಿತ್ರ' ಓದುಗರಿಗೆ ಮೆಚ್ಚುಗೆಯಾದರೆ, ಅದೇ ನನಗೆ ಬರೆದ ತೃಪ್ತಿ.

27. 'ಗುಬ್ರಾ ಕಚೇರಿ' ಬಾಬುರಾವ್



ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ. 87627 88685

ಮುಮ್ಮಡಿ ಕೃಷ್ಣರಾಜ ಒಡೆಯರ ಅವಧಿಯಲ್ಲಿ ದಿವಾನರಾಗಿದ್ದ ಪೂರ್ಣಯ್ಯನವರು ಅತ್ಯಂತ ಪ್ರಭಾವಶಾಲಿ ವ್ಯಕ್ತಿ. ಅವರ ಮಾತನ್ನು ತೆಗೆದುಹಾಕುವವರು ಮೈಸೂರಿನ ದರ್ಬಾರಿನಲ್ಲಿ ಯಾರೂ ಇರಲಿಲ್ಲ. ಇವರು ದಿವಾನರಾಗಿ ದರ್ಪದಿಂದ ಆಡಳಿತ ನಡೆಸಿದರು.



ಹೈದರ್ ಆಲಿ ಖಾನ್ ಕರೆದು ಕೊಟ್ಟ ಕೆಲಸದ ಮೇರೆ ಮೈಸೂರಿಗೆ ಬಂದು ನೆಲೆಸಿದ ಪೂರ್ಣಯ್ಯನವರು ತಮ್ಮ ಹುದ್ದೆಯಲ್ಲಿ ಕ್ರಮೇಣ ಮೇಲಕ್ಕೆ ಬಂದು ಹೈದರ್, ಟಿಪ್ಪು ಸುಲ್ತಾನ್ ಮತ್ತು ಮುಮ್ಮಡಿ ಕೃಷ್ಣರಾಜ ಒಡೆಯರು... ಹೀಗೆ ಮೂವರು ಆಡಳಿತಗಾರರಿಗೆ ದಿವಾನರಾಗಿ ಕೀರ್ತಿ ಗಳಿಸಿದರು. ಆದರೆ ಇವರ ದರ್ಪ ಎಷ್ಟಿತ್ತೆಂದರೆ ಚಿಕ್ಕವರಾಗಿದ್ದ ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರನ್ನೂ ಅಲಕ್ಷ್ಯ ದಿಂದ ನೋಡುತ್ತಿದ್ದರು. ದರ್ಬಾರಿನಲ್ಲಿಯೇ ಅವರು ಎಲ್ಲರ ಎದುರಿಗೆ ಮಹಾರಾಜರನ್ನು ಟೀಕಿಸುತ್ತಿದ್ದರು. ಇದು ಇತಿಹಾಸ.

ಅಂತಹ ಪ್ರಬಲ ದಿವಾನರನ್ನು ಅವರಷ್ಟೇ ಚಾಣಕ್ಯರಾಗಿದ್ದ ದರ್ಬಾರಿನ ಇನ್ನೊಬ್ಬ ಅಧಿಕಾರಿ ತೀವ್ರವಾಗಿ ವಿರೋಧಿಸುತ್ತಿದ್ದರು ಎಂದರೆ ಆಶ್ಚರ್ಯವಾಗಬಹುದು. ಆದರೆ ಇದು ನಿಜವೂ ಹೌದು. ಪ್ರಾಯಶಃ ಈ ಅಧಿಕಾರಿಗೆ ದಿವಾನ್ ಪೂರ್ಣಯ್ಯನವರ ವರ್ತನೆ ಸರಿಯಾಗಿ ಕಂಡು ಬರಲಿಲ್ಲ ಎಂದು ಕಾಣುತ್ತದೆ. ಮಹಾರಾಜರನ್ನೇ ಟೀಕಿಸುತ್ತಿದ್ದ ಅವರ ಮನಸ್ಸಿಗೆ ಹಿಡಿದೇ ಹೋಗಿರಬೇಕು. ಪ್ರಾಯಶಃ ಈ ಕಾರಣದಿಂದ ಈ ಅಧಿಕಾರಿಗೆ ದಿವಾನ್ ಪೂರ್ಣಯ್ಯನವರನ್ನು ಕಂಡರೆ ಆಗುತ್ತಿರಲಿಲ್ಲ ಎಂದು ಕಾಣುತ್ತದೆ. ಇದರಿಂದಾಗಿ ಈ ಅಧಿಕಾರಿ ಪೂರ್ಣಯ್ಯನವರ ಸಂಪೂರ್ಣ ವಿರೋಧಿಯಾಗಿದ್ದರು. ಅವರೆಂದರೆ ಬಾಬುರಾವ್. ಆದರೆ ಅವರ ಹೆಸರು ಬಹಳಷ್ಟು ಜನರಿಗೆ ತಿಳಿಯದೆ ಹೋಗಿದೆ.

ಮೈಸೂರು–ಬೆಂಗಳೂರು ನಡುವೆ ಓಡಾಡುವವರಿಗೆ ಶ್ರೀರಂಗಪಟ್ಟಣದ ಬಳಿಯ ಬಾಬುರಾಯನಕೊಪ್ಪಲು ಗಮನಕ್ಕೆ ಬರದೆ ಇರುವುದಿಲ್ಲ. ಆ ಬಾಬುರಾಯರೇ ಈಗ ಪ್ರಸ್ತಾಪಿಸಲಾಗುತ್ತಿರುವ ದರ್ಬಾರಿನ ಪ್ರಮುಖ ವ್ಯಕ್ತಿ. ಬಾಬುರಾವ್ ಪ್ರಾಯಶಃ ಈ ಕೊಪ್ಪಲಿನವರಿರಬೇಕು.

ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಶ್ರೀರಂಗಪಟ್ಟಣದಿಂದ ಸ್ವಲ್ಪ ದೂರದಲ್ಲಿದೆ ಬಾಬುರಾಯನ ಕೊಪ್ಪಲು. ಇದೊಂದು ಸಣ್ಣಗ್ರಾಮ. ಮೈಸೂರು–ಬೆಂಗಳೂರು ದಾರಿಯಲ್ಲಿ ಓಡಾಡುವವರು ಬಾಬುರಾಯನ ಕೊಪ್ಪಲ್ ಮುಖಾಂತರವೇ ಓಡಾಡಬೇಕು. ಇದರಿಂದಾಗಿ ಇಲ್ಲಿ ಓಡಾಡುವವರಿಗೆ ಇದು ಪರಿಚಿತ ಗ್ರಾಮ. ಒಂದು ಕಾಲಕ್ಕೆ ಖ್ಯಾತ ಸ್ಥಳ.

ದಿವಾನ್ ಪೂರ್ಣಯ್ಯನವರಂತೆಯೇ ಬಾಬುರಾವ್ ಚಿಕ್ಕವರಾಗಿದ್ದಾಗಲೇ ಹೈದರಾಲಿಯ ಆಡಳಿತದ ಅವಧಿಯಲ್ಲಿ ಕೆಲಸಕ್ಕೆ ಸೇರಿದರು. ಈಗಿನ ತಮಿಳುನಾಡಿನ ತಿರುವಳ್ಳೂರ್ ಜಿಲ್ಲೆಯಲ್ಲಿ ಪೆರುಂಬಾಕ್ಕಂ ಎಂಬ ಸ್ಥಳವಿದೆ. ಅದು ಚೆನ್ನೈ ನಗರದಿಂದ ಸುಮಾರು 56 ಕಿಲೋ ಮೀಟರ್ ದೂರದಲ್ಲಿ ಕಂಚೀಪುರದ ಬಳಿಯಲ್ಲಿದೆ. ಮೈಸೂರಿನ ಇತಿಹಾಸದ ದೃಷ್ಟಿಯಲ್ಲಿ ಇದೊಂದು ಐತಿಹಾಸಿಕ ಸ್ಥಳ. ಇಲ್ಲಿಯೇ 1780ರ ಸೆಪ್ಟೆಂಬರ್ 10ರಂದು ಮೈಸೂರು–ಬ್ರಿಟಿಷರ ನಡುವೆ ಎರಡನೇ ಮೈಸೂರು ಯುದ್ಧ ನಡೆದದ್ದು. ಇದಕ್ಕೆ ಪೊಲ್ಲಿಲೂರು ಯುದ್ಧ ಎಂದು ಇನ್ನೊಂದು ಹೆಸರು. ಆ ಹೆಸರಿನಲ್ಲಿಯೇ ಪ್ರಸಿದ್ಧಿ. ಮೈಸೂರು ಸೈನ್ಯ ಬ್ರಿಟಿಷರ ವಿರುದ್ಧ ಹೋರಾಡಿ ಅವರ ಸೈನ್ಯವನ್ನು ಮುನ್ನಡೆಸುತ್ತಿದ್ದ ಕರ್ನಲ್ ವಿಲಿಯಂ ಬೇಲಿಯನ್ನು ಈ ಯುದ್ಧದಲ್ಲಿ ಸೆರೆ ಹಿಡಿಯಿತು. ಹೈದರ್–ಟಿಪ್ಪು ಇಬ್ಬರೂ ಈ ಯುದ್ಧದಲ್ಲಿ ಬ್ರಿಟಿಷ್ ಸೈನ್ಯದ ವಿರುದ್ಧ ಹೋರಾಡಿ ಗಮನಾರ್ಹ ಜಯ ಗಳಿಸಿದರು. ಈ ಜಯದಿಂದಾಗಿ ಹೈದರ್ ಮತ್ತು ಟಿಪ್ಪುವಿನ ಬಗ್ಗೆ ಬ್ರಿಟಿಷರು ಹೆದರುವಂತಾಯಿತು. ಟಿಪ್ಪುವಿನ ಸಾಹಸವನ್ನು ಮೆಚ್ಚುವಂತಾಯಿತು. ಈ ಯುದ್ಧದಲ್ಲಿ ಬಾಬುರಾವ್ ಹೈದರನ ಪರವಾಗಿ ಪಾಲ್ಗೊಂಡಿದ್ದರು.

ತಂದೆ ಮತ್ತು ಮಗನ ವಿಜಯಕ್ಕೆ ಕಾರಣರಾದವರ ಪೈಕಿ ಇವರೂ ಒಬ್ಬರು. ಈ ಪೊಲ್ಲಿಲೂರು ಯುದ್ಧವನ್ನು ಶ್ರೀರಂಗಪಟ್ಟಣದ ದರಿಯಾ ದೌಲತ್ ಗೋಡೆಯ ಮೇಲೆ ಚಿತ್ರಿಸಲಾಗಿದ್ದು ಅದರಲ್ಲಿ ಕರ್ನಲ್ ಬೇಲಿ ಮೈಸೂರು ಸೈನ್ಯದ ಸೆರೆಯಾಳಾಗಿರುವುದನ್ನು ತೋರಿಸಲಾಗಿದೆ. ಮೈಸೂರು ಸೈನ್ಯದ ಮುಂದಾಳತ್ವದಲ್ಲಿ ಹೈದರ್ ಮತ್ತು ಟೀಪು ಇಬ್ಬರೂ ತಮ್ಮ ಸೈನ್ಯದೊಂದಿಗೆ ಇದ್ದಾರೆ.

ಬಾಬುರಾವ್ ಹೈದರನ ಸಾವಿನವರೆಗೆ ಸೈನ್ಯದಲ್ಲಿ ಕರ್ತವ್ಯ ಮಾಡುತ್ತಿದ್ದು ನಂತರ ಗುಬ್ರಾ ಕಚೇರಿಗೆ ಸೇರಿದರು. ಗುಬ್ರಾ ಕಚೇರಿಗೆ ನಂತರ ದಿವಾನರ ಕಚೇರಿ ಎಂದು ಹೆಸರು ಬಂದಿತು. ಬಾಬುರಾವ್ ಗುಬ್ರಾ ಕಚೇರಿಯ ಮುಖ್ಯಸ್ಥರೂ ಆಗಿ ಅವರನ್ನು 'ಗುಬ್ರಾ' ಕಚೇರಿ ಬಾಬುರಾವ್ ಎಂದೇ ಗುರುತಿಸಲಾಗುತ್ತಿತ್ತು. ಇಲ್ಲಿ ಕೆಲಸ ಮಾಡುತ್ತಿದ್ದಾಗ ಮುಮ್ಮಡಿ ಕೃಷ್ಣರಾಜರ ಆಡಳಿತದ ಅವಧಿಯಲ್ಲಿ ಬಾಬುರಾವ್ ಅವರನ್ನು ಮೂರು ಬಾರಿ ದಿವಾನರನ್ನಾಗಿ ನೇಮಿಸಲಾಯಿತು. ಮೊದಲ ಬಾರಿಗೆ 1817–18ರಲ್ಲಿ ಬರ್ಗೀರ್ ಭಕ್ಷಿರಾಮರಾಯರ ನಂತರ ದಿವಾನರಾದರೆ, 1820–21 ಹಾಗೂ 1822–25ರಲ್ಲಿ ಅವರನ್ನು ಎರಡನೇ ಬಾರಿಗೆ ದಿವಾನರನ್ನಾಗಿ ನೇಮಿಸಲಾಯಿತು. ಆದರೆ ನಿವೃತ್ತಿಯ ನಂತರವೂ ಅಧಿಕಾರ ಅವರನ್ನು ಕೈಬಿಡಲಿಲ್ಲ. ಹಿಂಬಾಲಿಸಿಕೊಂಡೇ ಬಂದಿತು. 1831ರಲ್ಲಿ ಬ್ರಿಟಿಷ್ ಕಮಿಷನ್ ಆಡಳಿತವನ್ನು ವಹಿಸಿಕೊಂಡ ಮೇಲೆ ಸೀನಿಯರ್ ಕಮಿಷನರ್ ಕರ್ನಲ್ ಬ್ರಿಗ್ಸ್ ನಿವೃತ್ತರಾಗಿದ್ದ ಬಾಬುರಾವ್ ಅವರನ್ನು ಮತ್ತೆ ಕರೆದು ದಿವಾನರಾಗುವಂತೆ ಕೇಳಿದರು. ಬಾಬೂರಾವ್ ಮೈಸೂರಿನ ರೆಸಿಡೆಂಟ್ ಕಾಸಾ ಮೈಜರ್ ಅವರ ಸಲಹೆ ಹಾಗೂ ಮಹಾರಾಜ ಕೃಷ್ಣರಾಜ ಒಡೆಯರ ಒತ್ತಾಯದ ಮೇರೆಗೆ 1832ರ ಮೇ 15ರಂದು ಮತ್ತೆ ಅಧಿಕಾರ ವಹಿಸಿಕೊಂಡರು. ಹೀಗೆ ಅವರು ಮೂರು ಬಾರಿ ದಿವಾನರಾಗಿ ಸಂಸ್ಥಾನದಲ್ಲಿ ಸೇವೆ ಸಲ್ಲಿಸಲು ಕಾರಣ ಅವರಿಗೆ ಆಡಳಿತದ ವ್ಯವಹಾರಗಳಲ್ಲಿ ಮತ್ತು ಕಂದಾಯ ವಿಷಯಗಳಲ್ಲಿ ಇದ್ದ ಅಪಾರ ಜ್ಞಾನ ಮತ್ತು ಅನುಭವ. ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರು ಪೂರ್ಣಯ್ಯನವರ ನಂತರ ಹಣಕಾಸು ಸಚಿವ ಸ್ಥಾನದಲ್ಲಿ ಕೆಲಸ ನಿರ್ವಹಿಸಲು ಬಾಬುರಾವ್ ಸಮರ್ಥ ಅಧಿಕಾರಿ ಎಂದು ಪರಿಗಣಿಸಿದ್ದರು. ಮೂರು ಬಾರಿಗೆ ದಿವಾನರಾದ ನಂತರ ಬಾಬೂರಾಯರು ನಿವೃತ್ತರಾದರು.

1832ರ ಮೇ 14ರ ಟಿಪ್ಪಣಿಯಲ್ಲಿ ಕರ್ನಲ್ ಬ್ರಿಗ್ಸ್ ಬಾಬುರಾವ್ ಅವರ ಬಗ್ಗೆ ಪ್ರಸ್ತಾಪಿಸುತ್ತಾ ಮೈಸೂರಿನ ಕಂದಾಯ ವಿಚಾರಗಳ ಬಗ್ಗೆ ಅವರಿಗಿರುವ ಅನುಭವ ದೇಶದ ಯಾವುದೇ ವ್ಯಕ್ತಿಯನ್ನು ಮೀರಿಸುತ್ತದೆ ಎಂದು ಬರೆದಿದ್ದಾರೆ. ಬಾಬುರಾವ್ 1934ರಲ್ಲಿ ನಿಧನರಾದರು. ಆ ನಂತರ ದಿವಾನರ ಕಚೇರಿಯನ್ನು ರದ್ದು ಮಾಡಿ ಅವರ ಕಚೇರಿಯನ್ನು ಮೈಸೂರಿನ ಕಮಿಷನರ್ ಅವರ ಕಚೇರಿಯೊಂದಿಗೆ ಸೇರಿಸಲಾಯಿತು.

ಅಂದಿಗೆ ಹೆಸರು ಗಳಿಸಿದ್ದ ಈ ಸಮರ್ಥ ದಿವಾನ ಬಾಬುರಾವ್ ಅವರ ಹೆಸರನ್ನೇ ಶ್ರೀರಂಗಪಟ್ಟಣದ ಬಳಿಯ ಈ ಸ್ಥಳಕ್ಕೆ ಇಟ್ಟಿರುವುದು. ಆದರೆ ಬಾಬುರಾಯನಕೊಪ್ಪಲಿನಲ್ಲಿ ಅವರ ನೆನಪಿಗಾಗಿ ಇಂದು ಯಾವುದೇ ಗುರುತುಗಳು ಇಲ್ಲದಿರುವುದು ವಿಷಾದನೀಯ. ಈ ಗ್ರಾಮವನ್ನು ಕಂಡಾಗ ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರು ಹಾಗೂ ಬ್ರಿಟಿಷ್ ಸರ್ಕಾರ ಇಬ್ಬರಿಂದಲೂ ಮನ್ನಣೆ ಗಳಿಸಿ ಮೂರು ಬಾರಿ ಮೈಸೂರಿಗೆ ದಿವಾನರಾಗಿ ನೇಮಕಗೊಂಡು ದಾಖಲೆ ನಿರ್ಮಿಸಿದ ಬಾಬುರಾವ್ ಯಾರು ಎಂದು ಕೇಳುವಂತಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ

ಭಾನುವಾರ 14 ಜುಲೈ 2024

ಲಯನ್ಸ್ ಕ್ಲಬ್ ಆಫ್ ಮೈಸೂರು ಅಂಡಾಸಡರ್ಸ್ ನೂತನ ಪದಾಧಿಕಾರಿಗಳ ಪದಗ್ರಹಣ



ನಗರದ ಖಾಸಗಿ ಹೋಟೆಲ್‌ನಲ್ಲಿ ಲಯನ್ಸ್ ಕ್ಲಬ್ ಆಫ್ ಮೈಸೂರು ಅಂಡಾಸಡರ್ಸ್‌ನ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ನಡೆಯಿತು.

ಮೈಸೂರು, ಜು.13(ಎಂಕೆ)– ಮೈಸೂರಿನ ಹೆಬ್ಬಾಳಿನಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ಲಯನ್ಸ್ ಕ್ಲಬ್ ಆಫ್ ಮೈಸೂರು ಅಂಡಾಸಡರ್ಸ್‌ನ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ನಡೆಯಿತು. ನೂತನ ಅಧ್ಯಕ್ಷ ವಿ.ಶ್ರೀಧರ್, ಕಾರ್ಯದರ್ಶಿ ಪಿ.ಮಲ್ಲಿಕಾರ್ಜುನಪ್ಪ ನೇತೃತ್ವದಲ್ಲಿ 2024–25ನೇ ಸಾಲಿನ ನೂತನ ಪದಾಧಿಕಾರಿಗಳಾಗಿ ಆಯ್ಕೆಯಾದವರಿಗೆ ನಿವೃತ್ತ ಪೊಲೀಸ್ ಆಯುಕ್ತ ಸಿ.ಚಂದ್ರಶೇಖರ್ ಶುಭ ಕೋರಿದರು. ಬಳಿಕ ಮಾತನಾಡಿದ ಅವರು, ಲಯನ್ಸ್ ಸಂಸ್ಥೆಯ ಸೇವಾ ಕಾರ್ಯಗಳು ಮುಂದುವರೆಯಲಿ ಎಂದು ಹಾರೈಸಿದರು. ಲಯನ್ಸ್ ಅಂತರ ರಾಷ್ಟ್ರೀಯ ಸಂಸ್ಥೆಯ ಎಸ್.ರಾಮಚಂದ್ರನ್, ಕೆ.ದೇವೇಗೌಡ, ಮಾಜಿ ಜಿಲ್ಲಾ ಗೌರ್‍ನರ್ ಎಂ.ಅನಿಲ್ ಕುಮಾರ್, ಲಯನ್ಸ್ ಕ್ಲಬ್ ಆಫ್ ಮೈಸೂರು ಅಂಡಾಸಡರ್ಸ್‌ನ ಮಾಜಿ ಅಧ್ಯಕ್ಷ ಹೆಚ್.ಸಿ.ಕಾಂತರಾಜು, ಉಪಾಧ್ಯಕ್ಷ ಸಿ.ಆರ್.ದಿನೇಶ್, ಪದಗ್ರಹಣ ಕಮಿಟಿ ಮುಖ್ಯಸ್ಥ ಡಾ. ಆರ್.ಡಿ.ಕುಮಾರ್, ಖಜಾಂಚಿ ಹೆಚ್.ಆರ್.ರವಿಚಂದ್ರ ಮತ್ತಿತರರಿದ್ದರು.

ಒಂದನೇ ಪುಟದಿಂದ

ತನಿಖೆಗೆ ರಾಜ್ಯಪಾಲರು ಅನುಮತಿ ನೀಡಬೇಕು

ಪ್ರಾಥಮಿಕ ನೋಟಿಫಿಕೇಷನ್ ಮಾಡಿ 1998ರಲ್ಲಿ ಅಂತಿಮ ನೋಟಿಫಿಕೇಷನ್ ಆಗಿದೆ. 1998ರಲ್ಲಿ ಸಿದ್ದರಾಮಯ್ಯ ಉಪಮುಖ್ಯಮಂತ್ರಿ ಆಗಿದ್ದಾಗ ಈ ಭೂಮಿ ದೇವರಾಜ್ ಎಂಬುವರ ಹೆಸರಿನಲ್ಲಿ ಪೌತಿ ಖಾತೆ ಆಗಿರುತ್ತೆ. ಅವರು ಅದನ್ನು ಡಿ–ನೋಟಿಫಿಕೇಷನ್ ಮಾಡಿಸಿಕೊಂಡಿರುತ್ತಾರೆ.

2004ರವರೆಗೂ ಯಾರೂ ಈ ಭೂಮಿಯ ಬಗ್ಗೆ ತಕರಾರು ತೆಗೆದಿರುವುದಿಲ್ಲ. ಇದನ್ನು ಅದೇ ವರ್ಷ ಮಲ್ಲಿಕಾರ್ಜುನ ಸ್ವಾಮಿ ಅವರು ದೇವರಾಜ್ ಅವರಿಂದ ಖರೀದಿ ಮಾಡಿರುತ್ತಾರೆ.

ಮಲ್ಲಿಕಾರ್ಜುನಸ್ವಾಮಿ, ಕೃಷಿ ಭೂಮಿಯನ್ನು ವಸತಿ ಸಮುಚ್ಚಯ ನಿರ್ಮಾಣಕ್ಕೆ ಭೂಪರಿವರ್ತನೆಗೆ ಅನುಮತಿ ನೀಡಬೇಕೆಂದು ಡಿಸಿ ಅವರಿಗೆ ಅರ್ಜಿ ಸಲ್ಲಿಸುತ್ತಾರೆ. ಆ ವೇಳೆಗೆ ಅಲ್ಲಿ ಕೆಲವು ನಿವೇಶನಗಳ ಹಂಚಿಕೆಯಾಗಿ ಪಾರ್ಕ್ ಸಹಾ ಆಗಿರುತ್ತದೆ. ಅಂದಿನ ಜಿಲ್ಲಾಧಿಕಾರಿಗಳಾಗಲೀ, ಯಾವುದೇ ಅಧಿಕಾರಿಗಳಾಗಲೀ ಸ್ಥಳ ಪರಿಶೀಲನೆ ಮಾಡದೆ ಭೂಪರಿವರ್ತನೆ ಮಾಡಿಕೊಡುತ್ತಾರೆ.

ಭೂಪರಿವರ್ತನೆ ನಂತರ ಮಲ್ಲಿಕಾರ್ಜುನಸ್ವಾಮಿ, ಮುಖ್ಯಮಂತ್ರಿ ಅವರ ಪತ್ನಿಯೂ ಆದ ತಮ್ಮ ಸಹೋದರಿಗೆ ಈ ಭೂಮಿಯನ್ನು ಅರಿಶಿನ–ಕುಂಕುಮ ರೂಪದಲ್ಲಿ ಉಡುಗೊರೆ ನೀಡುತ್ತಾರೆ.

ಭೂಮಿ ನೋಂದಣಿ ಸಂದರ್ಭದಲ್ಲೂ ಕೃಷಿ ಭೂಮಿಯೆಂದೇ ನಮೂದಿಸಿರುತ್ತಾರೆ. 2013ರಲ್ಲಿ ಸಿದ್ದರಾಮಯ್ಯ ಅವರು ವಿಧಾನಸಭಾ ಚುನಾವಣೆಗೆ ಸ್ಪರ್ಧಿಸುವ ವೇಳೆ ಚುನಾವಣಾ ಪ್ರಮಾಣಪತ್ರದಲ್ಲಿ ಈ ಭೂಮಿಯ ಉಲ್ಲೇಖ ಮಾಡಿರುವುದಿಲ್ಲ.

ಆ ನಂತರ ಅವರು ಮುಖ್ಯಮಂತ್ರಿ ಆಗುತ್ತಾರೆ, 2014ರಲ್ಲಿ ಅವರ ಕುಟುಂಬದವರು ಮುಡಾಗೆ ಪತ್ರ ಬರೆದು ನಮ್ಮ ಭೂಮಿ ಅತಿಕ್ರಮಣ ಮಾಡಿ ಬಡಾವಣೆ ನಿರ್ಮಿಸಿದ್ದೀರಿ, ನಮಗೆ ಪರ್ಯಾಯ ಜಾಗ ಕೊಡಿ ಎಂದು ಕೇಳುತ್ತಾರೆ.

ಈ ಸಂಬಂಧ ಮುಡಾ ಸರಣಿ ಸಭೆಗಳನ್ನು ನಡೆಸಿ, ಅಧಿಕಾರದ ಒತ್ತಡಕ್ಕೆ ಮಣಿದು ನಿಯಮಬಾಹಿರವಾಗಿ 2020ರಲ್ಲಿ ಮೈಸೂರಿನ ಜಲದರ್ಶಿನಿ ಅತಿಥಿ ಗೃಹಕ್ಕೆ ನೋಂದಣಿ ಅಧಿಕಾರಿಗಳನ್ನು ಕರೆಸಿಕೊಂಡು ಅಲ್ಲೇ 14 ನಿವೇಶನಗಳನ್ನು ಅವರ ಕುಟುಂಬಕ್ಕೆ ಮುಡಾ ನೋಂದಣಿ ಮಾಡಿಕೊಡುತ್ತದೆ.

ಪ್ರತಿ ನಿವೇಶನಕ್ಕೆ ಒಂದು ಸಾವಿರ ರೂ. ನಂತೆ ನೋಂದಣಿ ಶುಲ್ಕ ಕಟ್ಟಿಸಿಕೊಂಡು ನಿವೇಶನ ದಾಖಲೆಗಳನ್ನು ನೀಡುತ್ತದೆ. ಮುಡಾ ಬೈಲಾ ಪ್ರಕಾರ ಇವರ ಭೂಮಿಗೆ ಕೇವಲ ಎರಡು ನಿವೇಶನಗಳನ್ನು ಮಾತ್ರ ಅದೇ ಬಡಾವಣೆಯಲ್ಲಿ ನೀಡಬೇಕಿದೆ. ಆದರೆ, ಇವರು ಅಭಿವೃದ್ಧಿ ಹೊಂದಿದ ಬೇರೆ ಬಡಾವಣೆಗಳಲ್ಲಿ 14 ನಿವೇಶನಗಳನ್ನು ಮಂಜೂರು ಮಾಡಿಸಿಕೊಳ್ಳುತ್ತಾರೆ.

ಸಿದ್ದರಾಮಯ್ಯ ಅವರ ಅಧಿಕಾರಾವಧಿಯಲ್ಲೇ ಈ ಎಲ್ಲಾ ಭ್ರಷ್ಟಾಚಾರ ನಡೆದಿದೆ. ಬೇರ್‍ಯಾವುದೇ ತನಿಖೆಯಿಂದಲೂ ಸತ್ಯ ಹೊರ ಬರುವುದಿಲ್ಲ. ಯಾರಾದರೂ ಕಾನೂನು ತಜ್ಞರು ಅನುಮತಿ ಕೋರಿದರೆ, ರಾಜ್ಯಪಾಲರು ತನಿಖೆಗೆ ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ಶಿಕ್ಷಕಿ ಕಟ್ಟಿಹಾಕಿ ಚಿನ್ನಾಭರಣ ದರೋಡೆ

ಬಂದು, ಎಟಿಎಂ ಕಾರ್ಡ್ ವರ್ಕ್ ಆಗುತ್ತಿಲ್ಲ. ಫೋನ್‌ಪೇ ಅಥವಾ ಗೂಗಲ್‌ಪೇ ಮಾಡುತ್ತೇವೆ ಮೊಬೈಲ್ ನಂಬರ್ ಕೊಡಿ ಎಂದು ಕೇಳಿದ್ದಾರೆ. ಫೋನ್‌ಪೇ ವ್ಯವಸ್ಥೆ ಇಲ್ಲ ಎಂದು ಶಾಂತಮ್ಮ ಹೇಳಿದ್ದಾರೆ. ನನ್ನ ಗಂಡ ಊರಿಗೆ ಹೋಗಿ ಶುಕ್ರವಾರ ಸಾಮಾನುಗಳ ತೆಗೆದುಕೊಂಡು ಬರುತ್ತಾರೆ. ಆ ದಿನವೇ ನಾವು ಬಂದು ಅಡ್ವಾನ್ಸ್ ನೀಡಿ, ಹಾಲು ಉಕ್ಕಿಸಿ ಮನೆಗೆ ಬರುತ್ತೇವೆ ಎಂದು ಯುವತಿ ಹೇಳಿದ್ದಾಳೆ.

ಸ್ವಲ್ಪ ಸಮಯ ರೆಸ್ಟ್ ಮಾಡುತ್ತೇವೆ ಕೀ ಕೊಡಿ ಎಂದು ಹೇಳಿ, ಹಾಗೆಯೇ ಫೋನ್ ಚಾರ್ಜರ್ ಅನ್ನೂ ಕೇಳಿ ಪಡೆದಿದ್ದಾರೆ. ಅರ್ಧ ಗಂಟೆ ಬಿಟ್ಟು ಬಂದು 5 ಗಂಟೆಗೆ ಬೆಂಗಳೂರಿಗೆ ಟ್ರೈನ್ ಇದೆ ಎಂದು ಹೇಳಿ ಚಾರ್ಜರ್ ವಾಪಸ್ ಕೊಟ್ಟು, ಕುಡಿಯಲು ನೀರು ಕೇಳಿದ್ದಾರೆ.

ಶಾಂತಮ್ಮನವರು, ಅಡುಗೆ ಮನೆಗೆ ಹೋಗಿ ಬಾಟಲಿಗೆ ನೀರು ತುಂಬಿಸಿಕೊಳ್ಳುತ್ತಿದ್ದಾಗ ಯುವತಿ ಹಿಂದಿನಿಂದ ಹೋಗಿ ಶಾಂತಮ್ಮರ ತಬ್ಬಿ ಹಿಡಿದು, ಬಾಯಿ ಅದುಮಿಟ್ಟುಕೊಂಡಿದ್ದಾಳೆ. ಆ ಹುಡುಗ ಅವರನ್ನು ಎಳೆದು ತಂದು ಮೆಟ್ಟಿಲು ಬಳಿ ಕಬ್ಬಿಣದ ರಾಡ್‌ಗೆ ಸೀರೆಯಿಂದ ಕಟ್ಟಿ ಹಾಕಿದ್ದಾರೆ.

ಕೈ–ಕಾಲು ಕಟ್ಟಿ, ಬಾಯಿಗೆ ಬಟ್ಟೆ ತುರುಕಿ, ಕೂಗಾಡಿದರೆ ಕಣ್ಣಿಗೆ ಖಾರದ ಪುಡಿ ಹಾಕುತ್ತೇವೆ ಎಂದು ಬ್ಯಾಗ್‌ನಿಂದ ಚಾಕು ತೆಗೆದು ತೋರಿಸಿ, ಬೆದರಿಸಿ ಶಾಂತಮ್ಮರ ಕೊರಳಲ್ಲಿದ್ದ 65 ಗ್ರಾಂ ತೂಗುವ ಮಾಂಗಲ್ಯ ಸರ ಕಿತ್ತುಕೊಂಡಿದ್ದಾರೆ. ಬಳಿಕ ಕಟ್ಟಿಂಗ್ ಪ್ಲೇಯರ್‌ನಿಂದ ಬಲಗೈನಲ್ಲಿದ್ದ 12 ಗ್ರಾಂ ಚಿನ್ನದ ಬಳೆಯನ್ನು ಕಟ್ ಮಾಡಿಕೊಂಡು ಸಂಜೆ ಸುಮಾರು 4.30ರ ವೇಳೆಗೆ ಪರಾರಿಯಾಗಿದ್ದಾರೆ.

ನಂತರ ಶಾಂತಮ್ಮ ಪ್ರಯಾಸಪಟ್ಟು ಅರಚುವುದನ್ನು ಕೇಳಿಸಿಕೊಂಡ ಎದುರು ಮನೆಯ ಉಮಾ ಎಂಬುವರು ಓಡಿ ಬಂದು ಕಟ್ಟು ಬಿಡಿಸಿ ನೀರು ಕುಡಿಸಿದ್ದಾರೆ. ವಿಷಯ ತಿಳಿದು, ಅವರ ಸೊಸೆ ಘಟನೆ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ವಿಜಯನಗರ ಉಪ ವಿಭಾಗದ ಎಸಿಪಿ ಗಜೇಂದ್ರಪ್ರಸಾದ್, ಹೆಬ್ಬಾಳು ಠಾಣೆ ಇನ್ಸ್‌ಪೆಕ್ಟರ್ ಎ. ಮಲ್ಲೇಶ್ ಹಾಗೂ ಸಿಬ್ಬಂದಿ ಘಟನಾ ಸ್ಥಳಕ್ಕೆ ಧಾವಿಸಿ ಮಹಜರು ನಡೆಸಿದ್ದಾರೆ. ಶ್ವಾನ ದಳ, ಬೆರಳಚ್ಚು ಮುದ್ರೆ ಘಟಕದ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದರು. ಪ್ರಕರಣ ದಾಖಲಿಸಿಕೊಂಡಿರುವ ಇನ್ಸ್‌ಪೆಕ್ಟರ್ ಮಲ್ಲೇಶ್, ಸ್ಥಳದಲ್ಲಿ ದೊರೆತ ಸಿಸಿ ಟಿವಿ ಕ್ಯಾಮರಾ ಫುಟೇಜಸ್‌ಗಳನ್ನು ಪಡೆದು ತನಿಖೆ ನಡೆಸುತ್ತಿದ್ದಾರೆ. ಸುಳಿವಿನ ಆಧಾರದಲ್ಲಿ ಬೆನ್ನತ್ತಿರುವ ಪೊಲೀಸರು, ಆರೋಪಿಗಳ ಪತ್ತೆಗೆ ತೀವ್ರ ಶೋಧ ನಡೆಸುತ್ತಿದ್ದಾರೆ.

ನಾಳೆಯಿಂದ ವಿಧಾನಮಂಡಲ ಅಧಿವೇಶನ

ಮುಖ್ಯಮಂತ್ರಿ ರಾಜೀನಾಮೆಗೆ ಒತ್ತಾಯಿಸುವುದಲ್ಲದೆ, ಹಗರಣಗಳನ್ನು ಸಿಬಿಐ ತನಿಖೆಗೆ ವಹಿಸವಂತೆ ಪಟ್ಟು ಹಿಡಿಯಲು ನಿರ್ಧರಿಸಿವೆ. ಕಳೆದ ಶುಕ್ರವಾರ ಸಂಜೆ ಮೈತ್ರಿಕೂಟದ ಶಾಸಕರು ಸಭೆ ಸೇರಿ ಸರ್ಕಾರದ ವಿರುದ್ಧ ಸದನದಲ್ಲಿ ನಡೆಸಬೇಕಾದ ಹೋರಾಟದ ಬಗ್ಗೆ ಸುದೀರ್ಘ ಚರ್ಚೆ ಮಾಡಿದ್ದಾರೆ. ಈ ಹಗರಣಗಳಲ್ಲದೆ, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದಲೂ ವರ್ಗಾವಣೆ ದಂಧೆ ಮತ್ತು ಭ್ರಷ್ಟಾಚಾರದಲ್ಲಿ ಮುಳುಗಿರುವುದು, ರೈತರ ಆತ್ಮಹತ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಇದಕ್ಕೆ ಸರ್ಕಾರವೇ ಹೊಣೆ ಎಂದು ಬೊಟ್ಟು ಮಾಡಲಿದ್ದಾರೆ.

ಗ್ಯಾರಂಟಿ ಹೆಸರಿನಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳದೆ, ಆಡಳಿತ ಸಂಪೂರ್ಣ ಕುಸಿದಿದೆ. ಎಲ್ಲದಕ್ಕೂ ಮಿಗಿಲಾಗಿ ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ಅವರ ಕುಟುಂಬವೇ ಪಾಲುದಾರಿಕೆ ಹೊಂದಿದೆ.

ಅವರು ಅಧಿಕಾರದಲ್ಲಿ ಇದ್ದ ಸಂದರ್ಭದಲ್ಲೇ ಈ ಹಗರಣ ನಡೆದಿದ್ದರೂ ಪ್ರಾಧಿಕಾರದಿಂದ 62 ಕೋಟಿ ರೂ. ಪರಿಹಾರ ಕೇಳುತ್ತಿದ್ದಾರೆ. ತಮ್ಮದಲ್ಲದ ಭೂಮಿಯನ್ನು ಬೇನಾಮಿ ಹೆಸರಿನಲ್ಲಿ ನೋಂದಾಯಿಸಿ ನಂತರ ಖರೀದಿ ಮಾಡಿದ್ದಾರೆ. ಪ್ರಾಧಿಕಾರ ತನ್ನ ಭೂಮಿ ಎಂದು ಬಡಾವಣೆ ನಿರ್ಮಿಸಿ ಹಂಚಿಕೆ ಮಾಡುವವರೆಗೂ ತುಟಿ ಬಿಚ್ಚದ ಮುಖ್ಯಮಂತ್ರಿ ಕುಟುಂಬ, ಆ ನಂತರ, ತಮ್ಮ ಭೂಮಿ ವಶಪಡಿಸಿಕೊಳ್ಳಲಾಗಿದೆ. ಪರಿಹಾರ ಕೊಡಿ ಎಂದು ಒತ್ತಾಯಿಸಿದ್ದಾರೆ. ಹಣಕಾಸು ಇಲಾಖೆ ಹೊಣೆ ಹೊತ್ತಿರುವ ಮುಖ್ಯಮಂತ್ರಿ ಅವರ ಅರಿವಿಗೆ ಬಾರದೇ ನಿಗಮವೊಂದರಿಂದ ಇಷ್ಟು ದೊಡ್ಡ ಪ್ರಮಾಣದಲ್ಲಿ ಹಣ ಅಕ್ರಮ ವರ್ಗಾವಣೆ ಸಾಧ್ಯವೇ ಇಲ್ಲ ಎಂದು ಪ್ರತಿಪಕ್ಷ ಆರೋಪಿಸಲಿದೆ.

ಈ ಹಗರಣದಲ್ಲೂ ಮುಖ್ಯಮಂತ್ರಿ ಪಾತ್ರ ಇದೆಯೆಂದು ಆರೋಪಿಸಿ ರಾಜೀನಾಮೆಗೆ ಒತ್ತಡ ತರಲು ಪ್ರತಿಪಕ್ಷಗಳು ಸಿದ್ಧತೆ ನಡೆಸಿವೆ. ಪ್ರತಿಪಕ್ಷಗಳ ಬಳಿ ಅಸ್ತ್ರಗಳಿವೆ. ಆದರೆ, ಅದನ್ನು ಸಮರ್ಪಕವಾಗಿ ಬಳಸುವ ಯೋಧರ ಕೊರತೆ ಕಂಡುಬರುತ್ತಿದೆ. ಇಂತಹ ಸನ್ನಿವೇಶದಲ್ಲಿ ಪ್ರತಿಪಕ್ಷ ನಾಯಕರಾಗಿ ಆರ್.ಅಶೋಕ್ ತಮ್ಮ ಪ್ರೌಢಿಮೆಯನ್ನು ಯಾವ ರೀತಿ ಬಳಸಿಕೊಳ್ಳುತ್ತಾರೆ ಎಂಬುದನ್ನು ಎನ್‌ಡಿಎ ಗಮನಿಸುತ್ತಿದೆ. ಪ್ರತಿಪಕ್ಷಗಳ ಆರೋಪಗಳನ್ನು ಎದುರಿಸಲು ಆಡಳಿತ ಪಕ್ಷವೂ ಸಿದ್ಧಗೊಂಡಿದೆ. ಇದರಿಂದ ಜನಪರ ಚರ್ಚೆಗಿಂತ ಹಗರಣಗಳ ವಿಷಯವೇ 9 ದಿನಗಳ ಅಧಿವೇಶನದ ಪ್ರಮುಖ ಅಂಶವಾಗಲಿದೆ.

ನಾನು ಮುಖ್ಯಮಂತ್ರಿ ಆಗಿದ್ದಾಗ ನನ್ನ ಪತ್ನಿಗೆ ಮುಡಾ ನಿವೇಶನ ನೀಡಿದ್ದಲ್ಲ; ಬಿಜೆಪಿ ಅಧಿಕಾರದಲ್ಲಿದ್ದಾಗ ನೀಡಲಾಗಿದೆ



● ಪತ್ನಿಗೆ ನಿವೇಶನ ನೀಡಿರುವುದರಲ್ಲಿ ನಮ್ಮದೇನು ತಪ್ಪಿಲ್ಲ; ತಪ್ಪಾಗಿದ್ದರೆ ಅದು ಮುಡಾ ಕಡೆಯಿಂದ ಆಗಿರಬಹುದು ● Tv9 ಸಂದರ್ಶನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಮರ್ಥನೆ

ಮೈಸೂರು, ಜು. 13– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ತಮ್ಮ ಪತ್ನಿ ಶ್ರೀಮತಿ ಪಾರ್ವತಿಯವರಿಗೆ ನಿವೇಶನ ನೀಡಿರುವುದರಲ್ಲಿ ನಮ್ಮದೇನೂ ತಪ್ಪಿಲ್ಲ. ಒಂದು ವೇಳೆ ತಪ್ಪಾಗಿದ್ದರೆ ಅದು ಮುಡಾ ಕಡೆಯಿಂದ ಆಗಿರಬಹುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮನ್ನು ತಾವು ಸಮರ್ಥಿಸಿಕೊಂಡಿದ್ದಾರೆ.

ಟಿವಿ9 ಸುದ್ದಿವಾಹಿನಿಯ ವಿಶೇಷ ಸಂದರ್ಶನದಲ್ಲಿ ಮಾತನಾಡಿದ ಅವರು, ತಮ್ಮ ಪತ್ನಿ ನಿವೇಶನ ಪಡೆದಿರುವ ವಿಚಾರ ಹಗರಣವೇ ಅಲ್ಲ. ಬಿಜೆಪಿಯವರು ಅದನ್ನು ಹಗರಣ ಎಂದು ಆರೋಪಿಸುತ್ತಿದ್ದಾರೆ. ನಾವು ಮುಡಾದಿಂದ ನಿವೇಶನವನ್ನೇ ಕೇಳಿರಲಿಲ್ಲ. ಪತ್ನಿಗೆ ಸೇರಿದ 3.16 ಎಕರೆ ಕೃಷಿ ಭೂಮಿಯನ್ನು ಮುಡಾದವರು ಕಾನೂನು ಬಾಹಿರವಾಗಿ ಲೇಔಟ್ ಮಾಡಿ ಹಂಚಿದ್ದರು. ಈ ವೇಳೆ ನಾವು ನಮ್ಮ 3.16 ಎಕರೆ ಭೂಮಿಯನ್ನು ಹಿಂದಿರುಗಿಸಿ ಇಲ್ಲವೇ ಅದಕ್ಕೆ ಸಮಾನಾಂತರವಾಗಿ 3.16 ಎಕರೆ ಭೂಮಿಯನ್ನೇ ಬದಲಿಯಾಗಿ ನೀಡಿ ಎಂದು ತಮ್ಮ ಪತ್ನಿ ಅರ್ಜಿ ಹಾಕಿದ್ದರು ಎಂದರು.

ನಮಗೆ ಸೇರಿದ ಡಿ ನೋಟಿಫಿಕೇಷನ್ ಆಗಿದ್ದ ಭೂಮಿಯನ್ನು ಲೇಔಟ್ ಮಾಡಿ ಹಂಚಿಕೆ ಮಾಡುವ ಮೂಲಕ ಮುಡಾದಿಂದಲೇ ತಪ್ಪಾಗಿದೆ. ಇದಕ್ಕೆ ಪರ್ಯಾಯವಾಗಿ ಶೇ. 50:50ರ ಅನುಪಾತದ ಅನ್ವಯ 14 ನಿವೇಶನ ನೀಡಬಹುದು ಎಂದು ಮುಡಾ ಸಭೆಯಲ್ಲೇ ನಿರ್ಣಯವಾಗಿದೆ. ಆ ಸಭೆಯಲ್ಲೇ ಕಾಂಗ್ರೆಸ್‌ನವರು ಮಾತ್ರವಲ್ಲ, ಬಿಜೆಪಿ ಮತ್ತು ಜೆಡಿಎಸ್‌ನವರೂ ಇದ್ದರು. ನಂತರ ಮುಡಾದವರು ಈ ಪ್ರಸ್ತಾವನೆಗೆ ಒಪ್ಪಿಗೆ ಇದೆಯೇ ಎಂದು ತಮ್ಮ ಪತ್ನಿಯನ್ನು ಕೇಳಿದ್ದರು. ನಾನು ಸಾರ್ವಜನಿಕ ಜೀವನದಲ್ಲಿ ಇರುವ ಕಾರಣದಿಂದ ನಮಗೆ ನಷ್ಟವಾದರೂ ಸರಿ ಒಪ್ಪಿಕೊಳ್ಳುವಂತೆ ಪತ್ನಿಗೆ ಹೇಳಿದ್ದೆ. ನಾವು ಮೊದಲಿಗೆ ನಿವೇಶನವನ್ನೇ ಕೇಳಿಲ್ಲ ಹಾಗೂ ವಿಜಯನಗರ ಸೇರಿದಂತೆ ಇಂತಹ ಕಡೆಯೇ ನಿವೇಶನ ಕೊಡುವಂತೆ ಕೇಳಿಲ್ಲ. ಆದರೆ, ಮುಡಾದವರೇ ವಿಜಯನಗರದಲ್ಲಿ ನಿವೇಶನವನ್ನು ಕೊಟ್ಟಿದ್ದಾರೆ ಎಂದರು.

ಈ ವಿಚಾರದಲ್ಲಿ ನಷ್ಟವಾಗಿರುವುದು ನಮಗೆ. ನಮ್ಮ 3.16 ಎಕರೆ ಭೂಮಿಯನ್ನು ನೀಡುವಂತೆ ಕೇಳಿದ್ದೇವೆ. ಒಂದು ಎಕರೆ ಭೂಮಿಗೆ ಸುಮಾರು 44 ಸಾವಿರ ಚದರಡಿ ಬರುತ್ತದೆ. ಆದರೆ, ನಮಗೆ ಕೊಟ್ಟಿರುವುದು 38,284 ಚದರಡಿಯಷ್ಟೇ. ಅಂದರೆ ನಮ್ಮ ಭೂಮಿಗೆ ಪರ್ಯಾಯವಾಗಿ ಒಂದು ಎಕರೆಯಷ್ಟೂ ಕೊಟ್ಟಿಲ್ಲ. ವಸತಿ ವಲಯಕ್ಕೆ ಪರಿವರ್ತನೆಗೊಂಡಿರುವ ಭೂಮಿಯನ್ನು ಕಾನೂನು ಬಾಹಿರವಾಗಿ ತೆಗೆದುಕೊಂಡರೆ ಅದಕ್ಕೆ 3 ಪಟ್ಟು ಪರಿಹಾರ ಕೊಡಬೇಕು ಎಂದು ಸುಪ್ರೀಂಕೋರ್ಟ್ ಆದೇಶ ಇದೆ. ಮುಡಾದಿಂದ ನಿವೇಶನ ಪಡೆದ ಕಾರಣದಿಂದ ನಮಗೆ ನಷ್ಟವಾಗಿದೆಯೇ ಹೊರತು ಮುಡಾಗೆ ಅಲ್ಲ ಎಂದರು.

ಅಲ್ಲದೇ, ತಮ್ಮ ಪತ್ನಿಗೆ ನಾನು ಮುಖ್ಯಮಂತ್ರಿ ಆಗಿದ್ದಾಗ ಮುಡಾದಿಂದ ನಿವೇಶನ ಕೊಟ್ಟಿಲ್ಲ. ಬಿಜೆಪಿ ಅಧಿಕಾರದಲ್ಲಿದ್ದಾಗ ನೀಡಲಾಗಿದೆ. ತಮ್ಮ ಪತ್ನಿಗೆ ನಿವೇಶನ ಕೊಟ್ಟಿರುವುದರಲ್ಲಿ ಯಾವುದೇ ರೀತಿಯ ತಪ್ಪು ನಡೆದಿಲ್ಲವಾದರೂ, ಶೇ. 50:50 ಅನುಪಾತದಡಿ ವಿತರಿಸಲಾಗಿರುವ ಹಲವಾರು ಪ್ರಕರಣಗಳಲ್ಲಿ ತಪ್ಪು ನಡೆದಿದೆ ಎಂದು ಆರೋಪ ಕೇಳಿಬಂದಿರುವ ಹಿನ್ನೆಲೆಯಲ್ಲಿ ಐಎಎಸ್ ಅಧಿಕಾರಿಗಳಿಂದ ತನಿಖೆ ನಡೆಸಲಾಗುತ್ತಿದೆ. ತನಿಖಾ ವರದಿ ಬಂದ ನಂತರ ಯಾರೇ ತಪ್ಪು ಮಾಡಿದ್ದರೂ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಸಿಎಂ–ಡಿಸಿಎಂ ವಿಚಾರ: ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಹಾಗೂ ಹೆಚ್ಚುವರಿ ಡಿಸಿಎಂಗಳ ನೇಮಕ ಕುರಿತು ಕೆಲವು ಶಾಸಕರು ಹಾಗೂ ಪಕ್ಷದ ಮುಖಂಡರು ನೀಡುತ್ತಿರುವ ಹೇಳಿಕೆಗಳು ಅವರ ವೈಯಕ್ತಿಕ ಹೇಳಿಕೆಗಳಷ್ಟೇ. ಪಕ್ಷದ ಹೈಕಮಾಂಡ್ ಈ ಹೇಳಿಕೆಗಳಿಗೆ ಮಾನ್ಯತೆ ಕೊಟ್ಟಿಲ್ಲ. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಸಚಿವರು ಆಗಬೇಕೆಂದು ಯಾರೇ ಮಾತನಾಡಿದರೂ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತಪ್ಪಲ್ಲ. ಆದರೆ, ನಮ್ಮ ಪಕ್ಷದವರೇ ಸಾರ್ವಜನಿಕವಾಗಿ ಪ್ರಸ್ತಾಪಿಸಿದರೆ ಮುಜುಗರವಾಗುವುದು ಸಹಜ. ನಾವು ಮಾತನಾಡಬೇಡಿ ಎಂದು ಹೇಳುತ್ತೇವೆ. ಆದರೆ ಮಾತನಾಡಲೇಬೇಕು ಎಂದು ಮಾತನಾಡುವವರನ್ನು ಏನೂ ಮಾಡಲಾಗುವುದಿಲ್ಲ.

ಹೈಕಮಾಂಡ್ ತೆಗೆದುಕೊಳ್ಳುವ ಯಾವುದೇ ನಿರ್ಧಾರಕ್ಕೂ ತಾವು ಬದ್ಧರಿರುವುದಾಗಿ ಸಿದ್ದರಾಮಯ್ಯ ಹೇಳಿದರು. ಬಸನಗೌಡ ಪಾಟೀಲ್ ಯತ್ನಾಳ್ ಮತ್ತು ಹೆಚ್. ವಿಶ್ವನಾಥ್ ಅವರ ಪಕ್ಷದ ಬಗ್ಗೆಯೇ ಮುಜುಗರವಾಗುವಂತೆ ಹೇಳಿಕೆಗಳನ್ನು ಕೊಡುತ್ತಾರಲ್ಲ? ಅವರ ಬಗ್ಗೆ ಬಿಜೆಪಿ ಏನು ಕ್ರಮ ಕೈಗೊಂಡಿದೆ ಎಂದು ಪ್ರಶ್ನಿಸಿದ್ದಲ್ಲದೇ, ಹೀಗಿರುವಾಗ ನಮ್ಮ ಪಕ್ಷದ ಬಗ್ಗೆ ಹೇಗೆ ಮಾತನಾಡುತ್ತಾರೆ ಎಂದು ಕೇಳಿದರು.

ಗ್ಯಾರಂಟಿ ನಿಲ್ಲಲ್ಲ: ಯಾವುದೇ ಕಾರಣಕ್ಕೂ ಗ್ಯಾರಂಟಿ ಯೋಜನೆಗಳು ನಿಲ್ಲಲ್ಲ ಎಂದು ಪುನರುಚ್ಚರಿಸಿದ ಮುಖ್ಯಮಂತ್ರಿಗಳು, ಗ್ಯಾರಂಟಿ ಯೋಜನೆಗಳಿಂದಾಗಿ ಅಭಿವೃದ್ಧಿ ಕಾರ್ಯಗಳಿಗೆ ಹಣದ ಕೊರತೆ ಉಂಟಾಗಿಲ್ಲ. ಅಭಿವೃದ್ಧಿ ಕಾರ್ಯಗಳು ನಡೆಯುತ್ತಲೇ ಇವೆ. ಆದರೆ, ಹೆಚ್ಚುವರಿ ಅನುದಾನ ಕೊಡಲು ತೊಡಕಾಗುತ್ತಿದೆ ಎಂದು ಹೇಳಿದರು.

ಪರಿಶಿಷ್ಟ ಜಾತಿ ಮತ್ತು ಪಂಗಡದ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸುತ್ತಿಲ್ಲ ಎಂದು ಸ್ಪಷ್ಟಪಡಿಸಿದ ಅವರು, ಸರ್ವೆ ಪ್ರಕಾರ ರಾಜ್ಯದಲ್ಲಿ ಶೇ. 24.1ರಷ್ಟು ಪರಿಶಿಷ್ಟ ಜಾತಿ ಮತ್ತು ಪಂಗಡದ ಜನಸಂಖ್ಯೆ ಇದೆ. ಹೀಗಾಗಿ ಗ್ಯಾರಂಟಿ ಯೋಜನೆಗಳಿಗೆ ಶೇ. 24.1ರಷ್ಟು ಹಣವನ್ನು ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಮೀಸಲಾದ ಹಣದಲ್ಲಿ ವೆಚ್ಚ ಮಾಡಲಾಗುತ್ತಿದೆ. ಏಕೆಂದರೆ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳಲ್ಲಿ ಅವರೂ ಇದ್ದಾರೆ ಎಂದು ಸಮರ್ಥಿಸಿಕೊಂಡರು.

ಲೋಕಸಭಾ ಚುನಾವಣೆಯಲ್ಲಿ ಸೋತಿರುವುದು ಬಿಜೆಪಿ: ಕಳೆದ ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಸೋತಿಲ್ಲ. ಕೇವಲ ಒಂದು ಸ್ಥಾನವಿದ್ದ ನಾವು 9 ಸ್ಥಾನ ಪಡೆದಿದ್ದೇವೆ. 25 ಸ್ಥಾನ ಗಳಿಸಿದ್ದ ಬಿಜೆಪಿ ನಮ್ಮ ರಾಜ್ಯದಲ್ಲಿ ಸೋತಿದೆ. ನಾವು ನಿರೀಕ್ಷಿಸಿದಷ್ಟು ಸ್ಥಾನಗಳಲ್ಲಿ ಗೆಲ್ಲಲು ಸಾಧ್ಯವಾಗಿಲ್ಲ. ಬಿಜೆಪಿ ಮತ್ತು ಜೆಡಿಎಸ್ ಮೈತ್ರಿ ಮಾಡಿಕೊಂಡಿದ್ದರಿಂದ ನಮ್ಮ ನಿರೀಕ್ಷೆಯಷ್ಟು ಸ್ಥಾನಗಳು ಬಂದಿಲ್ಲ ಎಂದು ಹೇಳಿದರು.

ಮುಂಬರುವ 3 ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಮೂರು ಸ್ಥಾನಗಳನ್ನು ಗೆಲ್ಲಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ ಅವರು, ಉಪ ಚುನಾವಣೆಯಲ್ಲಿ ಸ್ಪರ್ಧಿಸುವ ಬಗ್ಗೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಮ್ಮ ಬಳಿ ಏನೂ ಹೇಳಿಲ್ಲ ಎಂದು ಸಿದ್ದರಾಮಯ್ಯ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ವಾಲ್ಮೀಕಿ ನಿಗಮದ ಹಣ ಅಕ್ರಮ ವರ್ಗಾವಣೆಗೂ ಹಣಕಾಸು ಇಲಾಖೆಗೂ ಸಂಬಂಧ ಇಲ್ಲ

ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಅವ್ಯವಹಾರ ಪ್ರಕರಣದಲ್ಲಿ ಯಾರೇ ತಪ್ಪು ಮಾಡಿದ್ದರು. ಕ್ರಮ ಕೈಗೊಳ್ಳಲಾಗುತ್ತದೆ. ಬಡವರಿಗೆ ಸೇರಬೇಕಾದ ಹಣದಲ್ಲಿ ಕೈ ಹಾಕಿರುವವರನ್ನು ಬಿಡುವ ಪ್ರಶ್ನೆಯೇ ಇಲ್ಲ. ಯಾರನ್ನೂ ರಕ್ಷಿಸುವುದಿಲ್ಲ ಎಂದು ಸಿದ್ದರಾಮಯ್ಯ ಹೇಳಿದರು.

ಸರ್ಕಾರದಿಂದ ಆಯಾ ನಿಗಮಗಳಿಗೆ ಹಣ ಬಿಡುಗಡೆಯಾಗುತ್ತದೆ. ಅಲ್ಲಿನ ಹಣಕಾಸು ವ್ಯವಹಾರವನ್ನು ನಿರ್ವಹಿಸಲು ಸಂಬಂಧಪಟ್ಟ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಸಂಪೂರ್ಣ ಸ್ವತಂತ್ರರಾಗಿರುತ್ತಾರೆ. ಅಲ್ಲಿ ನಡೆದಿರುವ ಹಣ ವರ್ಗಾವಣೆ ಬಗ್ಗೆ ಹಣಕಾಸು ಇಲಾಖೆಗೆ ಗೊತ್ತಾಗುವುದಿಲ್ಲ. 94 ಕೋಟಿ ರೂ.ಗಳನ್ನು ಹೈದರಾಬಾದ್ ಬ್ಯಾಂಕ್‌ಗೆ ವರ್ಗಾಯಿಸಲಾಗಿದೆ. ಅದು ಯಾಕೆ ಆಯಿತು? ತಪ್ಪು ಮಾಡಿರುವವರು ಯಾರು ಎಂಬುದರ ಬಗ್ಗೆ ಎಸ್‌ಐಟಿ ತನಿಖೆ ನಡೆಸುತ್ತಿದೆ. ವಾಲ್ಮೀಕಿ ಅಭಿವೃದ್ಧಿ ನಿಗಮದ ಸೂಪರಿಂಟೆಂಡೆಂಟ್ ಚಂದ್ರಶೇಖರ್ ಆತ್ಮಹತ್ಯೆ ಮಾಡಿಕೊಂಡಿರುವುದು ಸೇರಿದಂತೆ ಎಲ್ಲಾ ಆಯಾಮಗಳಲ್ಲೂ ಎಸ್‌ಐಟಿ ಸಮರ್ಪಕವಾಗಿ ತನಿಖೆ ನಡೆಸುತ್ತಿದೆ. ಹೀಗಿರುವಾಗ ಇಡಿ ತನಿಖೆ ಅವಶ್ಯಕತೆ ಇರಲಿಲ್ಲವೇನೋ? ಬ್ಯಾಂಕ್‌ನವರ ದೂರಿನ ಹಿನ್ನೆಲೆಯಲ್ಲಿ ಇಡಿ ತನಿಖೆ ನಡೆಯುತ್ತಿರಬಹುದು. ಈ ಪ್ರಕರಣ ಸಿಬಿಐ ತನಿಖೆ ಕೂಡ ನಡೆಯುತ್ತಿದೆ. ಅಲ್ಲಿ ನಡೆದಿರುವ ಅವ್ಯವಹಾರಕ್ಕೂ, ಹಣಕಾಸು ಇಲಾಖೆಗೂ ಸಂಬಂಧವಿಲ್ಲ. ಹೀಗಿರುವಾಗ ನಾನು ಏಕೆ ರಾಜೀನಾಮೆ ನೀಡಬೇಕು ಎಂದು ಪ್ರಶ್ನಿಸಿದ ಅವರು, ಯಾವುದಾದರೂ ಬ್ಯಾಂಕ್ ಅಧಿಕಾರಿಗಳು ಅವ್ಯವಹಾರ ನಡೆಸಿದರೆ. ಕೇಂದ್ರ ಹಣಕಾಸು ಸಚಿವರು ರಾಜೀನಾಮೆ ನೀಡುತ್ತಾರೆಯೇ? ಎಂದು ಪ್ರಶ್ನಿಸಿದರು. ಕಳೆದ 30 ವರ್ಷದಿಂದ ನನ್ನ ವಿರುದ್ಧ ಯಾವುದೇ ಆರೋಪ ಮಾಡಲು ಆಗಲಿಲ್ಲ. ಅದಕ್ಕಾಗಿ ಈಗ ಈ ವಿಚಾರವನ್ನಿಟ್ಟುಕೊಂಡು ಬಿಜೆಪಿಯವರು ಆರೋಪ ಮಾಡುತ್ತಿದ್ದಾರೆ. ಬಿಜೆಪಿ ಬಗ್ಗೆ ನಾನು ಟೀಕಿಸುತ್ತಿರುವುದರಿಂದ ನನ್ನನ್ನು ಟಾರ್ಗೆಟ್ ಮಾಡುತ್ತಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾವುದೇ ವಿಚಾರ ಪ್ರಶ್ನಿಸಬೇಕಾದರೂ ಸದನವಿದೆ. ಆದರೆ, ಬಿಜೆಪಿಯವರು ಅದನ್ನು ಬಿಟ್ಟು ಬೀದಿಯಲ್ಲಿ ನಿಂತು ಪ್ರತಿಭಟನೆ ನಡೆಸುತ್ತಿರುವುದು ನನ್ನ ಹೆಸರಿಗೆ ಕಳಂಕ ತರುವುದಕ್ಕೆ ಅಷ್ಟೇ. ಸದನದಲ್ಲಿ ಈ ವಿಚಾರವನ್ನೂ ಅವರು ಪ್ರಸ್ತಾಪಿಸಿದರೆ ಉತ್ತರ ಕೊಡುತ್ತೇವೆ ಎಂದರು.

ನಾನು ಜಾತೀಯತೆ ಮಾಡುವವನಲ್ಲ, ರಾಜಕೀಯದಲ್ಲಿ ಜಾತಿಯನ್ನು ತರುವವನೂ ಅಲ್ಲ. ಆದರೆ, ಹಿಂದುಳಿದ ವರ್ಗಕ್ಕೆ ಸೇರಿದ ನಾನು 2ನೇ ಬಾರಿಗೆ ಮುಖ್ಯಯಾಗಿರುವುದು ಬಿಜೆಪಿಯವರಿಗೆ ಸಹಿಸಲಾಗುತ್ತಿಲ್ಲ ಎಂದು ಪುನರುಚ್ಚರಿಸಿದರು.

ಕಾವೇರಿ ನೀರು ಬಿಡುಗಡೆಗೆ ನಕಾರ

ಕರ್ನಾಟಕ ಸರ್ಕಾರದ ವಿರುದ್ಧ ತಮಿಳುನಾಡಿನ ರೈತರ ಪ್ರತಿಭಟನೆ



ತಂಜಾವೂರಿನ ಜಿಲ್ಲಾಧಿಕಾರಿ ಕಚೇರಿ ಎದುರು ರೈತರು ಪ್ರತಿಭಟನೆ ನಡೆಸಿದರು.

ತಂಜಾವೂರು, ಜು.13–ಜುಲೈ ಅಂತ್ಯದವರೆಗೆ ತಮಿಳುನಾಡಿಗೆ ಪ್ರತಿದಿನ 1 ಟಿಎಂಸಿ ಕಾವೇರಿ ನದಿ ನೀರು ಬಿಡುವಂತೆ ಕಾವೇರಿ ನೀರು ನಿಯಂತ್ರಣ ಸಮಿತಿ ಆದೇಶ ಪಾಲನೆಗೆ ಕರ್ನಾಟಕ ಸರ್ಕಾರ ನಿರಾಕರಿಸಿರುವುದರಿಂದ ತಮಿಳುನಾಡಿನ ಕಾವೇರಿ ಅಚ್ಚುಕಟ್ಟು ಪ್ರದೇಶದಲ್ಲಿ ಶನಿವಾರ ಪ್ರತಿಭಟನೆ ನಡೆಸಲಾಯಿತು.

ತಂಜಾವೂರಿನ ಜಿಲ್ಲಾಧಿಕಾರಿ ಕಟ್ಟಡದ ಪ್ರವೇಶ ದ್ವಾರದಲ್ಲಿ ರಾಷ್ಟ್ರೀಯ ದಕ್ಷಿಣ ಭಾರತದ ನದಿ ಜೋಡಣೆ ರೈತ ಸಂಘದ ಸದಸ್ಯರು ಕೈಯ್ಯಲ್ಲಿ ಖಾಲಿ ಮಣ್ಣಿನ ಮಡಿಕೆಗಳೊಂದಿಗೆ ಧರಣಿ ನಡೆಸಿದರು. ನೀರು ಹಂಚಿಕೆಯಲ್ಲಿ ಸುಪ್ರೀಂಕೋರ್ಟ್ ಮತ್ತು CWRC ಆದೇಶದ ಬಗ್ಗೆ ಕರ್ನಾಟಕದ ಧೋರಣೆಯನ್ನು ಪ್ರತಿಭಟನಾಕಾರರು ಖಂಡಿಸಿದರು. ಸಿಡಬ್ಲ್ಯುಆರ್‌ಸಿ ಆದೇಶದಂತೆ ಕೂಡಲೇ ನೀರು ಬಿಡಬೇಕು, ಸುಪ್ರೀಂಕೋರ್ಟ್ ನಿಗದಿಪಡಿಸಿದ ಮಾಸಿಕ ವೇಳಾಪಟ್ಟಿಯಂತೆ ತಮಿಳುನಾಡಿಗೆ ನೀರು ಬಿಡಬೇಕು ಎಂದು ಒತ್ತಾಯಿಸಿದರು.

ತಮಿಳುನಾಡಿಗೆ ನೀರು ಬಿಡದ ಕಾರಣ ರೈತರು ಅನುಭವಿಸುತ್ತಿರುವ ನಷ್ಟಕ್ಕೆ ಕರ್ನಾಟಕ ಸರ್ಕಾರ ಪರಿಹಾರ ನೀಡಬೇಕು. ಕರ್ನಾಟಕ ಸರ್ಕಾರದ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸುವಂತೆ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್‌ಗೆ ಮನವಿ ಮಾಡಿದರು. ಪ್ರತಿಭಟನಾನಿರತ ರೈತರೊಂದಿಗೆ ಜಿಲ್ಲಾಧಿಕಾರಿ ಮಾತುಕತೆ ನಡೆಸಿದ ಬಳಿಕ ಎರಡೂವರೆ ಗಂಟೆಗಳ ಧರಣಿ ಸತ್ಯಾಗ್ರಹವನ್ನು ಅಂತ್ಯಗೊಳಿಸಲಾಯಿತು.

ಈ ಮಧ್ಯೆ, ತಮಿಳುನಾಡು ರೈತ ಸಂಘದ ಸದಸ್ಯರು ತಂಜಾವೂರಿನ ಇರ್ವಿನ್ ಸೇತುವೆ ಬಳಿ ಕರ್ನಾಟಕ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿದರು. CWRC ಆದೇಶ ಪಾಲನೆ ನಿರಾಕರಿಸಿದ ಕರ್ನಾಟಕ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು.

ರಿಂಗ್ ರಸ್ತೆ ಹೊರವಲಯದ ಬಡಾವಣೆಗಳಿಗೆ ಮೂಲಸೌಕರ್ಯಕ್ಕಾಗಿ ನಾಳೆ ಪ್ರತಿಭಟನೆ

ಮೈಸೂರು, ಜು.13(ಜಿಎ)–ರಿಂಗ್ ರಸ್ತೆಯ ಹೊರವಲಯದಲ್ಲಿರುವ ಬಡಾವಣೆಗಳಿಗೆ ಕನಿಷ್ಠ ಮೂಲಸೌಕರ್ಯ ಕಲ್ಪಿಸುವಂತೆ ಒತ್ತಾಯಿಸಿ ಮೈಸೂರು ಪೂರ್ವ ವಲಯ ಬಡಾವಣೆಗಳ ಒಕ್ಕೂಟದ ಆಶ್ರಯದಲ್ಲಿ ಜು.15ರಂದು ಬೃಹತ್ ಪ್ರತಿಭಟನೆ ನಡೆಸಲು ನಿರ್ಧರಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಅಧ್ಯಕ್ಷ ಎ.ಎಂ. ಬಾಬು ಮಾತನಾಡಿ, ಅಂದು ಬೆಳಗ್ಗೆ 9.30ಕ್ಕೆ ಮಾನಸಿನಗರ ಹಾಗೂ ಕೆಎಸ್‌ಎಫ್‌ಸಿ ಬಡಾವಣೆಯ ವಿನಾಯಕ ಉದ್ಯಾನವನದಿಂದ ಪಾದಯಾತ್ರೆ ಅರಂಭಗೊಂಡು ಡಿಸಿ ಕಚೇರಿವರೆಗೆ ಸಾಗಿ, ನಂತರ ಸಮಾವೇಶಗೊಂಡು, ತದನಂತರ ಜಿಲ್ಲಾಧಿಕಾರಿಗಳ ಮುಖೇನ ರಾಜ್ಯ ಸರ್ಕಾರಕ್ಕೆ ಮನವಿ ಪತ್ರವನ್ನು ಸಲ್ಲಿಸುವ ಮೂಲಕ ಅಂತ್ಯಗೊಳ್ಳಲಿದೆ ಎಂದು ತಿಳಿಸಿದರು.

ಒಕ್ಕೂಟದ ವ್ಯಾಪ್ತಿಯಲ್ಲಿರುವ ಪ್ರತೀ ಬಡಾವಣೆಯಿಂದ 20 ಮಂದಿ ಪ್ರತಿಭಟನೆಯಲ್ಲಿ ಸಾಂಕೇತಿಕವಾಗಿ ಭಾಗವಹಿಸಲಿದ್ದು, ಅಂದಾಜು 500ಕ್ಕೂ ಹೆಚ್ಚು ಮಂದಿ ಸೇರುವ ನಿರೀಕ್ಷೆ ಇದೆ. ಕಾವೇರಿ ನೀರನ್ನು ಒಕ್ಕೂಟದ ವ್ಯಾಪ್ತಿಯ ಎಲ್ಲಾ ಬಡಾವಣೆಗಳಿಗೆ ಒದಗಿಸಬೇಕು, ಒಳಚರಂಡಿ ವ್ಯವಸ್ಥೆಯನ್ನು ಸುವ್ಯವಸ್ಥಿತಗೊಳಿಸಬೇಕು, ಜನಸಾಂದ್ರತೆಗೆ ಅನುಗುಣವಾಗಿ ತ್ಯಾಜ್ಯ ಶುದ್ಧೀಕರಣ ಘಟಕ ತೆರೆಯಬೇಕು, ಒಳಚರಂಡಿ ವ್ಯವಸ್ಥೆಯ ಅಂತರ ಸಂಪರ್ಕ ಜಾಲವನ್ನು ವಿಸ್ತರಿಸಿ ಸದೃಢಗೊಳಿಸಬೇಕು, ಅವೈಜ್ಞಾನಿಕ ವಿದ್ಯುತ್ ವ್ಯವಸ್ಥೆ ಸರಿಪಡಿಸುವುದು, ಸಮರ್ಪಕ ವಿದ್ಯುತ್ ವ್ಯವಸ್ಥೆ ಕಲ್ಪಿಸಬೇಕು, ದಶಕಗಳ ಹಿಂದೆ ಮಾಡಿದ ರಸ್ತೆಗಳು ಭಾಗಶಃ ಹಾಳಾಗಿದ್ದು, ಅವುಗಳ ಕಾಮಗಾರಿ ನಿರ್ವಹಿಸಬೇಕು, ನಗರ ಸಾರಿಗೆ ಸಂಸ್ಥೆಯ ಬಸ್ ಸಂಪರ್ಕ ಜಾಲ ಹೆಚ್ಚಿಸಬೇಕು ಎಂಬಿವೇ ಮೊದಲಾದ ಬೇಡಿಕೆ ಈಡೇರಿಕೆಗೆ ಈ ವೇಳೆ ಆಗ್ರಹಿಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಸಂಘಟನಾ ಕಾರ್ಯದರ್ಶಿ ಬೊಮ್ಮೇಗೌಡ ಮತ್ತಿತರರು ಉಪಸ್ಥಿತರಿದ್ದರು.

ಕ್ಯಾನ್ಸರ್ ಆರೈಕೆಯ ಶೃಂಗಸಭೆ: ಸರ್ಕಾರ ಹೊಸ ಆಸ್ಪತ್ರೆ ನಿರ್ಮಿಸುವ ಬದಲು ಖಾಸಗಿ ಆಸ್ಪತ್ರೆಗಳಿಗೆ ಸಹಕಾರ ನೀಡಲಿ

ಭಾರತ್ ಕ್ಯಾನ್ಸರ್ ಆಸ್ಪತ್ರೆ ಮುಖ್ಯಸ್ಥ ಡಾ.ಬಿ.ಎಸ್.ಅಜಯ್‌ಕುಮಾರ್ ಜೈನ್ ಮನವಿ



ಮೈಸೂರಲ್ಲಿ ಭಾರತ್ ಕ್ಯಾನ್ಸರ್ ಆಸ್ಪತ್ರೆ ವತಿಯಿಂದ ಆಯೋಜಿಸಿದ್ದ ಕ್ಯಾನ್ಸರ್ ಆರೈಕೆಯ ಶೃಂಗಸಭೆಯಲ್ಲಿ ಡಾ.ಬಿ.ಎಸ್.ಅಜಯ್‌ಕುಮಾರ್ ಜೈನ್ ಮಾತನಾಡಿದರು.

ಮೈಸೂರು, ಜು.13(ಜಿಎ)–ಸರ್ಕಾರ ನೂತನ ಆಸ್ಪತ್ರೆಗಳನ್ನು ನಿರ್ಮಿಸುವ ಬದಲು ಖಾಸಗಿ ಆಸ್ಪತ್ರೆಗಳಿಗೆ ಸಹಾಯ, ಸಹಕಾರ ನೀಡಲಿ ಎಂದು ಭಾರತ್ ಕ್ಯಾನ್ಸರ್ ಆಸ್ಪತ್ರೆ ಮುಖ್ಯಸ್ಥರಾದ ಡಾ. ಬಿ.ಎಸ್.ಅಜಯ್‌ಕುಮಾರ್ ಜೈನ್ ಮನವಿ ಮಾಡಿದರು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಭಾರತ್ ಕ್ಯಾನ್ಸರ್ ಆಸ್ಪತ್ರೆ ವತಿಯಿಂದ ಆಯೋಜಿಸಿದ್ದ ಕ್ಯಾನ್ಸರ್ ಆರೈಕೆಯ ಶೃಂಗಸಭೆಯಲ್ಲಿ 'ಕ್ಯಾನ್ಸರ್ ಆರೈಕೆಯಲ್ಲಿ ಕ್ರಿಯಾತ್ಮಕ ಬದಲಾವಣೆ' ಕುರಿತು ದೇಶದ ವಿವಿಧ ಭಾಗಗಳಿಂದ ಬಂದಿದ್ದ ಕ್ಯಾನ್ಸರ್ ತಜ್ಞರು ಚರ್ಚಿಸಿದರು. ಈ ವೇಳೆ ಡಾ.ಬಿಎಸ್. ಅಜಯ್‌ಕುಮಾರ್ ಜೈನ್ ಮಾತನಾಡಿ, ದೇಶದಲ್ಲಿ ಬಹುತೇಕ ಮಂದಿ ಸರ್ಕಾರಿ ಆಸ್ಪತ್ರೆಗಳ ಬದಲು ಖಾಸಗಿ ಆಸ್ಪತ್ರೆಗಳನ್ನು ಅವಲಂಬಿಸಿದ್ದಾರೆ. ಎಲ್ಲಾ ಖಾಸಗಿ ಆಸ್ಪತ್ರೆಗಳಲ್ಲಿ ಸರ್ಕಾರದ ಎಲ್ಲಾ ಯೋಜನೆಗಳನ್ನು ಅಳವಡಿಸಿಕೊಂಡು ಸೇವೆ ಸಲ್ಲಿಸಲಾಗುತ್ತಿದೆ. ಸರ್ಕಾರ ನೂತನವಾಗಿ ಆಸ್ಪತ್ರೆಗಳನ್ನು ನಿರ್ಮಿಸುವ ಬದಲು ಖಾಸಗಿ ಆಸ್ಪತ್ರೆಗಳಿಗೆ ಸೌಲಭ್ಯ, ಸಹಕಾರ ನೀಡಿದರೆ, ಮತ್ತಷ್ಟು ಒಳಿತಾಗಲಿದೆ ಎಂದರು.

ಸರ್ಕಾರ ನೂತನ ಆಸ್ಪತ್ರೆ ನಿರ್ಮಾಣ ಮಾಡಲು ನಿವೇಶನ ಬೇಕಾಗುತ್ತದೆ. ನಿರ್ಮಾಣವಾದ ನಂತರ ಅದನ್ನು ನಿರ್ವಹಿಸಲು ಎಲ್ಲಾ ರೀತಿಯ ಮೂಲಸೌಕರ್ಯ ಒದಗಿಸಬೇಕಾಗುತ್ತದೆ. ಅದರ ಬದಲು ಖಾಸಗಿ ಆಸ್ಪತ್ರೆಗಳಿಗೆ ಈ ಎಲ್ಲಾ ಸೌಕರ್ಯ, ಸಹಾಯ ನೀಡಿ ಅವುಗಳನ್ನು ನಿರ್ವಹಣೆ ಮಾಡಿದರೆ ಸೂಕ್ತವಾಗಿರುತ್ತದೆ ಎಂದು ತಿಳಿಸಿದರು.

> “ದೇಶದಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಗುಣಮಟ್ಟ ಹೆಚ್ಚಿದ್ದು, ಅದರಂತೆ ನಮ್ಮ ಆಸ್ಪತ್ರೆಯಲ್ಲಿಯೂ ಎಲ್ಲಾ ರೀತಿ ಕ್ಯಾನ್ಸರ್‌ಗೆ ಚಿಕಿತ್ಸೆ ನೀಡಲಾಗುತ್ತಿದ್ದು, ತಜ್ಞರ ತಂಡವನ್ನೊಳಗೊಂಡಿದ್ದು, ಬಡವರು, ಶ್ರೀಮಂತರು ಎಂಬ ಭೇದವಿಲ್ಲದೇ ಸಮಾನವಾಗಿ ಚಿಕಿತ್ಸೆ ನೀಡುತ್ತಿರುವುದರಿಂದ ಬೆಂಗಳೂರಿಗೆ ಯಾರೂ ಹೋಗುತ್ತಿಲ್ಲ. ಮೈಸೂರಲ್ಲಿಯೇ ಬೋನ್ ಮ್ಯಾರೋ ಜೋಡಣೆ ಕಾರ್ಯ, ಸದ್ಯದಲ್ಲಿಯೇ ರೋಬೋಟಿಕ್ ಸರ್ಜರಿ ಆರಂಭಗೊಳ್ಳಲಿದೆ. ಮುಂದಿನ ದಿನಗಳಲ್ಲಿ ಕ್ಯಾನ್ಸರ್ ಅಧ್ಯಯನ ಸಂಸ್ಥೆ ಆರಂಭಿಸಲು ಚಿಂತಿಸಲಾಗುತ್ತದೆ. **–ಡಾ.ಅಜಯ್‌ಕುಮಾರ್**

ಕಳೆದ 30 ವರ್ಷಗಳ ಹಿಂದೆ ಅಮೇರಿಕಾದಿಂದ ಮೈಸೂರಿಗೆ ಬಂದು ನೆಲೆಸಿದಾಗ ಬಹುತೇಕ ಮಂದಿ ಇವರು ಉದ್ಯಮಿ ಪಿ.ವಿ.ಗಿರಿ ಅವರ ಸ್ನೇಹಿತರಾಗಿರುವುದರಿಂದ ನೂತನ ಉದ್ಯಮ ಆರಂಭಿಸುತ್ತಾರೆ ಎಂದು ತಿಳಿದುಕೊಂಡಿದ್ದರು. ಆದರೆ, ನಾನು ಕ್ಯಾನ್ಸರ್ ಆಸ್ಪತ್ರೆ ತೆರೆಯಲು ನಿರ್ಧರಿಸಿದೆ. ಆರಂಭದಲ್ಲಿ ವಿದ್ಯುತ್ ಸಂಪರ್ಕ ಒದಗಿಸಲಿಲ್ಲ. ಈ ವೇಳೆ ಒಂದು ವರ್ಷ ಜನರೇಟರ್ ಬಳಸಿಕೊಂಡು ಆಸ್ಪತ್ರೆ ನಡೆಸಲಾಯಿತು. ಅದರಂತೆ ವಿವಿಧ ಇಲಾಖೆಗಳ ಜೊತೆ ಹೋರಾಟ ಮಾಡಿ ಸಾಕಷ್ಟು ಸಮಸ್ಯೆಗಳನ್ನು ಎದುರಿಸಿ ಆಸ್ಪತ್ರೆ ನಿರ್ಮಿಸಲಾಗಿದೆ ಎಂದು ಸ್ಮರಿಸಿದರು. ಕಾರ್ಯಕ್ರಮದಲ್ಲಿ ಡಾ.ಕೆಜಿ.ಶ್ರೀನಿವಾಸ್, ಡಾ.ವೈಎಸ್. ಮಾಧವಿ, ಡಾ.ಕವಿತಾ, ಡಾ.ಶೇಖರ್ ಪಾಟೀಲ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಭಾನುವಾರ 14 ಜುಲೈ 2024

ಇಂದು ಕೃಷಿಕರ ಜಾಗೃತಿ ಸಮಾವೇಶ

ಮಂಡ್ಯ,ಜು.13– ಅಖಿಲ ಕರ್ನಾಟಕ ಶ್ರೀಗಂಧ ಮತ್ತು ವನ ಕೃಷಿ ಬೆಳೆಗಾರರ ಸಂಘ ಮಂಡ್ಯ ಜಿಲ್ಲಾ ಘಟಕ, ಸಂಪೂರ್ಣ ಸಾವಯವ ಕೃಷಿಕರ ಸಂಘ ಮಳವಳ್ಳಿ ಹಾಗೂ ಆರಿಗ್ರಾಫ್ ಸಂಸ್ಥೆಯ ಸಹಭಾಗಿತ್ವದಲ್ಲಿ ಜುಲೈ 14ರಂದು ಬೆಳಿಗ್ಗೆ 10 ಗಂಟೆಯಿಂದ ಮಂಡ್ಯದ ಪಿಇಎಸ್ ಕಾಲೇಜಿನ ಆವರಣದಲ್ಲಿರುವ ವಿವೇಕಾನಂದ ರಂಗಮಂದಿರದಲ್ಲಿ ಕೃಷಿಕರ ಜಾಗೃತಿ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ ಎಂದು ವನ ಕೃಷಿ ಬೆಳೆಗಾರರ ಸಂಘದ ಅನಂತರಾಂ ಕೆರಗೋಡು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತರು ಗಿಡ ಬೆಳೆಸುವ ಮೂಲಕ ಆಮ್ಲಜನಕವನ್ನು ನೀಡುತ್ತಿದ್ದಾರೆ. ಕಾರ್ಖಾನೆಗಳು ಇಂಗಾಲವನ್ನು ಬಿಡುಗಡೆ ಮಾಡುವ ಮೂಲಕ ವಾತಾವರಣವನ್ನು ಕೆಡಿಸುತ್ತಿದೆ. ಆದ್ದರಿಂದ ಆಮ್ಲಜನಕ ಸೃಷ್ಟಿ ಮಾಡುವ ರೈತರಿಗೆ ಸಹಾಯಧನ ನೀಡುವಂತೆ ಒತ್ತಾಯಿಸುವುದು ಈ ಸಮಾವೇಶದ ಉದ್ದೇಶವಾಗಿದೆ ಎಂದರು.

ಅಂದು ನಿವೃತ್ತ ಐಎಎಸ್ ಅಧಿಕಾರಿ ಕೆ. ಅಮರನಾರಾಯಣ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಕಾರ್ಯಕ್ರಮವನ್ನು ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ ಉದ್ಘಾಟಿಸಲಿದ್ದು, ವಿಶೇಷ ಆಹ್ವಾನಿತರಾಗಿ ಶಾಸಕರಾದ ರವಿಕುಮಾರ್‌ಗೌಡ, ಮಧು ಜಿ.ಮಾದೇಗೌಡ, ಜಿಲ್ಲಾಧಿಕಾರಿ ಡಾ.ಕುಮಾರ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶೇಕ್ ತನ್ವೀರ್ ಆಸಿಫ್ ಸೇರಿದಂತೆ ಇತರ ಗಣ್ಯರು ಭಾಗವಹಿಸಲಿದ್ದಾರೆ. ಆದ್ದರಿಂದ ಕೃಷಿಕರು ಈ ಸಮಾವೇಶದಲ್ಲಿ ಭಾಗವಹಿಸುವಂತೆ ಮನವಿ ಮಾಡಿದರು.

ಗೋಷ್ಠಿಯಲ್ಲಿ ಕೃಷಿಕರಾದ ಸೋಮಶೇಖರ್, ವೆಂಕಟೇಶ್, ಮಂಜು, ದಯಾನಂದ, ಸ್ವಾಮಿ, ಚಿಕ್ಕಣ್ಣ ಉಪಸ್ಥಿತರಿದ್ದರು.

ಜು.21ರಂದು ವೀರಶೈವ ಮಹಾಸಭಾ ಚುನಾವಣೆ

ಮಂಡ್ಯ,ಜು.13– ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾ ಘಟಕದ ಚುನಾವಣೆ ಜುಲೈ 21ರಂದು ನಡೆಯಲಿದೆ ಎಂದು ಅಖಿಲ ಭಾರತ ವೀರಶೈವ ಮಹಾಸಭಾ ಮಂಡ್ಯ ಜಿಲ್ಲಾ ಘಟಕದ ಅಧ್ಯಕ್ಷ ಚುನಾವಣಾಧಿಕಾರಿ ಕೆ.ಎಸ್.ಷಡಕ್ಷರಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಂಡ್ಯ ಜಿಲ್ಲಾದ್ಯಂತ 4025 ಮತದಾರರಿದ್ದು ಒಂದು ಅಧ್ಯಕ್ಷ ಹುದ್ದೆ, 20 ಕಾರ್ಯನಿರ್ವಾಹಕ ಸದಸ್ಯ ಸ್ಥಾನಕ್ಕೆ ಹಾಗೂ 10 ಮಹಿಳಾ ಮೀಸಲು ಸ್ಥಾನ ಸೇರಿ 31 ಸ್ಥಾನಕ್ಕೆ ಚುನಾವಣೆ ನಡೆಯಲಿದೆ ಎಂದರು.

ಅಧ್ಯಕ್ಷ ಸ್ಥಾನಕ್ಕೆ ಇಬ್ಬರು ಅಭ್ಯರ್ಥಿಗಳು ,ಮಹಿಳಾ ಮೀಸಲು ಸ್ಥಾನಕ್ಕೆ 12 ಅಭ್ಯರ್ಥಿಗಳು ಹಾಗೂ ಸಾಮಾನ್ಯ ಸ್ಥಾನಕ್ಕೆ 35 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ. ಮಂಡ್ಯ, ಮದ್ದೂರು, ಶ್ರೀರಂಗಪಟ್ಟಣ ಹಾಗೂ ನಾಗಮಂಗಲ ತಾಲೂಕಿನ ಚುನಾವಣೆ ಮಂಡ್ಯದ ಗಿರಿಜಾ ಟಾಕೀಸ್ ಪಕ್ಕದಲ್ಲಿರುವ ವೀರಶೈವ ವಿದ್ಯಾರ್ಥಿ ನಿಲಯದಲ್ಲಿ ನಡೆಯಲಿದೆ. ಮಳವಳ್ಳಿ ತಾಲೂಕಿನ ಚುನಾವಣೆ ಕೋಟೆ ಮಳವಳ್ಳಿಯ ಶ್ರೀ ಬಸವೇಶ್ವರ ಪತ್ತಿನ ಸಹಕಾರ ಸಂಘದಲ್ಲಿ ನಡೆಯಲಿದೆ ಎಂದರು. ಅದೇ ರೀತಿ ಕೆ.ಆರ್.ಪೇಟೆ ತಾಲೂಕಿನ ಚುನಾವಣೆ ಕೆ.ಆರ್.ಪೇಟೆಯ ಸರ್ಕಾರಿ ಜೂನಿಯರ್ ಕಾಲೇಜು ಆವರಣದಲ್ಲಿ ಮತ್ತು ಪಾಂಡವಪುರ ತಾಲೂಕಿನ ಚುನಾವಣೆ ಪಾಂಡವಪುರ ತಾಲೂಕಿನ ಫ್ರೆಂಚ್ ರಾಕ್ಸ್ ಶಾಲೆ, ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆಯಲಿದೆ ಎಂದು ತಿಳಿಸಿದರು.

ಜುಲೈ 21ರಂದು ಬೆಳಿಗ್ಗೆ ಎಂಟು ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಮತದಾನ ನಡೆಯಲಿದ್ದು ಮತದಾನದ ನಂತರ ಮತ ಎಣಿಕೆ ಕಾರ್ಯ ನಡೆಯಲಿದೆ. ಆದ್ದರಿಂದ ಸದಸ್ಯರು ತಮ್ಮ ಭಾವಚಿತ್ರವಿರುವ ಗುರುತಿನ ಚೀಟಿಯೊಂದಿಗೆ ಭಾಗವಹಿಸುವಂತೆ ಮನವಿ ಮಾಡಿದರು.

ಚಿನಕುರಳಿಯಲ್ಲಿ ಮಾನ್ಸೂನ್ ಮ್ಯಾರಥಾನ್ ಓಟ



ಚಿನಕುರಳಿಯಲ್ಲಿ ನಡೆದ ಮಾನ್ಸೂನ್ ಮ್ಯಾರಥಾನ್ ಓಟದ ಸ್ಪರ್ಧೆಗೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಚಾಲನೆ ನೀಡಿದರು.

ಚಿನಕುರಳಿ,ಜು.13– ಚಿನಕುರಳಿಯ ಎಸ್‌ಟಿಜಿ ಶಿಕ್ಷಣ ಸಂಸ್ಥೆಯಲ್ಲಿ ಶನಿವಾರ ಸಣ್ಣತಮ್ಮೇಗೌಡ ಹಾಗೂ ಅಂಕಮ್ಮ ಅವರ ನೆನಪಿನ ಅರ್ಪಣೆ ಕಾರ್ಯಕ್ರಮದ ಅಂಗವಾಗಿ ನಡೆದ ಮಾನ್ಸೂನ್ ಮ್ಯಾರಥಾನ್ ಓಟಕ್ಕೆ ಸಂಸ್ಥೆಯ ಅಧ್ಯಕ್ಷ ಹಾಗೂ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಚಾಲನೆ ನೀಡಿದರು.

ಚಿನಕುರಳಿ ಎಸ್‌ಟಿಜಿ ಶಿಕ್ಷಣ ಸಂಸ್ಥೆಯ ಆವರಣದಿಂದ ಹೊರಟ ಮಾನ್ಸೂನ್ ಮ್ಯಾರಥಾನ್ ಓಟದ ಸ್ಪರ್ಧೆಯಲ್ಲಿ ಶಾಲೆಯ 700ಕ್ಕೂ ಅಧಿಕ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಸ್ಪರ್ಧೆಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು ಓಡುವ ಸ್ಥಳಗಳಲ್ಲಿ ಮಕ್ಕಳ ರಕ್ಷಣೆಗಾಗಿ ಪೊಲೀಸರು ಹಾಗೂ ಶಾಲಾ ಸಿಬ್ಬಂದಿಗಳನ್ನು ನಿಯೋಜಿಸಲಾಗಿತ್ತು. ಮ್ಯಾರಥಾನ್ ಓಟವನ್ನು 3 ಕಿಮೀವರೆಗೆ ಅಂತರ ನಿಗದಿಪಡಿಸಲಾಗಿತ್ತು. ಸೀನಿಯರ್, ಸಬ್ ಸೀನಿಯರ್ ಹಾಗೂ ಜ್ಯೂನಿಯರ್ ವಿಭಾಗದಲ್ಲಿ ಮಕ್ಕಳನ್ನು ಸ್ಪರ್ಧೆಗೆ ಇಳಿಸಿದ್ದು, ಗಂಡು ಮಕ್ಕಳು ಹಾಗೂ ಹೆಣ್ಣುಮಕ್ಕಳಿಗೆ ಪ್ರತ್ಯೇಕವಾಗಿ ಓಟವನ್ನು ಏರ್ಪಡಿಸಲಾಗಿತ್ತು.

ಎಸ್‌ಟಿಜಿ ಶಾಲೆಯ ಆವರಣದಿಂದ ಹೊರಟ ವಿದ್ಯಾರ್ಥಿಗಳು ಪಾಂಡವಪುರ –ಕೆ.ಆರ್.ಪೇಟೆ ಮುಖ್ಯರಸ್ತೆಯ ಮಾರ್ಗವಾಗಿ ಹೊರಟು ಬಿಜಿಎಸ್ ಮುಖ್ಯದ್ವಾರದ ಮೂಲಕ ಬಿಜಿಎಸ್ ಶಾಲೆ, ಶ್ರೀರಾಮೇಶ್ವರ ದೇವಸ್ಥಾನದ ಬಳಿ ಮಾರ್ಗವಾಗಿ ಮತ್ತೆಗ್ರಾಮದ ರಂಗದ ರಸ್ತೆ ಮಾರ್ಗವಾಗಿ ಮತ್ತೆ ಶಾಲೆ ತಲುಪಿದರು. ಮಕ್ಕಳ ಸುರಕ್ಷಾ ದೃಷ್ಟಿಯಿಂದ ವೈದ್ಯರು ಹಾಗೂ ಆಂಬುಲೆನ್ಸ್ ವ್ಯವಸ್ಥೆ ಮಾಡಲಾಗಿತ್ತು.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿ, ನಮ್ಮ ತಂದೆ–ತಾಯಿ ಸಣ್ಣತಮ್ಮೇಗೌಡರು ಹಾಗೂ ಅಂಕಮ್ಮ ಅವರ ನೆನಪಿನ ಅರ್ಪಣೆ ಕಾರ್ಯಕ್ರಮದ ಅಂಗವಾಗಿ ಎಸ್‌ಟಿಜಿ ಶಿಕ್ಷಣ ಸಂಸ್ಥೆಯಲ್ಲಿ ಮಾನ್ಸೂನ್ ಮ್ಯಾರಥಾನ್ ಸ್ಪರ್ಧೆ ಆಯೋಜಿಸಲಾಗಿದ್ದು, ಶಾಲೆಯ ಎಲ್ಲಾ ವಿದ್ಯಾರ್ಥಿಗಳು ಭಾಗವಹಿಸಿ ಯಶಸ್ವಿಗೊಳಿಸಿದ್ದಾರೆ ಎಂದರು.

ಶಾಲೆಗಳಲ್ಲಿ ನಡೆಯುವ ಮ್ಯಾರಥಾನ್ ಸ್ಪರ್ಧೆ ಸೇರಿದಂತೆ ಎಲ್ಲಾ ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುವ ಮೂಲಕ ವಿದ್ಯಾರ್ಥಿಗಳು ದೈಹಿಕ ಸಾಮರ್ಥ್ಯದ ಜತೆಗೆ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದು ತಿಳಿಸಿದರು.

ವಿಜೇತರು: ಸೀನಿಯರ್ ವಿಭಾಗ: ಗಂಡು ಮಕ್ಕಳು: ರಾಹುಲ್ ಎಸ್.ಗೌಡ(ಪ್ರಥಮ), ವಿಕಾಶ್.ಪಿ(ದ್ವಿ), ರಾಕೇಶ್.ಎನ್.(ತೃ), ನಿರಂಜನ್‌ಕುಮಾರ್(ನಾಲ್ಕು), ಚಿದಂಬರ್ (ಐದು), ಹೆಣ್ಣುಮಕ್ಕಳು: ಪೂಜಾಶ್ರೀ.ಡಿ.ವಿ. (ಪ್ರ), ಇಂಪನ(ದ್ವಿ), ನಮಿಷ.ಸಿ.ವೈ(ತೃ), ನವ್ಯ(ನಾಲ್ಕು), ಲೇಖನ.ಎಲ್.ಡಿ(ಐದು).

ಸಬ್ ಜ್ಯೂನಿಯರ್ ವಿಭಾಗ: ಗಂಡು ಮಕ್ಕಳು: ನಿತಿನ್‌ಗೌಡ.ಸಿ.ಎಂ.(ಪ್ರ), ನಿತಿನ್ ಗೌಡ.ಜೆ(ದ್ವಿ), ಪ್ರಜ್ವಲ್(ತೃ), ದೀನಾ (ನಾಲ್ಕು), ಸುಜಿತ್(ಐದು). ಹೆಣ್ಣು ಮಕ್ಕಳು: ಲಕ್ಷ್ಮಿ(ಪ್ರ), ಸಾತ್ವಿಕನಾಗೇಶ್(ದ್ವಿ), ರಕ್ಷಾ ಸಿ.ಎಲ್.(ತೃ), ಯಶಿತಾ.ಜಿ (ನಾಲ್ಕು), ಮಾನ್ವಿ(ಐದು).

ಜ್ಯೂನಿಯರ್ ವಿಭಾಗ: ಗಂಡು ಮಕ್ಕಳು: ಧ್ರುವ್(ಪ್ರ), ಸಮರ್ಥಗೌಡ(ದ್ವಿ), ಚಿರಂತ್.ಎಂ.(ತೃ), ಪ್ರಜ್ವಲ್(ನಾಲ್ಕು), ಪುಣ್ಯಚರಣ್ (ಐದು)., ಹೆಣ್ಣುಮಕ್ಕಳ ವಿಭಾಗ ಅಧಿತಿ.ಸಿ.ಕೆ (ಪ್ರ), ಹರ್ಷಿತಾ.ಜಿಎಂ. (ದ್ವಿ), ನವ್ಯಶ್ರೀ(ತೃ), ಯಶಸ್ವಿಸಿ.ವೈ(ನಾಲ್ಕು), ಕುಶಾ.ಸಿ.ಎಂ.(ಐದು) ಸ್ಥಾನಗಳಿಸಿದರು. ಈ ಸಂದರ್ಭದಲ್ಲಿ ಮುಖ್ಯ ಶಿಕ್ಷಕಿ ಮಾಚಮ್ಮ, ಆಡಳಿತಾಧಿಕಾರಿ ನಿವೇದಿತ ನಾಗೇಶ್ ಸೇರಿದಂತೆ ಶಾಲಾ ಶಿಕ್ಷಕರು, ಸಿಬ್ಬಂದಿಗಳು ಹಾಜರಿದ್ದರು.

ನಾಳೆ ಕೆ.ವಿ.ಶಂಕರಗೌಡ ಪ್ರಶಸ್ತಿ ಪ್ರದಾನ

ಮಂಡ್ಯ,ಜು.13– ಜನತಾ ಶಿಕ್ಷಣ ಟ್ರಸ್ಟ್ ವತಿಯಿಂದ ನಿತ್ಯ ಸಚಿವ ಕೆ.ವಿ.ಶಂಕರಗೌಡರ 109ನೇ ಜನ್ಮ ದಿನಾಚರಣೆ, 2024ನೇ ಸಾಲಿನ ರಾಜ್ಯಮಟ್ಟದ ಕೆ.ವಿ.ಶಂಕರಗೌಡ ಮತ್ತು ಕೆ.ಎಸ್.ಸಚ್ಚಿದಾನಂದ ರಂಗಭೂಮಿ ಮತ್ತು ಸಮಾಜ ಸೇವ ಪ್ರಶಸ್ತಿಗಳ ಪ್ರದಾನ ಸಮಾರಂಭವನ್ನು ಜುಲೈ 15ರಂದು ಬೆಳಿಗ್ಗೆ 11 ಗಂಟೆಗೆ ಪಿಇಎಸ್ ಇಂಜಿನಿಯರಿಂಗ್ ಕಾಲೇಜಿನ ನಿತ್ಯ ಸಚಿವ ಕೆ.ವಿ.ಶಂಕರಗೌಡ ತರಬೇತಿ ಮತ್ತು ಉದ್ಯೋಗ ಕೇಂದ್ರ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪಿಇಟಿ ಸಂಸ್ಥೆಯ ಡಾ.ರಾಮಲಿಂಗಯ್ಯ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯಮಟ್ಟದ ರಂಗಭೂಮಿ ಪ್ರಶಸ್ತಿಗೆ ನಿವೃತ್ತ ಕನ್ನಡ ಪ್ರಾಧ್ಯಾಪಕ ಡಾ.ರಾಜಪ್ಪ ದಳವಾಯಿ, ರಾಜ್ಯಮಟ್ಟದ ಸಮಾಜ ಸೇವಾ ಪ್ರಶಸ್ತಿಗೆ ನಾಗಮಂಗಲ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಟಿಪ್ಪು ಸುಲ್ತಾನ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದರು.

ಅಂದು ಪಿಇಟಿ ಅಧ್ಯಕ್ಷ ಕೆ.ಎಸ್.ವಿಜಯ್ ಆನಂದ್ ಅಧ್ಯಕ್ಷತೆಯಲ್ಲಿ ನಡೆಯಲಿರುವ ಕಾರ್ಯಕ್ರಮವನ್ನು ವಿಧಾನಸೌಧದ ಗೃಹ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್ ಉದ್ಘಾಟಿಸಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ತಿಳಿಸಿದರು.

ಗೋಷ್ಠಿಯಲ್ಲಿ ಪಿಇಟಿ ಕಾರ್ಯದರ್ಶಿ ಹೆಚ್.ಎನ್.ಶಿವಪ್ರಸಾದ್ ಉಪಸ್ಥಿತರಿದ್ದರು.

ಭಾರತೀನಗರ ಬಳಿ ಹಾವು ಕಚ್ಚಿ ರೈತ ಸಾವು



ಭಾರತೀನಗರ.ಜು.13– ರೈತನೋರ್ವ ಹಾವು ಕಚ್ಚಿ ಸಾವನ್ನಪ್ಪಿರುವ ಘಟನೆ ಸಮೀಪದ ಗುರುದೇವರಹಳ್ಳಿ ಗ್ರಾಮದಲ್ಲಿ ಜರುಗಿದೆ.

ಗುರುದೇವರಹಳ್ಳಿ ಗ್ರಾಮದ ವರ್ಷದ ಮಹದೇವು(60) ಹಾವು ಕಚ್ಚಿ ಸಾವನ್ನಪ್ಪಿರುವ ದುರ್ದೈವಿ ರೈತ. ಗ್ರಾಮದ ಹೊರವಲಯದಲ್ಲಿರುವ ತಮ್ಮ ಜಮೀನಿನಲ್ಲಿ ಜಾನುವಾರುಗಳಿಗೆ ಹುಲ್ಲು ತರಲು ಹೋದ ಸಂದರ್ಭದಲ್ಲಿ ನಾಗರಹಾವು ಕಚ್ಚಿದೆ. ಇದರಿಂದ ಗಾಬರಿಗೊಂಡು ಓಡಲು ಪ್ರಾರಂಭಿಸಿದಾಗ ತಕ್ಷಣ ಅಲ್ಲೆ ಕುಸಿದು ಬಿದ್ದು ಸಾವನ್ನಪ್ಪಿದ್ದಾನೆ. ಮೃತರ ಅಂತ್ಯಸಂಸ್ಕಾರ ಸ್ವಗ್ರಾಮದ ಗುರುದೇವರಹಳ್ಳಿ ಗ್ರಾಮದ ತಮ್ಮ ಜಮೀನಿನಲ್ಲಿ ನೆರವೇರಿದೆ.

ರೈತರನ್ನು ಅಲೆದಾಡಿಸುವ ಅಧಿಕಾರಿಗಳು ನನ್ನ ಕ್ಷೇತ್ರಕ್ಕೆ ಬೇಕಿಲ್ಲ

ಕೆಡಿಪಿ ಸಭೆಯಲ್ಲಿ ಶಾಸಕ ಹೆಚ್.ಟಿ.ಮಂಜು ಎಚ್ಚರಿಕೆ



ಕೆ.ಆರ್.ಪೇಟೆ ಕೆಡಿಪಿ ಸಭೆಯಲ್ಲಿ ಮಾತನಾಡುತ್ತಿರುವ ಶಾಸಕ ಹೆಚ್.ಟಿ.ಮಂಜು.

ಕೆ.ಆರ್.ಪೇಟೆ ಸ್ಟೇಡಿಯಂನಲ್ಲಿರುವ ಒಳಾಂಗಣ ಕ್ರೀಡಾಂಗಣಕ್ಕೆ ಜಿಮ್ ಹಾಗೂ ನೆಲಹಾಸು ಸಾಮಗ್ರಿ ಖರೀದಿಯಲ್ಲಿ ನಿರ್ಮಿತಿ ಕೇಂದ್ರದ ಅಧಿಕಾರಿಗಳು ಸುಮಾರು 1.5 ಕೋಟಿ ಅವ್ಯವಹಾರ ನಡೆಸಿದ್ದು ತನಿಖೆ ನಡೆಸಿ, ಖರೀದಿ ಸಾಮಗ್ರಿಗಳ ದರ ಮಾರುಕಟ್ಟೆ ದರಗಿಂತ ಮೂರು ಪಟ್ಟು ಹೆಚ್ಚಾಗಿರುವುದರಿಂದ ಸಾಮಗ್ರಿ ಖರೀದಿಸದಂತೆ ಇಲಾಖೆಯ ರಾಜ್ಯ ನಿರ್ದೇಶಕರು ಸೂಚಿಸಿದ್ದರು. ಆದರೂ ಅಧಿಕಾರಿಗಳು ಅಕ್ರಮವಾಗಿ ಮಾರುಕಟ್ಟೆ ದರಕ್ಕಿಂತ ಮೂರು ಪಟ್ಟು ಹೆಚ್ಚಿನ ದರದಲ್ಲಿ ಸಾಮಗ್ರಿಗಳನ್ನು ಖರೀದಿಸಿ ಅವ್ಯವಹಾರ ನಡೆಸಿದ್ದು, ತನಿಖೆ ನಡೆಸಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಿ–ಹೆಚ್.ಟಿ.ಮಂಜು

ಕೆ.ಆರ್.ಪೇಟೆ, ಜು.13–ರೈತರನ್ನು ಕಚೇರಿಗೆ ಅಲೆದಾಡಿಸುವ ಅಧಿಕಾರಿಗಳು ನನ್ನ ಕ್ಷೇತ್ರಕ್ಕೆ ಬೇಕಿಲ್ಲ ಎಂದು ಎಚ್ಚರಿಕೆ ನೀಡಿರುವ ಶಾಸಕ ಹೆಚ್.ಟಿ.ಮಂಜು ಸಮನ್ವಯತೆಯಿಂದ ಕೆಲಸ ಮಾಡಿ ಜನರಿಗೆ ಸ್ಪಂದಿಸಬೇಕು ಎಂದರು.

ತಾಲೂಕಿನ ಚಿಕ್ಕೋಸಹಳ್ಳಿ ಸಮೀಪವಿರುವ ರೇಷ್ಮೆ ಫಾರಂ ಸಭಾಂಗಣದಲ್ಲಿ ನಡೆದ ತಾಲೂಕು ಮಟ್ಟದ ತ್ರೈಮಾಸಿಕ ಪ್ರಗತಿ ಪರಿಶೀಲನಾ(ಕೆಡಿಪಿ) ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜನಸ್ನೇಹಿ ಆಡಳಿತ ನೀಡಬೇಕಿರುವ ಅಧಿಕಾರಿ ವರ್ಗ ಜನಸಾಮಾನ್ಯರ ಕೆಲಸ ನಿರ್ವಹಿಸಲು ತಾತ್ಸಾರ ಧೋರಣೆ ಅನುಸರಿಸುತ್ತಿರುವ ಕುರಿತು ದೂರುಗಳು ಕೇಳಿಬರುತ್ತಿವೆ ಎಂದರು.

ಕೆಲ ಸರ್ಕಾರಿ ಕಚೇರಿಗಳಿಗೆ ಜನತೆಯ ಸುತ್ತಾಟ ತಪ್ಪುತ್ತಿಲ್ಲ. ಸಣ್ಣಪುಟ್ಟ ಕೆಲಸಗಳಿಗೂ ಹಲವು ಬಾರಿ ವಿನಾಕಾರಣ ಅಲೆದಾಡಿಸುತ್ತಿದ್ದಾರೆ ಎಂಬ ಅನೇಕ ದೂರುಗಳು ಮತ್ತು ಅಧಿಕಾರಿ ವರ್ಗದ ಮೇಲೆ ಆಡಳಿತಕ್ಕೆ ಹಿಡಿತವಿಲ್ಲದಂತಾಗಿದೆ ಎನ್ನುವ ಸಾರ್ವತ್ರಿಕ ಆರೋಪ ಕೇಳಿಬಂದಿದೆ. ವಿನಾಕಾರಣ ರೈತರನ್ನು ಅಲೆದಾಡಿಸುವ ಅಧಿಕಾರಿಗಳ ಅವಶ್ಯಕತೆ ನನ್ನ ಕ್ಷೇತ್ರಕ್ಕೆ ಇಲ್ಲ ಎಂದು ಅಧಿಕಾರಿಗಳಿಗೆ ಎಚ್ಚರಿಸಿದರು.

ಅಧಿಕಾರಿಗಳ ವಿರುದ್ಧ ಶಾಸಕ ಗರಂ: ಅಬಕಾರಿ ನಿರೀಕ್ಷಕಿ ಭವ್ಯ, ಗ್ರಾಮಾಂತರ ಪೊಲೀಸ್ ಠಾಣೆಯ ನಿರೀಕ್ಷಕ ಆನಂದಗೌಡ ಸಭೆಗೆ ಬರದೆ ಗೈರಾದರಿಂದ ಶಾಸಕ ಸಂಬಂಧಪಟ್ಟ ಹಿರಿಯ ಅಧಿಕಾರಿಗಳಿಗೆ ದೂರವಾಣಿ ಕರೆ ಮಾಡಿ ಅಸಮಾಧಾನ ವ್ಯಕ್ತಪಡಿಸಿದರು. ಮುಂದೆ ಹೀಗೆ ಮುಂದುವರಿಯದಂತೆ ಕ್ರಮವಹಿಸಲು ಸೂಚಿಸಿದರು. ಜತೆಗೆ ಗ್ರಾಮಾಂತರ ಪೊಲೀಸ್ ಠಾಣೆಯ ಎಸ್‌ಐ ಸುಬ್ಬಯ್ಯ ವಿರುದ್ಧ ಶಿಸ್ತು ಕ್ರಮಕ್ಕೆ ಸೂಚಿಸಲಾಯಿತು. ಕಂದಾಯ, ಪೊಲೀಸ್, ಪಂಚಾಯತ್, ಸರ್ವೆ ಇಲಾಖೆಗಳಲ್ಲಿ ಸಮಸ್ಯೆ ಬಗೆಹರಿದರೆ ತಾಲೂಕಿನಲ್ಲಿ ಸಮಸ್ಯೆ ಕಡಿಮೆ ಆಗಲಿವೆ ಎಂದು ಅಭಿಪ್ರಾಯಪಟ್ಟರು.

ತಾಲೂಕಿನಲ್ಲಿ ಹತ್ತು ಡೆಂಗ್ಯೂ ಪ್ರಕರಣ ಪತ್ತೆಯಾಗಿವೆ. ಪ್ರಕರಣ ಹೆಚ್ಚದಂತೆ ಸೊಳ್ಳೆ ಉತ್ಪನ್ನಗಳ ತಾಣಗಳ ಪತ್ತೆ ಹಚ್ಚಿ ಸ್ವಚ್ಛತೆ ಮಾಡಬೇಕು. ರೋಗಿಗಳನ್ನು ಪರೀಕ್ಷೆಗೊಳಪಡಿಸಿ ಚಿಕಿತ್ಸೆ ನೀಡಿ. ಡೆಂಗ್ಯೂ ಸಮಸ್ಯೆಗೆ ಔಷಧಗಳ ಕೊರತೆಯಾಗದಂತೆ, ರೋಗಿಗಳಿಗೆ ಹೆಚ್ಚುವರಿ ಬೆಡ್‌ಗಳ ವ್ಯವಸ್ಥೆ ಕಲ್ಪಿಸುವಂತೆ ತಾಲೂಕು ಆರೋಗ್ಯಾಧಿಕಾರಿ ಡಾ.ಅಜಿತ್‌ಗೆ ಸೂಚಿಸಿದರು.

ಪಾಂಡವಪುರದಲ್ಲಿ ಹೆಣ್ಣು ಭ್ರೂಣ ಹತ್ಯೆ ಪ್ರಕರಣ: ಮತ್ತೊಬ್ಬ ಆರೋಪಿ ಬಂಧನ



ಪಾಂಡವಪುರ,ಜು.13–ಪಟ್ಟಣದ ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ ಹಿಂಬದಿಯ ವಸತಿ ಗೃಹದಲ್ಲಿ ಇತ್ತೀಚೆಗೆ ನಡೆದಿದ್ದ ಹೆಣ್ಣು ಭ್ರೂಣ ಹತ್ಯೆಗೆ ಸಂಬಂಧಿಸಿದಂತೆ ಪೊಲೀಸರು ಮತ್ತೊಬ್ಬ ಆರೋಪಿಯನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ತಾಲೂಕಿನ ಹಿರೇಮರಳಿ ಗ್ರಾಮದ ಸಿಂಗೇಗೌಡರ ಮಗ ಉಮೇಶ್ ಬಂಧಿತ ಆರೋಪಿ. ಪ್ರಕರಣದ ಮತ್ತೊಬ್ಬ ಪ್ರಮುಖ ಆರೋಪಿ ಅಭಿಲಾಷ್ ಎಂಬಾತನ ಸೋದರಮಾವನಾಗಿರುವ ಈತ ಭ್ರೂಣ ಹತ್ಯೆಗೆ ಒಳಗಾಗುವವರನ್ನು ಗುರುತಿಸುತ್ತಿದ್ದ ಎನ್ನಲಾಗಿದ್ದು, ಅಬಾರ್ಷನ್ ಬಯಸುವ ಮಹಿಳೆಯರನ್ನು ಶೃತಿ ಮತ್ತು ಆಶಾ (ಭ್ರೂಣ ಹತ್ಯೆ ಪ್ರಕರಣದಲ್ಲಿ ಈಗಾಗಲೇ ಜೈಲು ಸೇರಿರುವ ಆರೋಪಿಗಳು) ಅವರಿಗೆ ಪರಿಚಯಿಸುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಇತ್ತೀಚೆಗೆ ದೇವೇಗೌಡನಕೊಪ್ಪಲು ಗ್ರಾಮದ ಮಹಿಳೆಯೊಬ್ಬರಿಗೆ ತಮ್ಮ ಮನೆಯ ಕೊಠಡಿಯಲ್ಲಿ ಭ್ರೂಣ ಹತ್ಯೆ ನಡೆಸಲು ಅವಕಾಶ ಮಾಡಿಕೊಟ್ಟಿದ್ದು, ಪ್ರಕರಣದ ಜಾಡು ಹಿಡಿದು ತನಿಖೆ ನಡೆಸುತ್ತಿದ್ದ ಸಬ್‌ಇನ್ಸ್‌ಪೆಕ್ಟರ್ ಆರ್.ಬಿ. ಉಮೇಶ್ ಅವರ ತಂಡ ಆರೋಪಿಯನ್ನು ಅವರ ಸ್ವಂತ ಮನೆಯಲ್ಲೇ ದಸ್ತಗಿರಿ ಮಾಡಿ ಪ್ರಕರಣ ದಾಖಲಿಸಿಕೊಂಡು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ ಈ ಸಂಬಂಧ ಪಾಂಡವಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಾಲ್ಮೀಕಿ ನಿಗಮದ ಹಗರಣದಲ್ಲಿ ಸಿದ್ದರಾಮಯ್ಯ, ಡಿಕೆಶಿಯೂ ಇದ್ದಾರೆ

ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಬಾಂಬ್!



ಧಾರವಾಡ, ಜು.13– ವಾಲ್ಮೀಕಿ ನಿಗಮದ ಬಹುಕೋಟಿ ಹಗರಣದಲ್ಲಿ ಸಂಪೂರ್ಣವಾಗಿ ಸಿದ್ದರಾಮಯ್ಯ, ಡಿಕೆ ಶಿವಕುಮಾರ್ ಸಹ ಇದ್ದಾರೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಬಾಂಬ್ ಸಿಡಿಸಿದರು.

ಧಾರವಾಡದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಈ ಪ್ರಕರಣವನ್ನು ಮುಚ್ಚಿ ಹಾಕುವ ಪ್ರಯತ್ನ ನಡೆದಿದೆ. 40 ದಿನವಾದರೂ ಎಸ್‌ಐಟಿ ನಾಗೇಂದ್ರ ಮತ್ತು ದದ್ದಲ್‌ಗೆ ನೋಟೀಸ್ ಕೊಟ್ಟಿಲ್ಲ, ಅವರನ್ನು ವಿಚಾರಣೆಗೂ ಕರೆದಿಲ್ಲ. ಈಗ ದದ್ದಲ್‌ನನ್ನ ಬಂಧಿಸಿ ಅಂತ ಹೇಳಿದ್ದಾರೆ. ಬಂಧನಕ್ಕೊಳಗಾಗಿ ಸಿಎಂ ಸಂಪೂರ್ಣ ಆಶ್ರಯದಲ್ಲಿ ರಾಜಾತಿಥ್ಯ ಪಡೆಯಬೇಕೆಂಬ ದುರಾಲೋಚನೆಯೂ ಇದರಲ್ಲಿದೆ. ಸರ್ಕಾರಿ ಖಜಾನೆಯಿಂದ ಹಣ ಹೋಗಿದೆ. ಅತ್ಯಂತ ಹತಾಶಾ ಭಾವನೆಯಿಂದ ಸಿದ್ದರಾಮಯ್ಯ ಶಿಷ್ಯಂದಿರು ಮಾತನಾಡುತ್ತಿದ್ದಾರೆ. ಇವರ ತಲೆಯಲ್ಲಿನ ಬುದ್ಧಿ ತೀರಾ ಖಾಲಿಯಾಗಿದೆ ಅನ್ನಿಸುತ್ತಿದೆ ಎಂದ ಅವರು, ಸಿದ್ದರಾಮಯ್ಯ ಹಿಂದೆಲ್ಲ ನಾಲಿಗೆ ಮೆದುಳಿಗೆ ಸಂಬಂಧವಿಲ್ಲದ ಮಾತು ಅಂತೆಲ್ಲ ಹೇಳುತ್ತಿದ್ದರು. ನಿರ್ಮಲಾ ಸೀತಾರಾಮನ್ ರಾಜೀನಾಮೆ ಸಹ ಕೇಳಿದ್ದಾರೆ. ಈಗ ಅವರ ಮಂತ್ರಿಗಳೇ ನಾಲಿಗೆ–ಮೆದುಳಿಗೆ ಸಂಬಂಧ ಇಲ್ಲದಂತೆ ಮಾತಾಡುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಇಲ್ಲೊಬ್ಬ ಮಂತ್ರಿ ಸಹ ಹಾಗೆಯೇ ಮಾತನಾಡಿದ್ದಾರೆ. ನೀವು ಸಹಿ ಮಾಡಿದೀರಿ, ಅಕೌಂಟ್ ನಿಮ್ಮ ಹೆಸರಿನಲ್ಲಿದೆ, ಬೇರೆ ಅಕೌಂಟ್‌ಗೆ ಹಣ ಹೋಗಿದೆ. ಅಲ್ಲಿಂದ ಪಡೆದು ನುಂಗಿ ನೀರು ಕುಡಿದಿದ್ದಾರೆ ಎಂದ ಅವರು, ಇದರಲ್ಲಿ ಸಿದ್ದರಾಮಯ್ಯ ಸಹ ಭಾಗಿಯಾಗಿದ್ದಾರೆ. ಈ ಹಿಂದೆಯೂ ತೆಲಂಗಾಣ ಚುನಾವಣೆಗೆ ಸಾವಿರಾರು ಕೋಟಿ ಹಣ ಕಳುಹಿಸಿದ್ದರು. ಇಬ್ಬರು ಗುತ್ತಿಗೆದಾರರ ಮನೆಯಲ್ಲಿ ಹಣ ಸಿಕ್ಕಿತ್ತು. ಅದನ್ನ ಆಗ ನಾನೇ ಹೇಳಿದ್ದೆ, ಹಣ ಕಳಿಸುತ್ತಿದ್ದಾರೆ ಅಂದಾಗ ಕಾಂಗ್ರೆಸ್‌ನವರು ವಿರೋಧಿಸಿದ್ದರು ಎಂದರು.

ಮುಡಾ ಹಗರಣದಲ್ಲಿಯೂ ಇವರು ಸಿಕ್ಕಿಬಿದ್ದಿದ್ದಾರೆ. 2003–04ರಲ್ಲಿ ಆ ಭೂಮಿ ಡಿನೋಟಿಫಿಕೇಶನ್ ಆಗಿತ್ತು ಎನ್ನಲಾಗಿದೆ. 2010ರವರೆಗೆ ಆ ಭೂಮಿ ಮುಡಾ ಹೆಸರಿನಲ್ಲಿಯೇ ಇದೆ. 2010ರ ನಂತರ ಅನೇಕರಿಗೆ ಫ್ಲಾಟ್ ನೀಡಲಾಗಿದೆ ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರಿಗೆ ದಾನ ಕೊಟ್ಟಿದ್ದಾರೆ ಅಂತಿದ್ದಾರೆ. ಮುಡಾ ಅಭಿವೃದ್ಧಿಪಡಿಸಿ ಫ್ಲಾಟ್ ನೀಡಿದೆ, 2013ರ ಚುನಾವಣೆಯಲ್ಲಿ ಅಫಿಡವಿಟ್‌ನಲ್ಲಿ ಏಕೆ ಹಾಕಿಲ್ಲ. 2018ರ ಚುನಾವಣೆಯಲ್ಲಿ ಅದನ್ನು 25 ಲಕ್ಷ ರೂ. ಅಂತ ತೋರಿಸಿದ್ದಾರೆ. 2023ರ ಚುನಾವಣೆಯಲ್ಲಿ ಅದನ್ನು 8.62 ಕೋಟಿ ರೂ. ಅಂತ ತೋರಿಸಿದ್ದಾರೆ, ಇದೀಗ 62 ಕೋಟಿ ರೂ. ಅಂತ ಏಕೆ ಪರಿಹಾರ ಕೇಳುತ್ತಿದ್ದಾರೆ ಎಂದು ಪ್ರಶ್ನಿಸಿದರು. ಅಲ್ಲದೇ ಇಲ್ಲಿ ಫ್ಲಾಟ್ ಇದ್ದರೂ ವಿಜಯನಗರದಲ್ಲೇಕೆ ಫ್ಲಾಟ್ ತೆಗೆದುಕೊಂಡಿರಿ. ಇವರೆಲ್ಲಾ ಕಳ್ಳರಿದ್ದಾರೆ ಅಷ್ಟೇ ಎಂದು ಜೋಶಿ ಕಿಡಿಕಾರಿದರು.

ಜಿಂಬಾಬ್ವೆ ವಿರುದ್ಧ ಟಿ20 ಸರಣಿ ಗೆದ್ದ ಭಾರತ



ಹರಾರೆ, ಜು.13– ಯಶಸ್ವಿ ಜೈಸ್ವಾಲ್, ನಾಯಕ ಶುಭಮನ್ ಗಿಲ್ ಅವರ ಶತಕದ ಜೊತೆಯಾಟದ ನೆರವಿನಿಂದ ಭಾರತ ಜಿಂಬಾಬ್ವೆ ವಿರುದ್ಧ 10 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ ಇನ್ನೂ ಒಂದು ಪಂದ್ಯ ಬಾಕಿ ಇರುವಾಗಲೇ 5 ಪಂದ್ಯಗಳ ಟಿ20 ಸರಣಿಯನ್ನು 3–1 ಅಂತರದಲ್ಲಿ ವಶಪಡಿಸಿಕೊಂಡಿದೆ. ಇಲ್ಲಿನ ಹರಾರೆ ಸ್ಪೋರ್ಟ್ಸ್ ಕ್ಲಬ್ ಶನಿವಾರ ನಡೆದ ಪಂದ್ಯಾವಳಿಯ 4ನೇ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಜಿಂಬಾಬ್ವೆ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 152 ರನ್ ಗಳಿಸಿತ್ತು. 153 ರನ್‌ಗಳ ಗುರಿ ಬೆನ್ನತ್ತಿದ ಭಾರತ 15.2 ಓವರ್‌ಗಳಲ್ಲೇ 156 ರನ್ ಗಳಿಸಿ ಗೆಲುವು ಸಾಧಿಸಿತು.

ಅಬ್ಬರಿಸಿದ ಯಶಸ್ವಿ ಜೈಸ್ವಾಲ್: ಭಾರತದ ಪರ ಇನಿಂಗ್ಸ್ ಆರಂಭಿಸಿದ ಯಶಸ್ವಿ ಜೈಸ್ವಾಲ್ ಹಾಗೂ ಶುಭಮನ್ ಗಿಲ್ ಅವರನ್ನು ಔಟ್ ಮಾಡಲು ಜಿಂಬಾಬ್ವೆ ಬೌಲರ್‌ಗಳು ವಿಫಲರಾದರು. ಆರಂಭದಿಂದಲೂ ಸ್ಫೋಟಕ ಬ್ಯಾಟಿಂಗ್ ನಡೆಸಿದ ಜೈಸ್ವಾಲ್ ಜಿಂಬಾಬ್ವೆ ಬೌಲರ್‌ಗಳನ್ನು ಹಿಗ್ಗಾಮುಗ್ಗಾ ದಂಡಿಸಿ 29 ಎಸೆತಗಳಲ್ಲೇ ಫಿಫ್ಟಿ ಬಾರಿಸಿದ್ದರು. ಬಳಿಕವೂ ತಮ್ಮ ಆಕ್ರಮಣಕಾರಿ ಬ್ಯಾಟಿಂಗ್ ಮುಂದುವರಿಸಿ 53 ಎಸೆತಗಳಲ್ಲಿ 2 ಸಿಕ್ಸರ್, 13 ಬೌಂಡರಿ ಒಳಗೊಂಡ 93 ರನ್ ಗಳಿಸಿ ಅಜೇಯರಾಗಿ ಉಳಿದರು. ಆ ಮೂಲಕ ಟಿ20 ಕ್ರಿಕೆಟ್‌ನ ಚೊಚ್ಚಲ ಶತಕದಿಂದ ವಂಚಿತರಾದರು. ಮತ್ತೊಂದೆಡೆ ತಾಳ್ಮೆಯ ಬ್ಯಾಟಿಂಗ್ ನಡೆಸಿದ ನಾಯಕ ಶುಭಮನ್ ಗಿಲ್ ಸಮಯೋಜಿತ ಆಟ ಆಡಿದರು. ಅಂತಿಮವಾಗಿ 39 ಎಸೆತಗಳಲ್ಲಿ 2 ಸಿಕ್ಸರ್, 6 ಬೌಂಡರಿ ಒಳಗೊಂಡ ಅಜೇಯ 58ರನ್ ಗಳಿಸಿ ತಂಡಕ್ಕೆ ಜಯ ತಂದು ಕೊಟ್ಟರು.

ಜಿಂಬಾಬ್ವೆ 152 ರನ್: ಇದಕ್ಕೂ ಮುನ್ನ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಅತಿಥೇಯ ಜಿಂಬಾಬ್ವೆ ಕೇವಲ 152 ರನ್ ಗಳಿಸಿತು. 9ನೇ ಓವರ್‌ವರೆಗೂ ವಿಕೆಟ್ ನಷ್ಟವಿಲ್ಲದೆ 63 ರನ್ ಗಳಿಸಿದ್ದ ಜಿಂಬಾಬ್ವೆ ಉತ್ತಮ ಆರಂಭವನ್ನು ದೊಡ್ಡ ಮೊತ್ತವಾಗಿ ಪರಿವರ್ತಿಸಲು ವಿಫಲವಾಯಿತು. ತಂಡದ ಪರ ಮರುಮಾನಿ 32, ಮಧೆವೆರೆ 25, ನಾಯಕ ಸಿಕಂದರ್ ರಾಜಾ 46 ರನ್ ಗಳಿಸಿದ್ದು ಬಿಟ್ಟರೆ ಉಳಿದವರಿಂದ ನಿರೀಕ್ಷಿತ ಆಟ ಮೂಡಿ ಬರಲಿಲ್ಲ. ಭಾರತದ ಪರ ಖಲೀಲ್ ಅಹ್ಮದ್ 2, ತುಷಾರ್ ದೇಶಪಾಂಡೆ, ವಾಷಿಂಗ್ಟನ್ ಸುಂದರ್, ಶಿವಂ ದುಬೆ ಹಾಗೂ ಅಭಿಷೇಕ್ ಶರ್ಮಾ ತಲಾ ಒಂದೊಂದು ವಿಕೆಟ್ ಕಬಳಿಸಿದರು. ಭಾರತದ ಪರ ಭರ್ಜರಿ ಆಟವಾಡಿದ ಯಶಸ್ವಿ ಜೈಸ್ವಾಲ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಮುಮ್ಮಡಿ ಕೃಷ್ಣರಾಜ ಒಡೆಯರ್ 230ನೇ ಜಯಂತ್ಯುತ್ಸವ



ಮೈಸೂರು, ಜು. 13– ಮೈಸೂರಿನ ಶ್ರೀ ಕೃಷ್ಣ ಗಾನಸಭಾ ವತಿಯಿಂದ ಜು. 14 ಮತ್ತು 18 ರಂದು ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್ 230ನೇ ಜಯಂತ್ಯುತ್ಸವ ಮತ್ತು ಶ್ರೀ ಜಯ ಚಾಮರಾಜ ಒಡೆಯರ್ 105ನೇ ಜಯಂತ್ಯೋತ್ಸವವನ್ನು ಗೋಕುಲಂ 3ನೇ ಹಂತದಲ್ಲಿರುವ ಆಳ್ವಾರ್ ಕಲಾಭವನ, ಶ್ರೀ ಕೃಷ್ಣ ದೇವಸ್ಥಾನದಲ್ಲಿ ಏರ್ಪಡಿಸಲಾಗಿದೆ.

ಜು. 14 ರಂದು ಸಂಜೆ 6 ಗಂಟೆಗೆ ನಡೆಯುವ ಜಯಂತ್ಯುತ್ಸವದ ಮುಖ್ಯ ಅತಿಥಿಗಳಾಗಿ ಕಪ್ಪಡಿ ಮಠಾಧಿಪತಿಗಳಾದ ಶ್ರೀ ವರ್ಚಸ್ವಿ ಸಿದ್ದಲಿಂಗರಾಜೇ ಅರಸ್ ಭಾಗವಹಿಸುವರು. ಶ್ರೀ ಕೃಷ್ಣಗಾನ ಸಭಾ ಅಧ್ಯಕ್ಷ ಬಿ.ಎಸ್. ಶ್ರೀಧರರಾಜೇ ಅರಸ್ ಅಧ್ಯಕ್ಷತೆ ವಹಿಸಲಿದ್ದಾರೆ.

ಜು. 18 ರಂದು ಸಂಜೆ 6 ಗಂಟೆಗೆ ನಡೆಯುವ ಶ್ರೀ ಜಯ ಚಾಮ ರಾಜ ಒಡೆಯರ್ ಅವರ 105ನೇ ಜಯಂತ್ಯೋತ್ಸವದ ಮುಖ್ಯ ಅತಿಥಿಗಳಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ ಭಾಗವಹಿಸಲಿದ್ದು, ಶ್ರೀ ಕೃಷ್ಣಗಾನ ಸಭಾ ಅಧ್ಯಕ್ಷ ಬಿ.ಎಸ್. ಶ್ರೀಧರ ರಾಜೇ ಅರಸ್ ಅಧ್ಯಕ್ಷತೆ ವಹಿಸಲಿದ್ದಾರೆ. ಇದೇ ವೇಳೆ ವಿದುಷಿ ಅದಿತಿ ಪ್ರಹ್ಲಾದ್ ಅವರಿಂದ ಗಾಯನ ಏರ್ಪಡಿಸಲಾಗಿದೆ. ವಿದ್ವಾನ್ ನಂದನ್ ಕಶ್ಯಪ್–ಮೃದಂಗ, ವಿದ್ವಾನ್ ಕೇಶವ ಎಂ. ಕುಮಾರ್–ಪಿಟೀಲು, ವಿದ್ವಾನ್ ಎಂ.ಜಿ. ಕಿರಣ್ ಕುಮಾರ್–ಘಟಂನಲ್ಲಿ ಸಹಕಾರ ನೀಡಲಿದ್ದಾರೆ.





ಸಾಲ ಪಡೆದ ಉದ್ಯಮಿ ಸಾವಿನಿಂದ ಸಾಲ ಕೊಟ್ಟವರು ಕಂಗಾಲು; ಕಾನೂನು ಮೊರೆ

ಲೋಕ್ ಅದಾಲತ್‌ನಲ್ಲಿ ಪ್ರಕರಣ ಇತ್ಯರ್ಥ; ನ್ಯಾಯಾಧೀಶರಾದ ರವೀಂದ್ರ ಹೆಗಡೆ ಮುಂದೆ ನಿಂತು ರಾಜೀ ಸಂಧಾನ



ಲೋಕ್ ಅದಾಲತ್‌ನಲ್ಲಿ ಇತ್ಯರ್ಥವಾದ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಮೈಸೂರು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ರವೀಂದ್ರ ಹೆಗಡೆ ಅವರು 81 ವರ್ಷದ ವೃದ್ಧೆಯ ಬಳಿಗೆ ತಾವೇ ತೆರಳಿ ಕಾರಿನಲ್ಲೇ ಸಹಿ ಪಡೆದು ಪ್ರಕರಣ ಇತ್ಯರ್ಥಗೊಳಿಸಿದರು.

ಮೈಸೂರು,ಜು.13(ಎಂಟಿವೈ)– ರಿಯಲ್ ಎಸ್ಟೇಟ್ ಉದ್ಯಮಕ್ಕಾಗಿ ಕೋಟ್ಯಾಂತರ ರೂ. ಸಾಲ ಮಾಡಿ ಅಕಾಲಿಕ ನಿಧನ ಹೊಂದಿದ ವ್ಯಕ್ತಿಯ ಕುಟುಂಬದಿಂದ ಸಾಲಗಾರರಿಗೆ ಹಣ ಹಿಂದಿರುಗಿಸುವ ಅಪರೂಪ ಪ್ರಸಂಗ ಮೈಸೂರಿನಲ್ಲಿ ಶನಿವಾರ ನಡೆದ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ನಡೆದಿದೆ.

ಲೋಕ್ ಅದಾಲತ್‌ನಲ್ಲಿ ಸಾಮಾನ್ಯವಾಗಿ ಕೌಟುಂಬಿಕ ಕಲಹದಿಂದ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ ದಂಪತಿಗೆ ತಿಳಿಹೇಳಿ ಅವರನ್ನು ಒಂದುಗೂಡಿಸುವುದು ಸೇರಿದಂತೆ ಇತರೆ ಪ್ರಕರಣಗಳು ರಾಜೀ ಸಂದಾನದ ಮೂಲಕ ಇತ್ಯರ್ಥವಾಗುತ್ತಿದ್ದವು. ಆದರೆ ಈ ಬಾರಿ ಕೋಟ್ಯಾಂತರ ರೂ. ಸಾಲದ ಪ್ರಕರಣ ಇತ್ಯರ್ಥವಾಗಿದ್ದು ವಿಶೇಷವಾಗಿದೆ. ಈ ಮೂಲಕ ಮೈಸೂರಿನ ಲೋಕ್ ಅದಾಲತ್ ದೇಶದ ಗಮನ ಸೆಳೆದಿದೆ.

ರಿಯಲ್ ಎಸ್ಟೇಟ್ ಉದ್ಯಮಿಯೊಬ್ಬರ ಸಾಲದ ಹೊಣೆ ಹೊರಲು ಒಪ್ಪದ ಅವರ ಕುಟುಂಬದವರಿಗೆ ಸಾಲ ನೀಡಿದವರ ಪರಿಸ್ಥಿತಿ ಹಾಗೂ ಈ ಪ್ರಕರಣದಲ್ಲಿ ಕೈಗೊಳ್ಳಬಹುದಾದ ಕಾನೂನು ಕ್ರಮಗಳ ಬಗ್ಗೆ ಮನದಟ್ಟು ಮಾಡಿಸಿ, ಸೌಹಾರ್ದಯುತವಾಗಿ ಪ್ರಕರಣ ಬಗೆಹರಿಸುವಲ್ಲಿ ಅದಾಲತ್ ಯಶಸ್ವಿಯಾಗಿದೆ. ಮೈಸೂರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ರವೀಂದ್ರ ಹೆಗಡೆ ಅವರ ಸಮ್ಮುಖದಲ್ಲಿ ಸಾಲ ಮರು ಪಾವತಿ ಒಪ್ಪಿಗೆ ಪತ್ರಕ್ಕೆ ಸಹಿ ಪಡೆಯಲಾಯಿತು. ಸಾಲ ನೀಡಿದ್ದವರು ಬಾವುಕರಾಗಿ ನ್ಯಾಯಾಧೀಶರಿಗೆ ಕೈಮುಗಿದರೆ, ಸಾಲ ಮರುಪಾವತಿಗೆ ಒಪ್ಪಿದವರೂ ನಿರಾಳ ಭಾವದಿಂದ ವಂದಿಸಿದರು.

ಏನಿದು ಪ್ರಕರಣ?: ಮೈಸೂರಿನ ರಿಯಲ್ ಎಸ್ಟೇಟ್ ಉದ್ಯಮಿಯೊಬ್ಬರು 16 ಮಂದಿ ಸ್ನೇಹಿತರಿಂದ 17 ಕೋಟಿ ರೂ. ಸಾಲ ಪಡೆದು, ಆ ಹಣವನ್ನು ಜಮೀನು, ನಿವೇಶನ ಖರೀದಿ ಹಾಗೂ ನಿರ್ಮಾಣಕ್ಕೆ ಬಳಸಿದ್ದರು. ಆದರೆ ಸಾಲ ಮರುಪಾವತಿಸುವ ಮುನ್ನವೇ ಅವರು ಅಕಾಲಿಕವಾಗಿ ನಿಧನವಾದರು. ಇದರಿಂದ ಸಾಲ ನೀಡಿದ್ದವರು ಕಂಗಲಾಗಿ ಮೃತರ ಕುಟುಂಬದವರನ್ನು ಭೇಟಿ ಮಾಡಿ ಸಾಲ ಮರುಪಾವತಿಗೆ ಮನವಿ ಮಾಡಿದರು. ಆದರೆ ಮೃತರ ತಾಯಿ, ಪತ್ನಿ ಮತ್ತು ಮಕ್ಕಳು ಸಾಲದ ಬಗ್ಗೆ ನಮಗೇನು ಮಾಹಿತಿ ಇಲ್ಲ ಎಂದು ಸಾಲದ ಹೊಣೆ ಹೊರಲು ನಿರಾಕರಿಸಿದ್ದರು.

ಹಾಗಾಗಿ ಸಾಲ ನೀಡಿದ್ದ ಎಲ್ಲರೂ ಅನಿವಾರ್ಯವಾಗಿ ನ್ಯಾಯಾಲಯದ ಮೊರೆ ಹೋಗಿದ್ದರು. 16 ಮಂದಿಯೂ ದಾವೆ ಹೂಡಿ 2 ವರ್ಷದಿಂದ ವಿಚಾರಣೆಗೆ ಹಾಜರಾಗುತ್ತಿದ್ದರು.ಸಾಲ ಮರುಪಾವತಿಗೆ ಮೃತ ವ್ಯಕ್ತಿಯ ತಾಯಿ ಒಪ್ಪಿರಲಿಲ್ಲ. ಈ ಪ್ರಕರಣ ಇಂದಿನ ಲೋಕ್ ಅದಾಲತ್ ಮುಂದೆ ಬಂದಿತು. ಸಾಲ ನೀಡಿದವರು ಹಾಗೂ ಸಾಲ ಪಡೆದಿದ್ದ ವ್ಯಕ್ತಿಯ ಕುಟುಂಬದವರನ್ನು ಕರೆಸಿ ನ್ಯಾಯಾಧೀಶರು ಮಾತನಾಡಿದರು. ಸಾಲ ಮಾಡಿದ್ದ ವ್ಯಕ್ತಿ ಮೃತಪಟ್ಟರೆ ಅದನ್ನು ಮರುಪಾವತಿಸುವ ಜವಾಬ್ದಾರಿ ಯಾರದ್ದಾಗಿರುತ್ತದೆ?. ಸಾಲ ಮರುಪಾವತಿಸದಿದ್ದರೆ ಏನೆಲ್ಲಾ ಕಾನೂನು ಕ್ರಮಗಳನ್ನು ಜರುಗಿಸಲು ಅವಕಾಶವಿದೆ? ಎಂಬುದನ್ನು ನ್ಯಾಯಾಧೀಶರು ಮನವರಿಕೆ ಮಾಡಿಕೊಟ್ಟರು. ಕಡೆಗೆ ನ್ಯಾಯಾಧೀಶರ ಮಾತಿಗೆ ಸಮ್ಮತಿಸಿದ ಮೃತರ ಕುಟುಂಬದವರು ಸಾಲ ಮರುಪಾವತಿಗೆ ಒಪ್ಪಿಕೊಂಡರು. ಈ ಮೂಲಕ ಪ್ರಕರಣ ಸೌಹಾರ್ದಯುತವಾಗಿ ಬಗೆಹರಿಯಿತು.

ಕಕ್ಷಿದಾರರ ಬಳಿಗೆ ನ್ಯಾಯಾಧೀಶರು: ಸಾಲ ಮರು ಪಾವತಿಗೆ ವಕೀಲರ ಮೂಲಕ ಒಪ್ಪಿಗೆ ಸೂಚಿಸಿದ ಮಹಿಳೆಯನ್ನು ನ್ಯಾಯಾಲಯದ ಆವರಣದಲ್ಲಿ ನೇರವಾಗಿ ಭೇಟಿ ಮಾಡಿದ ನ್ಯಾಯಾಧೀಶರಾದ ರವೀಂದ್ರ ಹೆಗಡೆ ಅವರು, ರಾಜೀ ಸಂಧಾನ ಪತ್ರಕ್ಕೆ ಸಹಿ ಹಾಕಿಸಿದರು. ಅಲ್ಲದೆ 1.73 ಕೋಟಿ ಸಾಲ ನೀಡಿದ್ದ, 81 ವರ್ಷದ ಮಹಿಳೆಗೆ ಮೆಟ್ಟಿಲು ಹತ್ತಲಾಗುವುದಿಲ್ಲ ಎಂದು ತಿಳಿದು ಅವರ ಬಳಿಗೇ ತೆರಳಿ ಕಾರಿನಲ್ಲೇ ಸಹಿ ಪಡೆದರು.

ಈ ವೇಳೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯದರ್ಶಿ ಬಿ.ಜಿ.ದಿನೇಶ್, ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ಡಿ.ಪುಟ್ಟಸ್ವಾಮಿ ಹಾಗೂ ವಕೀಲರು ಹಾಜರಿದ್ದರು.

55 ಪ್ರಕರಣ ಇತ್ಯರ್ಥ

ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ 17 ಕೋಟಿ ರೂ. ಸಾಲ ನೀಡಿಕೆಯ 16 ಪ್ರಕರಣಗಳೂ ಸೇರಿದಂತೆ ಸದ್ಯ 55 ಪ್ರಕರಣಗಳು ಅದಾಲತ್‌ನಲ್ಲಿ ಇತ್ಯರ್ಥಗೊಂಡವು. ಒಟ್ಟು 22.84 ಕೋಟಿ ರೂ. ಸಾಲ ವಸೂಲಾತಿ ಪ್ರಕರಣಗಳನ್ನು ಪರಿಹರಿಸಲಾಯಿತು. ದೇಶಾದ್ಯಂತ ಮೆಗಾ ಲೋಕ್ ಅದಾಲತ್ ನಡೆದಿದ್ದು, ಮೈಸೂರಿನಲ್ಲಿ ಇತ್ಯರ್ಥವಾಗಿರುವ ಪ್ರಕರಣಗಳ ಮಾಹಿತಿ ಇಂದು ಲಭ್ಯವಾಗಿಲ್ಲ.

ಮೈಸೂರು ಮಿತ್ರ ಭಾನುವಾರ 14 ಜುಲೈ 2024

ದೇಶ - ವಿದೇಶ

ಶಾಲಾ ಕಟ್ಟಡ ಕುಸಿದು 22 ವಿದ್ಯಾರ್ಥಿಗಳು ಸಾವು

ಅಬುಜಾ: ಆಫ್ರಿಕಾದ ನೈಜೀರಿಯಾದಲ್ಲಿ ಭೀಕರ ಅಪಘಾತ ಸಂಭವಿಸಿದೆ. ಇಲ್ಲಿನ ಸೇಂಟ್ಸ್ ಅಕಾಡೆಮಿ ಕಾಲೇಜಿನ ಎರಡು ಅಂತಸ್ತಿನ ಕಟ್ಟಡ ಏಕಾಏಕಿ ಕುಸಿದು ಬಿದ್ದ ಪರಿಣಾಮ 22 ಮಕ್ಕಳು ಸಾವನ್ನಪ್ಪಿದ್ದು, ಹಲವರು ಗಾಯಗೊಂಡಿದ್ದಾರೆ. ಶಾಲಾ ಸಿಬ್ಬಂದಿ ವರ್ಗ ಸೇರಿದಂತೆ ಹಲವು ವಿದ್ಯಾರ್ಥಿಗಳು ಅವಶೇಷಗಳಡಿ ಸಿಲುಕಿದ್ದು, ಶೋಧ ಕಾರ್ಯ ಮುಂದುವರಿದಿದೆ. ಗಾಯಾಳುಗಳಿಗೆ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕಳುಹಿಸಲಾಗಿದೆ. ಆರಂಭದಲ್ಲಿ ಒಟ್ಟು 154 ವಿದ್ಯಾರ್ಥಿಗಳು ಅವಶೇಷಗಳಲ್ಲಿ ಸಿಲುಕಿಕೊಂಡಿದ್ದು, ಅವರಲ್ಲಿ 132 ವಿದ್ಯಾರ್ಥಿಗಳನ್ನು ರಕ್ಷಿಸಲಾಗಿದೆ. ದುರದೃಷ್ಟವಶಾತ್ 22 ವಿದ್ಯಾರ್ಥಿಗಳು ಸಾವನ್ನಪ್ಪಿದ್ದಾರೆ ಎಂದು ಪೊಲೀಸ್ ವಕ್ತಾರ ಆಲ್ಫ್ರೆಡ್ ಅಲಾಬೊ ಹೇಳಿದ್ದಾರೆ. ಈ ಶಾಲೆಯನ್ನು ನದಿಯ ದಡದಲ್ಲಿ ನಿರ್ಮಿಸಲಾಗಿರುವುದೇ ಈ ಅಪಘಾತಕ್ಕೆ ಕಾರಣ ಎಂದು ರಾಜ್ಯ ಸರ್ಕಾರ ಆರೋಪಿಸಿದೆ. ಅಲ್ಲದೆ, ಮುನ್ನೆಚ್ಚರಿಕೆ ವಹಿಸಿ, ದುರ್ಬಲ ಕಟ್ಟಡಗಳನ್ನು ಹೊಂದಿರುವ ಮತ್ತು ನದಿ ದಡದಲ್ಲಿರುವ ರಾಜ್ಯದ ಎಲ್ಲಾ ಶಾಲಾ ಕಟ್ಟಡಗಳನ್ನು ಕೂಡಲೇ ಮುಚ್ಚುವಂತೆ ಸರ್ಕಾರ ಮನವಿ ಮಾಡಿದೆ.



ಕೃಷಿ ಹೊಂಡ ಅಗೆಯುವ ವೇಳೆ ಚಿನ್ನಾಭರಣ ಪತ್ತೆ

ಕಣ್ಣೂರು: ಮಳೆ ನೀರು ಕೊಯ್ಲು ಹೊಂಡವನ್ನು ತೆಗೆಯುತ್ತಿರುವಾಗ ಅಲ್ಲಿದ್ದ ಮಹಿಳಾ ಕಾರ್ಮಿಕರಿಗೆ ಆಶ್ಚರ್ಯಕರ ರೀತಿಯಲ್ಲಿ ನಿಧಿ ಸಿಕ್ಕಿರುವ ಘಟನೆ ಕೇರಳದ ಕಣ್ಣೂರು ಜಿಲ್ಲೆಯಲ್ಲಿ ನಡೆದಿದೆ. ಹೊಂಡವನ್ನು ಅಗೆಯುತ್ತಿರುವಾಗ ಹೊಳೆಯುತ್ತಿರುವ ವಸ್ತು ಕಂಡು ಮೊದಲು ಬಾಂಬ್ ಎಂದು ಭಯಪಟ್ಟು ದೂರ ಸರಿದರು. ಆದರೆ ಕೆಲ ಸಮಯದ ನಂತರ ಮಾಟಮಂತ್ರದ ವಸ್ತುಗಳು ಎಂದು ಭಾವಿಸಿದ್ದರು. ಆದರೆ ಬಂಗಾರ, ವಜ್ರ, ಚಿನ್ನದ ನಾಣ್ಯಗಳು ಸೇರಿದಂತೆ ಆಭರಣಗಳ ನಿಧಿ ಪತ್ತೆಯಾಯಿತು ಎಂದು ಮಹಿಳೆಯೊಬ್ಬರು ಘಟನೆ ಬಗ್ಗೆ ವಿವರಿಸಿದ್ದಾರೆ. ಈ ಬಗ್ಗೆ ಪೊಲೀಸರಿಗೆ ಸ್ಥಳೀಯರು ಮಾಹಿತಿ ನೀಡಿದರು. ಸ್ಥಳಕ್ಕೆ ಧಾವಿಸಿದ ಪೊಲೀಸರು ಪರಿಶೀಲನೆ ನಡೆಸಿ, ನಿಧಿ ಪತ್ತೆಯಾಗಿರುವ ಬಗ್ಗೆ ಪುರಾತತ್ವ ಇಲಾಖೆಗೆ ತಿಳಿಸಲಾಗಿದೆ. ಈ ಸ್ಥಳದಲ್ಲಿ ಹೆಚ್ಚಿನ ಉತ್ಖನನ ನಡೆಸುವುದು ಇಲಾಖೆಗೆ ಸಂಬಂಧಿಸಿದ ವಿಷಯ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ನಾವು ಈಗಾಗಲೇ ಪತ್ತೆಯಾಗಿರುವ ಆಭರಣ, ನಾಣ್ಯ ಸೇರಿದಂತೆ ನಿಧಿಯನ್ನು ಸ್ಥಳೀಯ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇವೆ. ಶನಿವಾರ ಸಹ ನಿಧಿ ಪತ್ತೆಯಾದ ಸ್ಥಳದ ಹತ್ತಿರ ಮೂರು ಬೆಳ್ಳಿ ಹಾಗೂ ಚಿನ್ನದ ನಾಣ್ಯ ಪತ್ತೆಯಾಗಿದೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.



ಪತ್ನಿಯ ಇನ್‌ಸ್ಟಾಗ್ರಾಂ ಪೋಸ್ಟ್‌ನಿಂದ ಗಂಡ ಅರೆಸ್ಟ್!

ಬ್ರೆಜಿಲ್: ಕಳೆದ ಎರಡು ವರ್ಷಗಳಿಂದ ಪೊಲೀಸರಿಂದ ತಲೆಮರೆಸಿಕೊಂಡು ಓಡಾಡುತ್ತಿದ್ದ ಡ್ರಗ್ ಕಿಂಗ್‌ಪಿನ್‌ನನ್ನು ಬಂಧಿಸಲಾಗಿದೆ. ರೊನಾಲ್ಡ್ ರೋಲ್ಯಾಂಡ್ ಬಂಧಿತ ಡ್ರಗ್ ಕಿಂಗ್‌ಪಿನ್. ಈತ, ಪತ್ನಿ ಆಂಡ್ರೆಝಾ ಡಿ ಲಿಮಾ ಮತ್ತು ಇವರ ಮಗಳು ಕಳೆದ 2 ವರ್ಷಗಳಿಂದ ನಾಪತ್ತೆಯಾಗಿದ್ದರು. ಇದೀಗ ಆಂಡ್ರೆಝಾ ಡಿ ಲಿಮಾ ಮಾಡಿದ ಇನ್‌ಸ್ಟಾಗ್ರಾಂ ಪೋಸ್ಟ್ ಮಾಹಿತಿ ಆಧರಿಸಿಯೇ ಪೊಲೀಸರು ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇನ್‌ಸ್ಟಾಗ್ರಾಂನಲ್ಲಿ ತಮ್ಮ ಲೊಕೇಶನ್ ಶೇರ್ ಮಾಡಿಕೊಂಡಿದ್ದರಿಂದ ಪೊಲೀಸರಿಗೆ ಸ್ಥಳ ಗೊತ್ತಾಗಿತ್ತು. ಡಿ ಲಿಮಾ ಬಿಕಿನಿ ವ್ಯವಹಾರ ಮಾಡಿಕೊಂಡಿದ್ದು, ವಿಲಾಸಿ ಜೀವನ ನಡೆಸುತ್ತಾ ಕೊಲಂಬಿಯಾ, ಫ್ರಾನ್ಸ್, ದುಬೈ, ಮಾಲ್ಡೀವ್ಸ್ ಅಂತ ವಿದೇಶ ಪ್ರಯಾಣ ಮಾಡುತ್ತಿರುತ್ತಾಳೆ. ರೆಸ್ಟೋರೆಂಟ್‌ನಲ್ಲಿ ಪತಿ ಜೊತೆ ಊಟ ಮಾಡುತ್ತಿರುವ ಫೋಟೋವನ್ನು ಇನ್‌ಸ್ಟಾಗ್ರಾಂ ಖಾತೆಯಲ್ಲಿ ಹಂಚಿಕೊಂಡಿದ್ದಳು. ಡೈಲಿ ಮೇಲ್ ವರದಿ ಪ್ರಕಾರ, ಬಂಧಿತ ರೊನಾಲ್ಡ್ ಬಳಿಯಿಂದ ಅಪಾರ ಪ್ರಮಾಣದ ನಗದು, ಆಭರಣಗಳು, ಬಂದೂಕು ಹಾಗೂ ಒಡೆತನದಲ್ಲಿದ್ದ ಐಷಾರಾಮಿ ಬೋಟ್, 34 ಕಾರ್, ವಿಮಾನವನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ರೊನಾಲ್ಡ್ ರೋಲ್ಯಾಂಡ್ ಮೆಕ್ಸಿಕೋದಲ್ಲಿಯ ಡ್ರಗ್ಸ್ ಸಾಗಾಟದಾರರ ಜೊತೆಯಲ್ಲಿಯೂ ಸಂಪರ್ಕ ಹೊಂದಿದ್ದನು ಎಂದು ಬ್ರೆಜಿಲ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.



ಇಂಡಿಗೋ ಏರ್‌ಲೈನ್ಸ್‌ನಲ್ಲಿ ಕಸ-ಕಡ್ಡಿ: ದಂಪತಿಗೆ 10 ಸಾವಿರ ಪರಿಹಾರ

ಹೈದರಾಬಾದ್: ಸಾಮಾನ್ಯವಾಗಿ ವಿಮಾನ ಪ್ರಯಾಣ ಅಂದಾಗ ಆರಾಮವಾಗಿ, ಯಾವುದೇ ಕಿರಿಕಿರಿ ಇರಲ್ಲ ಅಂದುಕೊಳ್ಳುತ್ತೇವೆ. ಆದರೆ ದಂಪತಿಗೆ ವಿಮಾನ ಪ್ರಯಾಣವೇ ಕಿರಿಕಿರಿ ಅನಿಸಿದೆ. ವಿಮಾನದಲ್ಲಿ ಸ್ವಚ್ಛತೆ ಇಲ್ಲ ಎಂದು ಹೈದರಾಬಾದ್‌ನ ದಂಪತಿ ಇಂಡಿಗೋ ಏರ್‌ಲೈನ್ಸ್ ಮೇಲೆ ದೂರು ನೀಡಿದ್ದರು. ಈ ಪ್ರಕರಣಕ್ಕೆ ಸಂಬಂಧಿಸಿ ಇಂಡಿಗೋ ಏರ್‌ಲೈನ್ಸ್ 10,000 ರೂಪಾಯಿ ಪರಿಹಾರ ನೀಡುವಂತೆ ಹೈದರಾಬಾದ್‌ನ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಆದೇಶಿಸಿದೆ. ಈ ಪ್ರಕರಣ 2021ರಲ್ಲಿ ನಡೆದಿತ್ತು. ವಿಮಾನ ಸ್ವಚ್ಛವಾಗಿಲ್ಲ ಎಂದು ಪ್ರಯಾಣಿಕ ಡಿ.ರಾಧಾಕೃಷ್ಣನ್ ದೂರು ದಾಖಲಿಸಿದ್ದರು. ದಂಪತಿ ಪ್ರಯಾಣಿಸಿದ ಕೋಚ್‌ನಲ್ಲಿ ಪ್ಲಾಸ್ಟಿಕ್ ಬಾಟಲಿಗಳು, ಬಳಸಿದ ನ್ಯಾಪ್‌ಕಿನ್‌ಗಳು ಮತ್ತು ಇತರ ಅನುಪಯುಕ್ತ ವಸ್ತುಗಳು ತುಂಬಿದ್ದವು ಎಂದು ಆರೋಪಿಸಲಾಗಿದೆ. ಇದರಿಂದಾಗಿ ವಿಮಾನದಲ್ಲಿ ತುಂಬಾ ಅಹಿತಕರ ಪ್ರಯಾಣದ ಅನುಭವವಾಗಿದೆ ಎಂದು ದಂಪತಿ ದೂರಿನಲ್ಲಿ ತಿಳಿಸಿದ್ದಾರೆ. ವಿಮಾನದಲ್ಲಿನ ಅನೈರ್ಮಲ್ಯದಿಂದಾಗಿ ಪತ್ನಿಗೆ ವಾಕರಿಕೆ ಮತ್ತು ವಾಂತಿಯಾಗಿದೆ ಎಂದು ದೂರಿದ್ದಾರೆ. ಆದರೆ ಪ್ರಯಾಣದ ವೇಳೆ ಪತ್ನಿಗೆ ತೊಂದರೆಯಾಗಿದೆ ಎಂದು ಪ್ರಯಾಣಿಕ ಹೇಳಿಲ್ಲ ಎಂದು ಇಂಡಿಗೋ ತಿಳಿಸಿದೆ. ಪ್ರಯಾಣಕ್ಕೂ ಮುನ್ನ ಕೋಚ್‌ಗಳನ್ನು ಸ್ವಚ್ಛಗೊಳಿಸುವ ಜವಾಬ್ದಾರಿ ಇಂಡಿಗೋಗೆ ಇದೆ ಎಂದು ಆಯೋಗ ಸ್ಪಷ್ಟಪಡಿಸಿದೆ.



ಅಮೆರಿಕ ಸೇನೆಗೆ ಶೇ.25 ರೋಬೋಟ್ ಸೈನಿಕರು

ವಾಷಿಂಗ್ಟನ್: ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಬಳಕೆ ಮಾಡಿಕೊಂಡು ಸೇನೆಯ ಬಲವರ್ಧನೆ ಮಾಡುವ ಚಿಂತನೆ ಅಮೆರಿಕದಲ್ಲಿ ನಡೆಯುತ್ತಿದೆ. ಅದರಲ್ಲೂ ಎಐ ತಂತ್ರಜ್ಞಾನ ಆಧರಿತ ರೋಬೋಟ್‌ಗಳನ್ನು ಸೇನೆಗೆ ಪರಿಚಯಿಸಲು ಸಿದ್ಧತೆ ನಡೆಯುತ್ತಿದೆ.

ಈ ಕುರಿತಾಗಿ ಪ್ರತಿಕ್ರಿಯೆ ನೀಡಿರುವ ಅಮೆರಿಕ ಸೇನೆಯ ನಿವೃತ್ತ ಜನರಲ್ ಮಾರ್ಕ್ ಮಿಲ್ಲೆ, ಮುಂದಿನ 10ರಿಂದ 15 ವರ್ಷಗಳಲ್ಲಿ ಅಮೆರಿಕ ಸೇನೆಯ ಒಟ್ಟು ಸೈನಿಕರ ಪೈಕಿ ಶೇ.25ರಷ್ಟು ಸೈನಿಕರು ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಹೊಂದಿರುವ ರೋಬೋಟ್‌ಗಳನ್ನೇ ಕೆಲಸಕ್ಕೆ ನಿಯೋಜಿಸುವ ಸಾಧ್ಯತೆಗಳು ಇವೆ ಎಂದಿದ್ದಾರೆ. ಸೈನ್ಯದಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಆಧರಿತ ರೋಬೋಟ್‌ಗಳನ್ನು ಕೆಲಸಕ್ಕೆ ನಿಯೋಜನೆ ಮಾಡಿದರೆ ಹಲವು ರೀತಿಯ ಅನುಕೂಲಗಳಿವೆ. ಅತ್ಯಂತ ಕ್ಲಿಷ್ಟಕರ ಹಾಗೂ ಸಂಕೀರ್ಣವಾದ ಮಿಲಿಟರಿ ಆಪರೇಷನ್‌ಗಳನ್ನು ರೋಬೋಟ್‌ಗಳು ಸಮರ್ಥವಾಗಿ ನಿಭಾಯಿಸಬಲ್ಲವು.



ತಿಂಗಳ ಹಿಂದೆ ಮುಳುಗಿದ ಶವಕ್ಕಾಗಿ ಇನ್ನೂ ಹುಡುಕಾಟ

ವಾಷಿಂಗ್ಟನ್: ಕಳೆದ ತಿಂಗಳು ಅಮೆರಿಕದ ಗ್ಲೇಸಿಯರ್ ನ್ಯಾಷನಲ್ ಪಾರ್ಕ್‌ನಲ್ಲಿ ಮುಳುಗಿದ್ದ ಭಾರತೀಯ ಟೆಕ್ಕಿ, ಮಹಾರಾಷ್ಟ್ರದ ಪುಣೆ ಮೂಲದ ಸಿದ್ಧಾಂತ್ ವಿಠ್ಠಲ್ ಪಾಟೀಲ್(26) ಅವರ ಮೃತದೇಹಕ್ಕಾಗಿ ಇನ್ನೂ ಶೋಧನೆ ಮುಂದುವರಿದಿದೆ. ತಿಂಗಳು ಕಳೆದರೂ ಅವರ ಮೃತದೇಹ ಸಿಕ್ಕಿಲ್ಲ. ಅತ್ತ, ಆತನ ಸ್ನೇಹಿತರು ಸಹ ಸ್ಥಳೀಯ ಅಧಿಕಾರಿಗಳೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿದ್ದು, ಅವರೂ ಆತನ ಮೃತದೇಹಕ್ಕಾಗಿ ಹುಡುಕಾಟ ನಡೆಸಿದ್ದಾರೆ.



ಕಳೆದ ತಿಂಗಳು (ಜೂ. 6) ಈ ದುರ್ಘಟನೆ ನಡೆದಿತ್ತು. ನ್ಯಾಷನಲ್ ಪಾರ್ಕ್‌ಗೆ ತಮ್ಮ ಗೆಳೆಯರೊಂದಿಗೆ ಬಂದಿದ್ದ ಸಿದ್ಧಾಂತ್, ಸ್ನೇಹಿತರೊಡನೆ ಪಾರ್ಕ್‌ನಲ್ಲಿರುವ ಅವೆಲಾಂಚ್ ರಾಕ್‌ನ ಹೆಬ್ಬಂಡೆಯೊಂದನ್ನು ಏರುತ್ತಿದ್ದರು. ಆದರೆ, ಒಂದು ಹಂತಕ್ಕೆ ಏರಿದ ನಂತರ ಅವರು ಆಯತಪ್ಪಿ ಭಾರಿ ಎತ್ತರದಿಂದ ಕೆಳಕ್ಕೆ ಬಿದ್ದಿದ್ದಾರೆ. ಹೆಬ್ಬಂಡೆಯ ಅಡಿಯಲ್ಲಿರುವ ಸರೋವರಕ್ಕೆ ಹೋಗಿ ಬಿದ್ದಿದ್ದ ಅವರು ಅಲ್ಲಿಂದ ಪುನಃ ಮೇಲೆದ್ದಿಲ್ಲ. ಭಾರಿ ದೊಡ್ಡದಾದ ಆ ಸರೋವರವನ್ನೆಲ್ಲಾ ಹುಡುಕಾಡಿದರೂ ಅವರ ಮೃತದೇಹ ಇನ್ನೂ ಸಿಕ್ಕಿಲ್ಲ.

ಸರ್ಕಾರಿ ನೌಕರರ ಬೇಡಿಕೆ ಈಡೇರದಿದ್ದರೆ ಜು.29ರಿಂದ ಮುಷ್ಕರ

ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಷಡಕ್ಷರಿ ಎಚ್ಚರಿಕೆ

ಮೈಸೂರು, ಜು.13(ಜಿಎ)-ರಾಜ್ಯ ಸರ್ಕಾರಿ ನೌಕರರ ಬೇಡಿಕೆಗಳನ್ನು ಈಡೇರಿಸದಿದ್ದರೆ ಜುಲೈ 29ರಿಂದ ಕಚೇರಿ ಕೆಲಸಗಳಿಗೆ ಗೈರು ಹಾಜರಾಗಬೇಕಾಗುತ್ತದೆ. ಮುಂದಿನ ಪರಿಣಾಮ ಎದುರಿಸಲು ಸರ್ಕಾರ ಸಿದ್ಧವಾಗಲಿ ಎಂದು ರಾಜ್ಯ ಸರ್ಕಾರಿ ನೌಕರ ಸಂಘದ ಅಧ್ಯಕ್ಷ ಸಿ.ಎಸ್.ಷಡಕ್ಷರಿ ಎಚ್ಚರಿಸಿದರು.

ಮೈಸೂರಿನ ಕಲಾಮಂದಿರದಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಘಟಕದ ವತಿಯಿಂದ ಏರ್ಪಡಿಸಿದ್ದ ನೂತನ ಜನಪ್ರತಿನಿಧಿಗಳಿಗೆ ಅಭಿನಂದನೆ ಹಾಗೂ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಾರ್ಚ್ ತಿಂಗಳಲ್ಲಿ ಬೆಂಗಳೂರಿನಲ್ಲಿ ನಡೆದ ನೌಕರರ ಸಮಾವೇಶದಲ್ಲಿ ಭಾಗವಹಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 7ನೇ ವೇತನ ಆಯೋಗದ ಶಿಫಾರಸ್ಸು ಜಾರಿಯ ಭರವಸೆ ನೀಡಿದ್ದರು. ಆದರೆ, ಮೂರು ತಿಂಗಳು ಕಳೆದರೂ ಈ ಬಗ್ಗೆ ಯಾವುದೇ ಕೆಲಸವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ದೇಶದಲ್ಲಿಯೇ ಜಿಎಸ್‌ಟಿ ಸಂಗ್ರಹದಲ್ಲಿ ರಾಜ್ಯವನ್ನು 2ನೇ ಸ್ಥಾನಕ್ಕೇರಿಸಿದ ಸಾಧನೆ, ಗ್ಯಾರಂಟಿಗಳ ಅನುಷ್ಠಾನದಲ್ಲಿ ನೌಕರರ ಕೊಡುಗೆ ಅಪಾರ. ಆದರೆ, ಶೇ.27.5 ಫಿಟ್‌ಮೆಂಟ್ ಕೊಡಲಾಗುವುದಿಲ್ಲ, ಆರ್ಥಿಕ ಸೌಲಭ್ಯಗಳನ್ನು 2025ರಿಂದ ನೀಡಲಾಗುತ್ತದೆ ಎಂಬ ಮಾತುಗಳು ವಿಧಾನಸೌಧದ ಮೊಗಸಾಲೆಯಲ್ಲಿ ಕೇಳುತ್ತಿದೆ. ಇದನ್ನು ಯಾವುದೇ ಕಾರಣಕ್ಕೂ ಒಪ್ಪಲಾಗುವುದಿಲ್ಲ ಎಂದು ಹೇಳಿದರು.

ಸರ್ಕಾರಿ ನೌಕರರು ಸಂಘ ಮತ್ತು ಸರ್ಕಾರವನ್ನು ಸಾಮಾಜಿಕ ಜಾಲತಾಣಗಳಲ್ಲಿ ಟೀಕಿಸುತ್ತಿದ್ದಾರೆ. ಷಡಕ್ಷರಿ ಅವರು ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಂಡಿದ್ದಾರೆಯೇ ಎಂಬ ಮಾತುಗಳನ್ನು ಕೇಳಲು ನಾನು ಸಿದ್ಧನಿಲ್ಲ. ಈಗಾಗಲೇ ಸಾಕಷ್ಟು ಅವಕಾಶ ನೀಡಿಯಾಗಿದೆ. ಓಪಿಎಸ್ ಜಾರಿ, ಆರೋಗ್ಯ ಸಂಜೀವಿನಿ ವಿಮೆ ಜಾರಿಯಲ್ಲೂ ಮೀನಾಮೇಷ ಎಣಿಸುತ್ತಿರುವುದು ಖಂಡನೀಯ. ಎಲ್ಲರೂ ಒಗ್ಗಟ್ಟಾಗಿ ಸರ್ಕಾರವನ್ನು ಟೀಕಿಸದೇ, ಮೌನವಾಗಿ ಗೈರು ಹಾಜರಾಗಿ ಪ್ರತಿಭಟಿಸಿ ಎಂದು ಕರೆ ನೀಡಿದರು.

ಸರ್ಕಾರಿ ನೌಕರರ ಮಕ್ಕಳು ಉತ್ತಮ ಫಲಿತಾಂಶ ಪಡೆದವರಿಗೆ ಪುರಸ್ಕರಿಸಲಾಗುತ್ತಿದೆ. ರಾಜ್ಯದಲ್ಲಿ 9 ಸಾವಿರ ಮಕ್ಕಳಿಗೆ ಸಂಘದಿಂದ ಪ್ರತಿಭಾ ಪುರಸ್ಕಾರ ನೀಡಲಾಗುತ್ತಿದೆ. ಇಂದು ಪ್ರತಿ ಅಂಕಕ್ಕೂ ಸ್ಪರ್ಧೆ ಏರ್ಪಡುತ್ತಿದೆ. ಭವಿಷ್ಯದಲ್ಲಿ ಉತ್ತಮ ಸ್ಥಾನ ಹೊಂದಲು ಎಸ್‌ಎಸ್‌ಎಲ್‌ಸಿ ಮತ್ತು ಪಿಯು ಉತ್ತಮ ಘಟ್ಟವಾಗಿದ್ದು, ನಿರಂತರ ಪ್ರಯತ್ನದಿಂದ ಯಶಸ್ಸನ್ನು ಸಾಧಿಸಬೇಕು. ವಿದ್ಯಾರ್ಥಿಗಳು ತಮಗೆ ಶಿಕ್ಷಣ, ಉತ್ತಮ ಜೀವನ ಕಲ್ಪಿಸಿದ ತಂದೆ ತಾಯಿಯನ್ನು ಗೌರವಿಸುವ, ಪ್ರೀತಿಸುವ ಸಂಸ್ಕಾರವನ್ನು ಹೊಂದಬೇಕು. ದೇಶವನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ಯಲು ಯುವಶಕ್ತಿಯ ಪ್ರಯತ್ನ ಅಗತ್ಯ. ಓದಿನೊಂದಿಗೆ ಸುಭದ್ರ ಸಮಾಜ ಕಟ್ಟಲು ಪ್ರಯತ್ನಿಸಬೇಕು ಎಂದು ಸಲಹೆ ನೀಡಿದರು.

ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಮೈಸೂರು-ಕೊಡಗು ಜನರ ಅಭಿಮಾನ ಮತ್ತು ಮೈಸೂರಿನ ಪ್ರಾಚೀನ ಸಂಸ್ಕೃತಿ ಮತ್ತು ಪ್ರಗತಿಪರತೆಯನ್ನು ಉಳಿಸಿಕೊಂಡು ಹೋಗುವುದು ಪ್ರಮುಖ ಆದ್ಯತೆಯಾಗಿದೆ. ಜನರ ಜೀವನವನ್ನು ಸಮೃದ್ಧಗೊಳಿಸುವುದು ಮುಂದಿನ ಮುಖ್ಯ ಕೆಲಸವಾಗಿದೆ. 2047ರಲ್ಲಿ ವಿಕಸಿತ ಭಾರತದ ನಿರ್ಮಾಣ ಮಾಡಬೇಕು ಎಂಬ ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿಯನ್ನು ನಾವು ಬೆಂಬಲಿಸಬೇಕು. ಕ್ಷೇತ್ರವೂ ಈ ನಿಟ್ಟಿನಲ್ಲಿ ಮುನ್ನಡೆ ಸಾಧಿಸಲು ನಮ್ಮ ಕೈಲಾದ ಸಹಕಾರ ಮಾಡುತ್ತೇನೆ. ಸರ್ಕಾರಿ ನೌಕರರ ಅಗತ್ಯ ಬೇಡಿಕೆಯನ್ನು ಪರಿಶೀಲಿಸಿ ಬೆಂಬಲ ನೀಡಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಭಾಗವಹಿಸಿ ವಿದ್ಯಾರ್ಥಿಗಳಿಗೆ ವೈಯಕ್ತಿಕವಾಗಿ 1 ಲಕ್ಷ ರೂ. ದೇಣಿಗೆ ನೀಡಿದರು. 350 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು. ಈ ವೇಳೆ ಜಿಲ್ಲಾಧ್ಯಕ್ಷ ಗೋವಿಂದರಾಜು, ರುದ್ರಪ್ಪ, ಸಿದ್ದರಾಮಣ್ಣ, ಮಲ್ಲಿಕಾರ್ಜುನ್, ಶ್ರೀನಿವಾಸ್, ರೇವಣ್ಣ, ರಮೇಶ್‌ಕುಮಾರ್, ಎಸ್.ಜೆ.ರಮೇಶ್, ಮಾಲಂಗಿ ಸುರೇಶ್ ಸೇರಿದಂತೆ ತಾಲೂಕಿನ ಅಧ್ಯಕ್ಷರು ಪಾಲ್ಗೊಂಡಿದ್ದರು.



ಮೈಸೂರಿನ ಕಲಾಮಂದಿರದಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಘಟಕದ ವತಿಯಿಂದ ಶನಿವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಅವರನ್ನು ಅಭಿನಂದಿಸಲಾಯಿತು.

ಹಿನಕಲ್ ಹೆಚ್.ವಿ.ಬಸವರಾಜು ಮತಯಾಚನೆ



ಜು.21ರಂದು ನಡೆಯಲಿರುವ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಮೈಸೂರು ಜಿಲ್ಲಾ ಘಟಕದ ಚುನಾವಣೆ ಹಿನ್ನೆಲೆಯಲ್ಲಿ ಕೆ.ಆರ್.ನಗರದ ಚಂದಗಾಲು ಗ್ರಾಮದಲ್ಲಿ ಹಿನಕಲ್ ಹೆಚ್.ವಿ.ಬಸವರಾಜು ಮತಯಾಚನೆ ಮಾಡಿದರು. ಈ ವೇಳೆ ಮುಳ್ಳೂರು ಎಂ.ಎಸ್.ರೇಚಣ್ಣ, ವಕೀಲ ಮೂಡಹಳ್ಳಿ ವಿ.ಶೇಖರ್, ಧರ್ಮ ಮಂಜುನಾಥ್, ಡಾ.ಮಹದೇವಪ್ಪ, ಟಿ.ಲಿಂಗರಾಜು ಹಡಜನ, ದೂರ ಶಿವಕುಮಾರ್, ಕೆ.ನಾಗರಾಜು. ಕೆ.ಎಸ್.ಮಾದಪ್ಪ, ದಾರಿಪುರ ಡಿ.ಚಂದ್ರಶೇಖರ್, ಕೇರ್ಗಳ್ಳಿ ಬಸವರಾಜು, ಎಂ.ಷಡಕ್ಷರಿ, ರಾಜೇಶ್ವರಿ, ಮಹೇಶ್, ಮನೋಹರಿ, ಎಂ.ದಾಕ್ಷಾಯಿಣಿ, ಸರ್ವಮಂಗಳ ಹೆಚ್.ಎನ್, ರೂಪ ಸತೀಶ್, ಕಾವಿಬಸಪ್ಪ, ನಾಗರಾಜು, ಡಿ.ಮಹೇಶ್ ಪುಟ್ಟೇಗೌಡನಹುಂಡಿ, ಕಂಡಕ್ಟರ್ ಬಸವರಾಜು, ಸುಂದರಸ್ವಾಮಿ ಹೊಸಕೋಟೆ, ಮುಖಂಡರಾದ ಶಿವಪ್ರಕಾಶ್, ರವಿ ಲಾಳನಹಳ್ಳಿ, ಕೌಶಲ್ಯ ಶಿವಪ್ರಕಾಶ್, ಸಿ.ಪಿ.ಎಸ್.ಲೋಕೇಶ್, ಆನಂದ್, ಸಿ.ಕೆ.ಚೆನ್ನವೀರಪ್ಪ, ಕುಮಾರಸ್ವಾಮಿ, ರಾಜಶೇಖರ್, ಪ್ರಕಾಶ್, ಚಂದ್ರಪ್ಪ, ಆನಂದ್, ನವೀನ್ ಇನ್ನಿತರರಿದ್ದರು.

ಕಾರ್ಮಿಕ ಮಕ್ಕಳ ಶಿಕ್ಷಣಕ್ಕಾಗಿ ಆರ್ಥಿಕ ನೆರವು ನೀಡಲು ಅರ್ಹರಿಂದ ಅರ್ಜಿ ಆಹ್ವಾನ

ಮೈಸೂರು, ಜು.13-2024-25ನೇ ಸಾಲಿನಲ್ಲಿ ಬೀಡಿ/ಸುಣ್ಣದ ಕಲ್ಲು/ ಡೋಲೋಮೈಟ್/ಗಣಿ/ಕಬ್ಬಿಣ, ಕ್ರೋಮ್, ಮ್ಯಾಂಗನೀಸ್ ಅದಿರು ಗಣಿ, ಸಿನಿ ಕಾರ್ಮಿಕರ ಮಕ್ಕಳಿಗೆ ಶಿಕ್ಷಣಕ್ಕಾಗಿ ಆರ್ಥಿಕ ನೆರವು ನೀಡಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಮಾಹಿತಿಗೆ 2451740, 0821-2451421 ಸಂಪರ್ಕಿಸಿ.

ಡಾ.ಬಾಬೂಜಿ ಸಂಶೋಧನಾ ಕೇಂದ್ರ ಉದ್ಘಾಟನೆ



ಬೆಂಗಳೂರಲ್ಲಿ ಶನಿವಾರ ನಡೆದ ಡಾ.ಬಾಬು ಜಗಜೀವನ್ ರಾಮ್ ಸಂಶೋಧನೆ ಕೇಂದ್ರ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದ ಕಾಂಗ್ರೆಸ್ ನಾಯಕಿ ಶ್ರೀಮತಿ ಮೀರಾ ಕುಮಾರ್ ಮತ್ತು ಅವರ ಪುತ್ರ ಅನ್ಸುಲ್ ಅವಿಜಿತ್ ಅವರನ್ನು ಗೃಹ ಸಚಿವ ಡಾ. ಪರಮೇಶ್ವರ್, ದಿವಂಗತ ವಿಧಾನಪರಿಷತ್ ಮಾಜಿ ಸದಸ್ಯ ಟಿ.ಎನ್. ಮಂಜುನಾಥ್ ಅವರ ಪುತ್ರ ಪ್ರಫುಲ್‌ಕುಮಾರ್ ಇತರರು ಅಭಿನಂದಿಸಿದರು.

ಆರ್‌ಓ ಯುನಿಟ್‌ಗಳ ಸರ್ವೀಸಿಂಗ್ ಹೆಸರಿನಲ್ಲಿ ಸಾರ್ವಜನಿಕರಿಗೆ ವಂಚನೆ

ಬೆಂಗಳೂರು,ಜು.13-ನಗರದಲ್ಲಿ ಡೆಂಗ್ಯೂ ಪ್ರಕರಣಗಳು ಹೆಚ್ಚುತ್ತಿದ್ದು, ಸಾರ್ವಜನಿಕರು, ಶುದ್ಧ ನೀರು ಇರುವುದನ್ನು ಖಾತ್ರಿಪಡಿಸಿಕೊಳ್ಳಲು ತಮ್ಮ ಬಳಿ ಇರುವ ಆರ್‌ಓ ಘಟಕಗಳ ಸರ್ವೀಸ್ ಮಾಡಿಸುತ್ತಿದ್ದಾರೆ. ಈಗ ಸೈಬರ್ ವಂಚಕರು ಇದನ್ನೇ ಬಂಡವಾಳವನ್ನಾಗಿ ಮಾಡಿಕೊಂಡು ಜನತೆಗೆ ವಂಚನೆ ಮಾಡಲು ಮುಂದಾಗುತ್ತಿದ್ದಾರೆ.

ಆರ್‌ಓ ಸರ್ವೀಸ್ ಒದಗಿಸುವ ಸೋಗಿನಲ್ಲಿ ವಂಚಕರು ಹಣ ಲಪಟಾಯಿಸುತ್ತಿದ್ದು, ಹಲವಾರು ದೂರುಗಳು ಬಂದ ಬಳಿಕ ಪೊಲೀಸ್ ಅಧಿಕಾರಿಗಳು ಎಚ್ಚೆತ್ತುಕೊಂಡಿದ್ದಾರೆ. ಆರ್‌ಓ ಯುನಿಟ್‌ಗಳ ಸರ್ವೀಸಿಂಗ್ ಹೆಸರಿನಲ್ಲಿ ನಡೆಯುತ್ತಿರುವ ವಂಚನೆಯನ್ನು ಆನ್‌ಲೈನ್ ವಂಚನೆಯ ಹೊಸ ವಿಧ ಎಂದು ಹೇಳಿರುವ ಪೊಲೀಸ್ ಅಧಿಕಾರಿಗಳು ಸಾರ್ವಜನಿಕರನ್ನು, ಈ ಬಗ್ಗೆ ಎಚ್ಚರಿಸಿದ್ದು, ಮುಂಗಡವಾಗಿ ಯಾವುದೇ ಆನ್‌ಲೈನ್ ಪಾವತಿಗಳನ್ನು ಮಾಡದಂತೆ ಸಲಹೆ ನೀಡಿದ್ದಾರೆ. ನಗರದ ವಿವಿಧ ಭಾಗಗಳಿಂದ ಇಂತಹ ಸುಮಾರು 100 ದೂರುಗಳು ಬಂದಿವೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕರೆ ಮಾಡಿದವರು ಸಾಮಾನ್ಯವಾಗಿ ನೀರು ಶುದ್ಧೀಕರಣಕ್ಕೆ ಸರ್ವಿಸಿಂಗ್ ಅಥವಾ ಭಾಗ ಬದಲಿ ಅಗತ್ಯವಿದೆ ಎಂದು ಹೇಳಿಕೊಳ್ಳುತ್ತಾರೆ, ಇದರಿಂದ ತುರ್ತಾಗಿ ಸರ್ವೀಸ್ ಮಾಡಿಸಬೇಕೆಂದು ಹೇಳುತ್ತಾರೆ. ಹೆಚ್ಚಿನ ಬ್ರಾಂಡ್ ಕಂಪನಿಗಳು ಪ್ರತಿ ಆರು ತಿಂಗಳಿಗೊಮ್ಮೆ ಸರ್ವಿಸಿಂಗ್ ಬಗ್ಗೆ ನಿಯಮಿತವಾಗಿ ಕರೆ ಮಾಡುವುದರಿಂದ ಜನರು ಸುಲಭವಾಗಿ ವಂಚನೆಗೆ ಬಲಿಯಾಗುತ್ತಿದ್ದಾರೆ, ಅವುಗಳನ್ನು ನಿಜವಾದ ಕರೆಗಳು ಎಂದು ತಪ್ಪಾಗಿ ಗ್ರಹಿಸುತ್ತಾರೆ ಎಂದು ಅವರು ಹೇಳಿದ್ದಾರೆ.

ಪವರ್ ಲಿಫ್ಟಿಂಗ್‌ನಲ್ಲಿ ಪ್ರಥಮ ಬಹುಮಾನ ಗೆದ್ದ ಚೇತನ್



ಬೆಂಗಳೂರಿನ ನ್ಯೂ ಹೊರೈಜನ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ ವಿಟಿಯು ರಾಜ್ಯ ಮಟ್ಟದ ಅಂತರ ಕಾಲೇಜು ಪವರ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ಮೈಸೂರಿನ ವಿದ್ಯಾ ವಿಕಾಸ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿಯ ಚೇತನ್ ಒಟ್ಟು 460 ಕೆಜಿ ಭಾರ ಎತ್ತುವ ಮೂಲಕ 93 ಕೆಜಿ ವಿಭಾಗದಲ್ಲಿ ಪ್ರಥಮ ಬಹುಮಾನ ಪಡೆದರು. ವಿಜೇತ ಚೇತನ್‌ರೊಂದಿಗೆ ಡಾ.ಬಿಂದು ಎ. ಥಾಮಸ್, ಡಾ.ಚಿದನ್‌ಕುಮಾರ್, ರಿಜಿಸ್ಟ್ರಾರ್ ಡಾ.ಸುಮಾ, ಪ್ರೊ.ಆದರ್ಶ, ಕ್ರೀಡಾ ಸಂಯೋಜಕಿ ದಿವ್ಯಾ ಉಪಸ್ಥಿತರಿದ್ದರು.

ಮೈಸೂರು ವಿವಿ ವ್ಯಾಪ್ತಿಯ ಪಾರಂಪರಿಕ ಕಟ್ಟಡಗಳ ಸ್ಥಿತಿಗತಿ ಪರಿಶೀಲನೆ

ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಸಂರಕ್ಷಣೆ ಬಹುಮುಖ್ಯ

ವಿಶೇಷ ಹೆರಿಟೇಜ್ ವಾಕ್ ವೇಳೆ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಪುನರುಚ್ಚಾರ

ಮೈಸೂರು,ಜು.13(ಪಿಎಂ)- ಮೈಸೂರು ನಗರದ ಪಾರಂಪರಿಕ ಕಟ್ಟಡಗಳಾದ ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಅನ್ನು ನೆಲಸಮಗೊಳಿಸದೇ ಸಂರಕ್ಷಿಸಬೇಕೆಂಬ ತಮ್ಮ ನಿಲುವನ್ನು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಪುನರುಚ್ಚರಿಸಿದ್ದಾರೆ. ಆ ಮೂಲಕ ಈ ಎರಡು ಪಾರಂಪರಿಕ ಕಟ್ಟಡಗಳ ನೆಲಸಮಕ್ಕೆ ಶಿಫಾರಸ್ಸು ಮಾಡಿದ ತಜ್ಞರ ಸಮಿತಿಯ ವರದಿಗೆ ಆಕ್ಷೇಪ ವ್ಯಕ್ತಪಡಿಸಿದರು.

ವಿಶೇಷ ಹೆರಿಟೇಜ್ ವಾಕ್ ಕಾರ್ಯಕ್ರಮದಡಿ ಶನಿವಾರ ಮೈಸೂರು ವಿವಿ ವ್ಯಾಪ್ತಿಯ ಪಾರಂಪರಿಕ ಕಟ್ಟಡಗಳಿಗೆ ಭೇಟಿ ನೀಡಿ ಅವುಗಳ ಸ್ಥಿತಿಗತಿ ಪರಿಶೀಲಿಸಿದ ಅವರು ಬಳಿಕ ಮಾನಸ ಗಂಗೋತ್ರಿಯಲ್ಲಿರುವ ಜಯಲಕ್ಷ್ಮಿ ವಿಲಾಸ ಅರಮನೆ ಆವರಣದಲ್ಲಿ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದರು. ಪಾರಂಪರಿಕ ಕಟ್ಟಡಗಳ ಸಂರಕ್ಷಣೆ ವಿಚಾರದಲ್ಲಿ ಈ ಎರಡು ಕಟ್ಟಡಗಳನ್ನು ಸಂರಕ್ಷಿಸುವುದು ಬಹುಮುಖ್ಯವಾಗಿದೆ. ಈ ಕಟ್ಟಡಗಳನ್ನು ಸಂರಕ್ಷಣೆ ಮಾಡುವಲ್ಲಿ ಬದ್ಧತೆ ಹೊಂದಿದ್ದೇನೆ. ಸಂರಕ್ಷಣೆ ಸಾಧ್ಯವೂ ಇದೆ ಎಂದರು.

ದೇವರಾಜ ಮಾರುಕಟ್ಟೆ ವಿಚಾರ ಸುಪ್ರಿಂ ಕೋರ್ಟ್‌ನಲ್ಲಿದೆ. ಈ ಎರಡು ಕಟ್ಟಡಗಳ ಸಮೀಕ್ಷೆಗೆ ಸಂಬಂಧಿಸಿದಂತೆ ಈ ಹಿಂದಿನ ಜಿಲ್ಲಾಧಿಕಾರಿಗಳು ರಚಿಸಿದ್ದ ಸಮಿತಿಯಲ್ಲಿ ಪ್ರೊರಂಗರಾಜು ಹಾಗೂ ಇನ್ನಿಬ್ಬರು ಸದಸ್ಯರ ಹೊರತಾಗಿ ಪಾರಂಪರಿಕ ಕಟ್ಟಡಗಳ ಜ್ಞಾನವುಳ್ಳ ಅರ್ಹ ಸದಸ್ಯರು ಇರಲಿಲ್ಲ. ಹಾಗಾಗಿಯೇ ಸದರಿ ಸಮಿತಿ ನೀಡಿದ ಶಿಫಾರಸ್ಸು ಪ್ರಶ್ನಾರ್ಹ ಎಂದು ತಿಳಿಸಿದರು.

ಈ ಎರಡು ಕಟ್ಟಡಗಳನ್ನು ನೆಲಸಮ ಮಾಡಬೇಕೆಂದು ಕೆಲ ರಾಜಕಾರಣಿಗಳೇ ಹೇಳುತ್ತಿದ್ದಾರೆ ಎಂಬುದಕ್ಕೆ ಪ್ರತಿಕ್ರಿಯಿಸಿ, ನಾನು ಒಬ್ಬ ರಾಜಕಾರಣಿ ಆಗಿರುವ ಕಾರಣದಿಂದ ಅಧಿಕೃತವಾಗಿಯೇ ಹೇಳುತ್ತಿದ್ದು, ಅವುಗಳನ್ನು ಸಂರಕ್ಷಣೆ ಮಾಡಲು ಸಾಧ್ಯವಿದ್ದು, ಸಂರಕ್ಷಣೆ ಮಾಡಲಿದ್ದೇವೆ ಎಂದರು.

ಇಂದು ಮೈಸೂರು ವಿವಿ ವ್ಯಾಪ್ತಿಯ ಪಾರಂಪರಿಕ ಕಟ್ಟಡಗಳನ್ನು ಪರಿಶೀಲನೆ ಮಾಡಿದ್ದೇನೆ. ಅವುಗಳ ಸ್ಥಿತಿಗತಿ ಪರಿಶೀಲಿಸಿ ಮಾಹಿತಿ ಸಂಗ್ರಹಿಸಿದ್ದೇನೆ. ಮುಂದೆ ಯಾವ ರೀತಿ ಸಂರಕ್ಷಣಾ ಕ್ರಮ ವಹಿಸಬಹುದೆಂದು ಅವಲೋಕಿಸಲಾಗುವುದು. ಜಯಲಕ್ಷ್ಮೀ ವಿಲಾಸ ಅರಮನೆಯನ್ನು ಡೆಕ್ಕನ್ ಹೆರಿಟೇಜ್ ಫೌಂಡೇಷನ್ ವತಿಯಿಂದ ಸಂರಕ್ಷಣೆ ಮಾಡಲಾಗುತ್ತಿದೆ. ಎಲ್ಲವನ್ನೂ ಪಾರಂಪರಿಕ ನಿಯಮದ ಪ್ರಕಾರ ಮಾಡುತ್ತಿದ್ದು, ಇದು ನಾಲ್ಕು ವರ್ಷಗಳ ಸಂರಕ್ಷಣಾ ಯೋಜನೆಯಾಗಿದೆ. ಎಲ್ಲವೂ ಅದ್ಭುತವಾಗಿ ಪುನರ್ ಸ್ಥಾಪನೆಯಾಗುವ ಭರವಸೆ ಇದೆ. ನಂತರ ಇದು ಮೈಸೂರಿಗೆ ದೊಡ್ಡ ಮ್ಯೂಸಿಯಂ ಆಗಿ ಹೊರಹೊಮ್ಮುವ ವಿಶ್ವಾಸವಿದೆ ಎಂದು ಹೇಳಿದರು.

ವಿವಿ ವ್ಯಾಪ್ತಿಯಲ್ಲಿ ಎಷ್ಟು ಪಾರಂಪರಿಕ ಕಟ್ಟಡಗಳಿವೆ? ಹಾಗೂ ಅವುಗಳ ಸ್ಥಿತಿಗತಿ ಹೇಗಿದೆ? ಎಂಬುದಕ್ಕೆ ಪ್ರತಿಕ್ರಿಯಿಸಿ, ಸುಮಾರು 25 ಕಟ್ಟಡಗಳಿದ್ದು, ಕೆಲವು ಸುಸ್ಥಿತಿಯಲ್ಲಿದ್ದರೆ, ಕೆಲವು ಸ್ವಲ್ಪ ಮಟ್ಟಿಗೆ ಶಿಥಿಲವಾಗಿವೆ. ಹಾಗಾಗಿ ಪರಿಶೀಲನೆ ಮಾಡುವ ಉದ್ದೇಶದಿಂದ ಇಂದು ಮಹಾರಾಜ ಕಾಲೇಜು, ಓಆರ್‌ಐ, ಕ್ರಾಫರ್ಡ್ ಹಾಲ್, ಜಯಲಕ್ಷ್ಮೀ ವಿಲಾಸ ಅರಮನೆ ಹಾಗೂ ಸರ್ವಪಲ್ಲಿ ರಾಧಾಕೃಷ್ಣ ನಿವಾಸಕ್ಕೆ ಭೇಟಿ ನೀಡಿದ್ದೇವೆ. ಪಾರಂಪರಿಕ ಕಟ್ಟಡಗಳು ನಮ್ಮ ಮೈಸೂರಿನ ಪರಂಪರೆಯ ಪ್ರತೀಕವಾಗಿವೆ. ಅವುಗಳ ಸಂರಕ್ಷಣೆ ನಮ್ಮ ಕರ್ತವ್ಯ. ಈ ನಿಟ್ಟಿನಲ್ಲಿ ನಾನು ಕೆಲಸ ಮಾಡಲು ಬದ್ಧವಾಗಿದ್ದೇನೆ ಎಂದು ತಿಳಿಸಿದರು.

ಉತ್ತಮ ನೀತಿ ಅಗತ್ಯ: ಮೈಸೂರಿನಲ್ಲಿ ಸುಮಾರು 130ಕ್ಕೂ ಅಧಿಕ ಕಟ್ಟಡಗಳನ್ನು ಪಾರಂಪರಿಕ ನಿರ್ಮಾಣವೆಂದು ಪರಿಗಣಿಸಲಾಗಿದೆ. ಜೊತೆಗೆ ಪರಿಗಣಿಸದ ನೂರಾರು ಕಟ್ಟಡಗಳೂ ಇವೆ. ಸಂಸದರಾಗಿ ಅವುಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು? ಎಂಬುದಕ್ಕೆ ಪ್ರತಿಕ್ರಿಯಿಸಿ, ಸರ್ಕಾರದ ಅಧೀನದಲ್ಲಿರುವ ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಿಸಿ ಆಧುನಿಕ ಕಾಲಕ್ಕೂ ಬಳಸಿಕೊಳ್ಳಬೇಕು. ಖಾಸಗಿಯವರ ಒಡೆತನದಲ್ಲಿರುವ ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಣೆ ಮಾಡುವಂತೆ ಅವರಿಗೆ ಪ್ರೇರೇಪಿಸಬೇಕಾಗುತ್ತದೆ. ಒಟ್ಟಾರೆ ಎಲ್ಲಾ ರೀತಿಯ ಪಾರಂಪರಿಕ ಕಟ್ಟಡಗಳ ಸಂರಕ್ಷಣಾ ಕಾರ್ಯವು ದೊಡ್ಡ ಮಟ್ಟದ ಯೋಜನೆಯಾಗಿದೆ. ಹಾಗಾಗಿ ಉತ್ತಮ ನೀತಿ ರೂಪಿಸುವ ಅಗತ್ಯವಿದ್ದು, ಈ ನಿಟ್ಟಿನಲ್ಲಿ ಸಂಬಂಧಿಸಿದ ಅಧಿಕಾರಿಗಳು ಹಾಗೂ ಪ್ರತಿನಿಧಿಗಳೊಂದಿಗೆ ಚರ್ಚೆ ನಡೆಸಿ ಮುಂದುವರೆಯುತ್ತೇನೆ ಎಂದು ತಿಳಿಸಿದರು.

ಹೃದಯ್ ಯೋಜನೆ ಬಗ್ಗೆ ಪರಿಶೀಲನೆ: ಪಾರಂಪರಿಕ ಕಟ್ಟಡಗಳ ಸಂರಕ್ಷಣೆಯನ್ನು ಸಿಎಸ್‌ಆರ್ ನಿಧಿಯಡಿ ಸಹ ಮಾಡಬಹುದು. ಸರ್ಕಾರದ ಅನುದಾನ ಸಹ ಬಳಸಬಹುದು. ಎಲ್ಲಾ ರೀತಿಯ ಆಯ್ಕೆಯನ್ನು ಪರಿಶೀಲಿಸಲಾಗುವುದು. ಕೇಂದ್ರದಲ್ಲಿ ಹೃದಯ್ ಯೋಜನೆ ಇದ್ದು, ಈ ಯೋಜನೆಯಡಿಯೂ ಅನುದಾನ ತರಲು ಅವಕಾಶವಿದೆ. ಮೊದಲನೇ ಹಂತದಲ್ಲಿ ಕಟ್ಟಡಗಳ ಪರಿಶೀಲನೆ ಮಾಡುತ್ತಿದ್ದೇನೆ. ಹೃದಯ್ ಯೋಜನೆ ಅನುದಾನ ಪಡೆಯುವ ಬಗ್ಗೆ ಪರಿಶೀಲಿಸಿ ಮುಂದುವರೆಯುತ್ತೇನೆ ಎಂದು ಯದುವೀರ್ ಹೇಳಿದರು. ಜಿಲ್ಲಾ ಪಾರಂಪರಿಕ ಸಂರಕ್ಷಣಾ ಸಮಿತಿ ಸದಸ್ಯ ಪ್ರೊ.ಎನ್.ಎಸ್.ರಂಗರಾಜು, ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಕುಲಸಚಿವೆ ವಿ.ಆರ್.ಶೈಲಜಾ ಮತ್ತಿತರರು ಹಾಜರಿದ್ದರು.



ಮೈಸೂರು ವಿವಿ ವ್ಯಾಪ್ತಿಯ ಪಾರಂಪರಿಕ ಕಟ್ಟಡಗಳ ಸ್ಥಿತಿಗತಿ ಪರಿಶೀಲನೆಗಾಗಿ ಸಂಸದ ಯದುವೀರ ಒಡೆಯರ್ ನೇತೃತ್ವದಲ್ಲಿ ಶನಿವಾರ ವಿಶೇಷ ಹೆರಿಟೇಜ್ ವಾಕ್ ನಡೆಯಿತು

ನೆಲಸಮಕ್ಕೆ ಅವಕಾಶವಿಲ್ಲ

ಪ್ರೊ.ಎನ್.ಎಸ್.ರಂಗರಾಜು ಪ್ರತಿಪಾದನೆ

ಮೈಸೂರು,ಜು.13(ಪಿಎಂ)-'ಎ' ಗ್ರೇಡ್ ನಿರ್ಮಾಣಗಳನ್ನು ನೆಲಸಮ ಮಾಡುವಂತಿಲ್ಲವೆಂದು ಪಾರಂಪರಿಕ ನಿಯಮಗಳಲ್ಲಿ ದಾಖಲು ಮಾಡಲಾಗಿದೆ. ಆ ಪ್ರಕಾರ ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಮತ್ತು ದೇವರಾಜ ಮಾರುಕಟ್ಟೆ ಕಟ್ಟಡಗಳು 'ಎ' ಗ್ರೇಡ್ ನಿರ್ಮಾಣವಾಗಿರುವ ಕಾರಣ ಅವುಗಳನ್ನು ನೆಲಸಮ ಮಾಡಲು ಅವಕಾಶವಿಲ್ಲ ಎಂದು ಜಿಲ್ಲಾ ಪಾರಂಪರಿಕ ಸಂರಕ್ಷಣಾ ಸಮಿತಿ ಸದಸ್ಯ ಪ್ರೊ.ಎನ್.ಎಸ್.ರಂಗರಾಜು ಹೇಳಿದರು.

ಮುಖ್ಯಮಂತ್ರಿಗಳಿಗೆ ಅಪಾಯದ ಅಂಚಿನಲ್ಲಿರುವ ಮೈಸೂರಿನ ಪಾರಂಪರಿಕ ಕಟ್ಟಡಗಳ ಪಟ್ಟಿಯನ್ನು ಸಲ್ಲಿಸಲಾಗಿದೆ. ಜೊತೆಗೆ ಮತ್ತೊಂದು ಪಟ್ಟಿಯನ್ನು ಸಿದ್ಧಪಡಿಸಿದ್ದು, ಅದನ್ನು ಸಲ್ಲಿಸಬೇಕಿದೆ. ಶೀಘ್ರದಲ್ಲಿ ಸಂರಕ್ಷಣೆ ಆಗಬೇಕಿರುವ ಕಟ್ಟಡಗಳ ಪಟ್ಟಿಯನ್ನು ಮುಖ್ಯಮಂತ್ರಿಗಳಿಗೆ ಸಲ್ಲಿಸಲಾಗಿದೆ. ಮೈಸೂರಿನಲ್ಲಿ ಶೀಘ್ರದಲ್ಲಿ ಸಂರಕ್ಷಣೆ ಮಾಡಬೇಕಿರುವ 12 ಕಟ್ಟಡಗಳಿವೆ. ಈ ಪೈಕಿ ಶಿಕ್ಷಕರ ತರಬೇತಿ ಸಂಸ್ಥೆ (ವಂಸತ್ ಮಹಲ್) ತುಂಬ ದುಸ್ಥಿತಿಯಲ್ಲಿದೆ. ಜೊತೆಗೆ ಸಿಎಫ್‌ಟಿಆರ್‌ಐನಲ್ಲಿ ಕೆಲ ದುರಸ್ತಿ ಕೆಲಸ ಆಗಬೇಕಿದೆ ಎಂದು ತಿಳಿಸಿದರು.

ಮೈಸೂರು ಮಿತ್ರ ಭಾನುವಾರ 14 ಜುಲೈ 2024

ಕಕ್ಕೆಹೊಳೆಯ ನೂತನ ಸೇತುವೆ ಉದ್ಘಾಟನೆ



ಕಕ್ಕೆಹೊಳೆ ಸೇತುವೆಯನ್ನು ಶಾಸಕ ಡಾ.ಮಂತರ್‌ಗೌಡ ಉದ್ಘಾಟಿಸಿದರು.

ಮಡಿಕೇರಿ,ಜು.13– ಸೋಮವಾರಪೇಟೆ ಪಟ್ಟಣದ ಪ್ರವೇಶ ದ್ವಾರದಲ್ಲಿ ಕಕ್ಕೆಹೊಳೆಗೆ ಸುಮಾರು 1.65 ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸಲಾಗಿರುವ ನೂತನ ಸೇತುವೆಯನ್ನು ಮಡಿಕೇರಿ ಕ್ಷೇತ್ರದ ಶಾಸಕ ಡಾ.ಮಂತರ್‌ಗೌಡ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ರಾಜ್ಯ ಸರ್ಕಾರ ಆಡಳಿತಕ್ಕೆ ಬಂದ ನಂತರ ಐದು ಗ್ಯಾರಂಟಿಗಳೊಂದಿಗೆ, ಅಭಿವೃದ್ಧಿ ಕಾಮಗಾರಿಗಳಿಗೂ ಹೆಚ್ಚಿನ ಅನುದಾನ ನೀಡಿದ್ದಾರೆ ಎಂದು ಅಭಿಪ್ರಾಯಿಸಿದರು.

ಅತೀ ಹೆಚ್ಚು ವಿದ್ಯಾರ್ಥಿಗಳು ಕಾಲ್ನಡಿಗೆಯಲ್ಲಿ ಶಿಥಿಲಗೊಂಡಿದ್ದ ಕಕ್ಕೆಹೊಳೆ ಸೇತುವೆಯಲ್ಲಿ ತೆರಳುತ್ತಿದ್ದರು. ನೂತನ ಸೇತುವೆ ನಿರ್ಮಾಣಕ್ಕೆ ಅನುದಾನ ಕೋರಿದ ಸಂದರ್ಭ ಲೋಕೋಪಯೋಗಿ ಸಚಿವ ಸತೀಶ್ ಜಾರಕೀಹೊಳಿ ಅನುದಾನ ಕಲ್ಪಿಸಿದರು.

ಅನುದಾನ ನೀಡಿದ 8 ತಿಂಗಳಲ್ಲೇ ಸೇತುವೆ ಕಾಮಗಾರಿ ಮುಗಿದಿದೆ. ವಿದ್ಯಾರ್ಥಿಗಳಿಗೆ ನಡೆದಾಡಲು ಫುಟ್‌ಪಾತ್ ನಿರ್ಮಿಸಲಾಗಿದೆ. ಇನ್ನು ಮುಂದೆ ನೆಮ್ಮದಿಯಿಂದ ಸಂಚರಿಸಬಹುದು ಎಂದು ಹೇಳಿದರು. ನನ್ನ ಅವಧಿಯಲ್ಲಿ ಹೆಚ್ಚಿನ ಅಭಿವೃದ್ಧಿ ಕಾಮಗಾರಿಗಳು ನಡೆದಿವೆ. ಐಗೂರು ಸೇತುವೆ ನಿರ್ಮಾಣಕ್ಕೂ ಅನುದಾನ ಸಿಕ್ಕಿದೆ. ಕಲ್ಲಂದೂರು, ಕೂತಿ ರಸ್ತೆ 20 ಕೋಟಿ ರೂ.ಗಳ ವೆಚ್ಚದಲ್ಲಿ ಡಾಂಬರೀಕರಣಗೊಳ್ಳಲಿದೆ ಎಂದರು.

ಕಕ್ಕೆಹೊಳೆ ಸೇತುವೆ ಸನಿಹದಲ್ಲೇ ಬಸವೇಶ್ವರರ ಪ್ರತಿಮೆಯಿದ್ದು, ನೂತನ ಸೇತುವೆಗೂ ಬಸವೇಶ್ವರರ ಹೆಸರು ಇಡಬೇಕು ಎಂದು ಕಿರಿಕೊಡ್ಲಿ ಮಠದ ಸದಾಶಿವ ಸ್ವಾಮೀಜಿ ಇದೇ ಸಂದರ್ಭ ಶಾಸಕರಲ್ಲಿ ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಸೇತುವೆ ಗುತ್ತಿಗೆದಾರ ಆರ್.ಸಿ.ಗಣೇಶ್ ಅವರನ್ನು ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ಮನೆಹಳ್ಳಿ ಮಠದ ಮಹಾಂತ ಶಿವಲಿಂಗಸ್ವಾಮೀಜಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಧ್ಯಕ್ಷ ಬಿ.ಬಿ.ಸತೀಶ್, ಕೆಪಿಸಿಸಿ ಸದಸ್ಯ ಕೆ.ಎ.ಯಾಕೂಬ್, ಡಿಸಿಸಿ ಉಪಾಧ್ಯಕ್ಷ ಕೆ.ಎಂ.ಲೋಕೇಶ್, ಪ್ರಮುಖರಾದ ಎಚ್.ಆರ್.ಸುರೇಶ್, ಈಶ್ವರಚಂದ್ರ ವಿದ್ಯಾಸಾಗರ್, ಕಾಂತರಾಜ್, ಕೆ.ಎ.ಆದಂ ಲೋಕೋಪಯೋಗಿ ಇಲಾಖೆ ಇಇ ಸಿದ್ದೇಗೌಡ ಉಪಸ್ಥಿತರಿದ್ದರು.

ಭೂ ಪರಿವರ್ತನೆ ವಿರೋಧಿಸಿ ನಾಳೆ ಸಿಎನ್‌ಸಿ ಜನಜಾಗೃತಿ

ಮಡಿಕೇರಿ,ಜು.13– ಸಿದ್ದಾಪುರದ 2400 ಎಕರೆ ಕಾಫಿ ತೋಟ ಸೇರಿದಂತೆ ಕೊಡಗು ಜಿಲ್ಲೆಯ ವಿವಿಧೆಡೆ ನಡೆಯುತ್ತಿರುವ ಬೃಹತ್ ಭೂ ಪರಿವರ್ತನೆ ಮತ್ತು ಭೂ ವಿಲೇವಾರಿಯನ್ನು ಸ್ಥಗಿತಗೊಳಿಸಬೇಕೆಂದು ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ ಜು.15ರಂದು ಪೊನ್ನಂಪೇಟೆಯಲ್ಲಿ ಮಾನವ ಸರಪಳಿ ಜನಜಾಗೃತಿ ಕಾರ್ಯಕ್ರಮ ನಡೆಯಲಿದೆ ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ.

ಬೆಳಿಗ್ಗೆ 10.30 ಗಂಟೆಗೆ ಪೊನ್ನಂಪೇಟೆ ಪಟ್ಟಣದಲ್ಲಿ ಮಾನವ ಸರಪಳಿ ನಿರ್ಮಿಸಿ ಭೂಪರಿವರ್ತನೆ ಮತ್ತು ಭೂವಿಲೇವಾರಿ ವಿರುದ್ಧ ಹಾಗೂ ಕೊಡವ ಲ್ಯಾಂಡ್ ಪರ ಪ್ರತಿಜ್ಞಾ ವಿಧಿ ಸ್ವೀಕರಿಸಲಾಗುವುದು ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕೊಡವರ ಪವಿತ್ರ ಕೊಡವ ಲ್ಯಾಂಡ್ ಅನ್ನು ಸಂರಕ್ಷಿಸಿಕೊಳ್ಳಲು ಜಿಲ್ಲೆಯಾದ್ಯಂತ ಸಿಎನ್‌ಸಿ ವತಿಯಿಂದ ನಿರಂತರ ಜನಜಾಗೃತಿ ಕಾರ್ಯಕ್ರಮ ನಡೆಯುತ್ತಿದ್ದು, ಕೊಡವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಮನವಿ ಮಾಡಿದ್ದಾರೆ.

ಸತ್ತು 6 ತಿಂಗಳಾದರೂ ಎಂಜಿನಿಯರ್‌ಗೆ ವರ್ಗಾವಣೆ

ಸರ್ಕಾರ, ನಗರಸಭಾ ಇಲಾಖೆಯ ಎಡವಟ್ಟು



ಮಡಿಕೇರಿ,ಜು.13– ಕಳೆದ 6 ತಿಂಗಳ ಹಿಂದೆಯೇ ಮೃತಪಟ್ಟಿದ್ದ ಎಂಜಿನಿಯರ್ ಒಬ್ಬರನ್ನು ವರ್ಗಾವಣೆ ಮಾಡುವ ಮೂಲಕ ಸರ್ಕಾರ ಮತ್ತು ನಗರಸಭಾ ಇಲಾಖೆ ಎಡವಟ್ಟು ಮಾಡಿಕೊಂಡಿದೆ.

ನಗರಾಭಿವೃದ್ಧಿ ಇಲಾಖೆಯ ಕಿರಿಯ ಎಂಜಿನಿಯರ್ ಅಶೋಕ ಪುಟಪಾಕ್ ಅವರನ್ನು ಸೇಡಂ ಪುರಸಭೆಯಿಂದ ಮಡಿಕೇರಿ ನಗರಸಭೆಯ ಕಿರಿಯ ಎಂಜಿನಿಯರ್ ಹುದ್ದೆಗೆ ವರ್ಗಾವಣೆ ಮಾಡಿ ರಾಜ್ಯ ಸರ್ಕಾರ ಜುಲೈ 9ರಂದು ಆದೇಶ ಹೊರಡಿಸಿದೆ.

ಆದರೆ ನಗರಾಭಿವೃದ್ಧಿ ಇಲಾಖೆಯ ಕಿರಿಯ ಎಂಜಿನಿಯರ್ ಆಗಿದ್ದ ಅಶೋಕ ಪುಟಪಾಕ್ ಅವರು ಕಳೆದ 6 ತಿಂಗಳ ಹಿಂದೆಯೇ ಮೃತಪಟ್ಟಿದ್ದಾರೆ. ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲೂಕಿನ ದಿಗ್ಗಾಂವ ಗ್ರಾಮದ ಅಶೋಕ ಭೀಮರಾಯ ಪುಟಪಾಕ್ ಸೇಡಂ ಪುರಸಭೆಯಲ್ಲಿ ಕಿರಿಯ ಎಂಜಿನಿಯರ್ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ತೀವ್ರ ಅನಾರೋಗ್ಯದ ಕಾರಣ ಅವರು ಸೇಡಂನಲ್ಲಿ 2024ರ ಜನವರಿ 12ರಂದು ಮೃತಪಟ್ಟಿದ್ದರು.



ಅಶೋಕ ಪುಟಪಾಕ್

ಜನವರಿ 13 ರಂದು ದಿಗ್ಗಾಂವ ಗ್ರಾಮದಲ್ಲಿ ನಡೆದ ಅಂತ್ಯಕ್ರಿಯೆಯಲ್ಲಿ ಚಿತ್ತಾಪುರ, ವಾಡಿ, ಸೇಡಂ ಪುರಸಭೆಯ ಅಧಿಕಾರಿ, ಸಿಬ್ಬಂದಿ ಪಾಲ್ಗೊಂಡಿದ್ದರು. ಇಲಾಖೆಯ ನೌಕರರೊಬ್ಬರು ಮೃತಪಟ್ಟಿರುವ ಬಗ್ಗೆ ಪೌರಾಡಳಿತ ವಿಭಾಗಕ್ಕೆ ಮಾಹಿತಿ ಇರಲಿಲ್ಲವೇ? ಒಂದು ವೇಳೆ ಮೃತಪಡುವ ಮುಂಚೆ ಅಶೋಕ ಅವರು ವರ್ಗಾವಣೆ ಕೋರಿದ್ದರೆ? ಅವರ ಮರಣದ ನಂತರ ವರ್ಗಾವಣೆ ಕಡತ ಮರು ಪರಿಶೀಲನೆ ಮಾಡದೆಯೇ ವರ್ಗಾವಣೆ ಮಾಡಲಾಗಿದೆಯೇ ಎಂಬ ವಿಷಯ ಇದೀಗ ಚರ್ಚೆಗೆ ಗ್ರಾಸವಾಗಿದೆ.

ಹೆದ್ದಾರಿಯಲ್ಲಿ ಹೊತ್ತಿ ಉರಿದ ಕಾರು



ಮಡಿಕೇರಿ,ಜು.13– ಹೆದ್ದಾರಿ ಬದಿಯಲ್ಲಿ ನಿಲ್ಲಿಸಿದ್ದ ಶಿಫ್ಟ್ ಕಾರೊಂದು ತಾಂತ್ರಿಕ ದೋಷದಿಂದ ಸಂಪೂರ್ಣವಾಗಿ ಬೆಂಕಿಗೆ ಆಹುತಿಯಾದ ಘಟನೆ ಮಡಿಕೇರಿ ಹೊರವಲಯದ ಸಂಪಿಗೆಕಟ್ಟೆ ಬಳಿ ನಡೆದಿದೆ. ವಿಷಯ ತಿಳಿದು ಅಗ್ನಿಶಾಮಕ ದಳದ ಸಿಬ್ಬಂದಿಗಳು ಬೆಂಕಿ ನಂದಿಸಿದರಾದರೂ ಕಾರು ಸಂಪೂರ್ಣವಾಗಿ ಭಸ್ಮವಾಗಿದೆ.

ಬೆಂಗಳೂರು ಮೂಲದ ಶ್ರೀನಿವಾಸ್‌ಗೆ ಸೇರಿದ ಕಾರ್ ಇದಾಗಿದ್ದು, ಮಡಿಕೇರಿ ಮಾರ್ಗವಾಗಿ ಬೆಂಗಳೂರು ಕಡೆ ತೆರಳುತ್ತಿದ್ದ ಸಂದರ್ಭ ಸಂಪಿಗೆಕಟ್ಟೆ ಬಳಿ ಕಾರಿನಲ್ಲಿ ಬೆಳಗಿನ ಜಾವ ತಾಂತ್ರಿಕ ದೋಷ ಕಂಡು ಬಂದಿತ್ತು. ಈ ಹಿನ್ನೆಲೆಯಲ್ಲಿ ಕಾರನ್ನು ಹೆದ್ದಾರಿ ಬದಿಯಲ್ಲಿ ನಿಲ್ಲಿಸಲಾಗಿತ್ತು. ಸಂಜೆ ವೇಳೆಗೆ ಕಾರು ಏಕಾಏಕಿ ನ್ಯೂಟ್ರಲ್‌ಗೊಂಡು ಹೆದ್ದಾರಿ ನಡುವಿಗೆ ಚಲಿಸಿದೆ. ಇದೇ ಸಂದರ್ಭ ಕಾರಿನಲ್ಲಿ ಬೆಂಕಿಯೂ ಕಾಣಿಸಿಕೊಂಡಿದ್ದು, ಹೊತ್ತಿ ಉರಿದಿದೆ. ಈ ಘಟನೆಯಿಂದ ಹೆದ್ದಾರಿ ಸಂಚಾರ ಕೆಲ ಕಾಲ ಸ್ಥಗಿತವಾಗಿತ್ತು. ನಗರ ಠಾಣಾ ಪೊಲೀಸರು ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದ್ದಾರೆ.

ಭೂತಾನ್ ಭಾರತದೊಂದಿಗೆ ಉತ್ತಮ ಬಾಂಧವ್ಯ ಹೊಂದಿದೆ

ವಿರಾಜಪೇಟೆ, ಜು.13– ಬೌದ್ಧ ಧರ್ಮದ ನೆಲೆವೀಡಾಗಿರುವ ಭೂತಾನ್ ದೇಶ ಅತೀ ಚಿಕ್ಕ ದೇಶವಾಗಿದ್ದರೂ ಭಾರತದೊಂದಿಗೆ ಉತ್ತಮ ಸಂಬಂಧ ಮತ್ತು ಬಾಂಧವ್ಯವನ್ನು ಹೊಂದಿದೆ ಎಂದು ವಿರಾಜಪೇಟೆ ವೈದ್ಯ ಪಕ್ಷಿತಜ್ಞ ಡಾ.ಎಸ್.ವಿ.ನರಸಿಂಹನ್ ತಿಳಿಸಿದರು.

ಅರಮೇರಿ ಕಳಂಚೇರಿ ಮಠದ ಮಾಸಿಕ ತತ್ತ್ವ ಚಿಂತನಾಗೋಷ್ಠಿ 221 ಕಿರಣ ಹೊಂಬೆಳಕು ಕಾರ್ಯಕ್ರಮದಲ್ಲಿ ಉಪನ್ಯಾಸಕರಾಗಿ ಭಾಗವಹಿಸಿ 'ಭೂತಾನ್; ಬುದ್ಧನ ನೆಲೆವೀಡು' ಎಂಬ ವಿಷಯದ ಬಗ್ಗೆ ಮಾತನಾಡಿ, ಭೂತಾನ್ ದೇಶವು ಇದುವರೆಗೂ ಯಾವುದೇ ಪರ ರಾಷ್ಟ್ರಗಳ ದಾಳಿಗೆ ತುತ್ತಾಗಿಲ್ಲ. ಪ್ರಪಂಚದಲ್ಲಿಯೇ ಬುದ್ಧನ ದೇವಾಲಯ ಅತೀ ದೊಡ್ಡದು ಎಂದು ಹೇಳಲಾಗುತ್ತಿದೆ. ಬಹಳ ಎತ್ತರದಲ್ಲಿರುವ ಪ್ರದೇಶ, ಸುಮಾರು 225 ಕೋಟಿ ವರ್ಷಗಳ ಹಿಂದಿನ ದೇಶ, ಅಲ್ಲಿ ಹೆಚ್ಚು ಬಂಡೆಗಳಿರುವ ಪ್ರದೇಶವಾದರೂ ಶೇ.70 ರಷ್ಟು ವನ್ಯ ಸಂಪತ್ತಿನ ಅರಣ್ಯಗಳನ್ನು ರಕ್ಷಣೆ ಮಾಡಲಾಗಿದೆ ಎಂದರು

ಶ್ರೀ ಮಠದ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಅವರು ಸಾನ್ನಿಧ್ಯ ವಹಿಸಿ ಬೌದ್ಧ ಧರ್ಮದ ನೆಲೆವೀಡು ಜಗತ್ತಿನ ಅತ್ಯಂತ ಶಾಂತಿಯುತ ದೇಶವಾಗಿರುವ ಭೂತಾನ್ ದೇಶ ಸಾಧು ಸಂತರು ಅತೀ ಹೆಚ್ಚು ಸಂದೇಶ ನೀಡಿದ ದೇಶ, ಬೆಟ್ಟ ಗುಡ್ಡಗಳು ಜಲಪಾತಗಳನ್ನು ಹೊಂದಿರುವ ಈ ದೇಶಕ್ಕೆ ಪ್ರವಾಸಿಗರೆ ಆದಾಯ ಮೂಲದವರಾಗಿದ್ದಾರೆ. ಭೂತಾನ್ ದೇಶಕ್ಕೆ ರೈಲು ಮಾರ್ಗಗಳಿಲ್ಲ. ಅಲ್ಲಿನ ಪ್ರಜೆಗಳಿಗೆ ಭಾರತಿಯರು ಎಂದರೆ ಅಪಾರ ಗೌರವವಿದೆ ಎಂದರು.

ಕೃಷಿಕರಾದ ಶಶಿಕಲಾ ಗಿರೀಶ್ ಕಿಗ್ಗಾಲು ಜ್ಯೋತಿ ಬೆಳಗಿಸಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು, ವಿದ್ಯಾರ್ಥಿಗಳಾದ ಜೊನಾ ಲಕ್ಷ್ಮಿ ಸ್ವಾಗತಿಸಿ, ಮಾನ್ಯ ಅಮನ ಪ್ರಾರ್ಥಿಸಿದರೆ, ದಿವ್ಯದರ್ಶಿನಿ ನಿರೂಪಿಸಿ, ವಂದಿಸಿದರು.



ಕಳಂಚೇರಿ ಮಠದ ಮಾಸಿಕ ತತ್ತ್ವ ಚಿಂತನಾಗೋಷ್ಠಿ ಕಿರಣ ಹೊಂಬೆಳಕು ಕಾರ್ಯಕ್ರಮ.

ಆದಿವಾಸಿಗಳಿಗೆ ನಿವೇಶನ ನೀಡುವಂತೆ ಆಗ್ರಹಿಸಿ

ಭಾರತ ಕಮ್ಯುನಿಷ್ಟ್ ಮಾಸ್ ಲೈನ್ ಪಕ್ಷ ಪ್ರತಿಭಟನೆ



ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಸಿಪಿಐ ಪ್ರತಿಭಟನೆ ನಡೆಸಿದರು.

ಮಡಿಕೇರಿ,ಜು.13– ಆದಿವಾಸಿಗಳಿಗೆ ಭೂಮಿ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಭಾರತ ಕಮ್ಯುನಿಸ್ಟ್(ಮಾರ್ಕ್ಸ್‌ವಾದಿ ಲೆನಿನ್ ವಾದಿ) ಮಾಸ್ ಲೈನ್ ಪಕ್ಷದ ಕೊಡಗು ಜಿಲ್ಲಾ ಸಮಿತಿ ಮಡಿಕೇರಿಯಲ್ಲಿ ಪ್ರತಿಭಟನೆ ನಡೆಸಿತು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಎದುರು ಜಮಾಯಿಸಿದ ಪದಾಧಿಕಾರಿಗಳು ಹಾಗೂ ನಿವೇಶನ ರಹಿತರು ಘೋಷಣೆಗಳನ್ನು ಕೂಗಿ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿದರು. ನಿವೇಶನ, ಭೂಮಿ ಹಂಚಿಕೆ ಸೇರಿದಂತೆ ತಮ್ಮ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವಂತೆ ಹತ್ತಾರು ಪ್ರತಿಭಟನೆಗಳನ್ನು ಮಾಡಿದ್ದರೂ ಕೂಡ ಸರಕಾರಗಳು ಯಾವುದೇ ಸ್ಪಂದನೆ ತೋರುತ್ತಿಲ್ಲ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಸಿಪಿಐ(ಎಂಎಲ್)ನ ರಾಜ್ಯ ಸಮಿತಿ ಸದಸ್ಯ ಡಿ.ಎಸ್.ನಿರ್ವಾಣಪ್ಪ ಮಾತನಾಡಿ, ನಿವೇಶನ ರಹಿತ ಆದಿವಾಸಿಗಳನ್ನು ಲೈನ್ ಮನೆಯಿಂದ ಬಿಡುಗಡೆಗೊಳಿಸಿ ಸ್ವಂತ ಸೂರು ಮತ್ತು ಕೃಷಿ ಭೂಮಿ ನೀಡಬೇಕು. ಅಕ್ರಮ ಸಕ್ರಮ ಯೋಜನೆ ಅಡಿಯಲ್ಲಿ ಸಲ್ಲಿಸಿರುವ 50, 53, 57, 94ಸಿ ಅರ್ಜಿಗಳನ್ನು ತಕ್ಷಣ ವಿಲೇವಾರಿ ಮಾಡಬೇಕು.

ಆದಿವಾಸಿ ಪುನರ್ ವಸತಿ ಕೇಂದ್ರ ಬ್ಯಾಡಗೊಟ್ಟ ಹಾಗೂ ಬಸವನಹಳ್ಳಿಯಲ್ಲಿ ನಡೆದಿರುವ ಅಕ್ರಮ ಮತ್ತು ಅಪೂರ್ಣಗೊಂಡಿರುವ ಕಾಮಗಾರಿಯನ್ನು ತನಿಖೆಗೆ ಒಳಪಡಿಸಬೇಕು. ಉಳ್ಳವರಿಗೆ ಭೂಮಿ ಗುತ್ತಿಗೆ ನೀಡುವ ಆದೇಶವನ್ನು ರದ್ದುಗೊಳಿಸಬೇಕು. ಪ್ರತಿ ಗ್ರಾ.ಪಂ ವ್ಯಾಪ್ತಿಯಲ್ಲಿ ಬಡವರಿಗೆ ಹಾಗೂ ಆದಿವಾಸಿಗಳಿಗೆ ನಿವೇಶನ ಕಾಯ್ದಿರಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿದರು. ಬಳಿಕ ಜಿಲ್ಲಾಡಳಿತದ ಮೂಲಕ ಸರಕಾರಕ್ಕೆ ಪ್ರತಿಭಟನೆಯ ಮನವಿ ಪತ್ರವನ್ನು ಸಲ್ಲಿಸಲಾಯಿತು.

ಪ್ರತಿಭಟನೆಯಲ್ಲಿ ಪಕ್ಷದ ರಾಜ್ಯ ಸಮಿತಿ ಸದಸ್ಯ ಜೆ.ಎಂ.ಸುರೇಶ್, ಜಿಲ್ಲಾ ಕಾರ್ಯದರ್ಶಿ ವೈ.ಎಂ.ಸುರೇಶ್, ಆದಿವಾಸಿ ಪ್ರಮುಖರಾದ ಎಚ್.ಜೆ.ಪ್ರಕಾಶ್, ವೈ.ಎಂ.ಮೋಹನ್, ರಾಧಾ, ನಳಿನಾಕ್ಷಿ, ಬಾಬು, ಮುತ್ತ ಮತ್ತಿತರರು ಪಾಲ್ಗೊಂಡಿದ್ದರು.

ಕೊಡಗು ಜಿಲ್ಲಾ ವಿಹೆಚ್‌ಪಿಗೆ ಸಿ.ಕೆ.ಬೋಪಣ್ಣ ಅಧ್ಯಕ್ಷರಾಗಿ ಆಯ್ಕೆ



ಮಡಿಕೇರಿ,ಜು.13– ವಿಶ್ವ ಹಿಂದೂ ಪರಿಷತ್‌ನ ಕೊಡಗು ಜಿಲ್ಲಾಧ್ಯಕ್ಷರಾಗಿ ಸಿ.ಕೆ.ಬೋಪಣ್ಣ ಆಯ್ಕೆಯಾಗಿದ್ದಾರೆ. ಬೆಂಗಳೂರಿನಲ್ಲಿ ಇಂದು ನಡೆದ ವಿಶ್ವ ಹಿಂದೂ ಪರಿಷತ್‌ನ ಕರ್ನಾಟಕ ದಕ್ಷಿಣ ವಿಶೇಷ ಪ್ರಾಂತ ಬೈಠಕ್‌ನಲ್ಲಿ ರಾಷ್ಟ್ರೀಯ ಪ್ರಮುಖರ ಸಮ್ಮುಖದಲ್ಲಿ ನೂತನ ಅಧ್ಯಕ್ಷರನ್ನು ನೇಮಕ ಮಾಡಲಾಯಿತು ಎಂದು ಜಿಲ್ಲಾ ಕಾರ್ಯಾಧ್ಯಕ್ಷ ಸುರೇಶ್ ಮುತ್ತಪ್ಪ ತಿಳಿಸಿದ್ದಾರೆ.

ಜು.27ರಿಂದ ರಾಜ್ಯಮಟ್ಟದ ಕೆಸರುಗದ್ದೆ ಕ್ರೀಡಾಕೂಟ

ನಾಪೋಕ್ಲು, ಜು.13– ಇಲ್ಲಿಗೆ ಸಮೀಪದ ಬೆಟ್ಟಗೇರಿ ಗ್ರಾಮ ಪಂಚಾಯಿತಿಯ ಅರ್ವತೋಕ್ಲು ಗ್ರಾಮದ ಬೇಕೋಟ್ ಮಕ್ಕ ಕ್ಲಬ್ ವತಿಯಿಂದ ಜು.27 ಮತ್ತು 28 ರಂದು ಹಿಂದೂ ಬಾಂಧವರ ಆಶ್ರಯದಲ್ಲಿ ನಾಲ್ಕನೇ ವರ್ಷದ ರಾಜ್ಯಮಟ್ಟದ ಕೆಸರುಗದ್ದೆ ಕ್ರೀಡಾಕೂಟವನ್ನು ತಳೂರು ಎಂ.ಚಂಗಪ್ಪ ಹಾಗೂ ತಳೂರು ಎಂ.ಕುಶಾಲಪ್ಪನವರ ಗದ್ದೆಯಲ್ಲಿ ಆಯೋಜಿಸಲಾಗಿದೆ.

ಕ್ರೀಡೋತ್ಸವದ ಮೊದಲ ದಿನದಂದು ಕ್ರಿಕೆಟ್ ಪಂದ್ಯಾವಳಿಯೊಂದಿಗೆ ಪ್ರಾರಂಭಿಸಿ ಜು.28ರಂದು ಮಹಿಳೆ ಹಾಗೂ ಪುರುಷರಿಗೆ ಪ್ರತ್ಯೇಕ ಹಗ್ಗಜಗ್ಗಾಟ, ವಯೋಮಿತಿಗೆ ತಕ್ಕಂತೆ ಓಟದ ಸ್ಪರ್ಧೆ, ದಂಪತಿಗಳಿಗೆ ಹಾಳೆ ಎಳೆಯುವುದು, ಗೂಟ ಓಟದ ಸ್ಪರ್ಧೆ, ಕ್ರಿಕೆಟ್ ಅಂತಿಮ ಹಂತದ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಮಾಹಿತಿಗೆ ಮೊ: 9906894429 ಇವರನ್ನು ಸಂಪರ್ಕಿಸಿ.

ನಾಡಪ್ರಭು ಕೆಂಪೇಗೌಡರ ದೂರದೃಷ್ಟಿ ಫಲ ಬೆಂಗಳೂರು ಬೃಹತ್ ನಗರವಾಗಿ ಬೆಳೆದಿದೆ

ಚಾಮರಾಜನಗರದಲ್ಲಿ ನಾಡಪ್ರಭು ಕೆಂಪೇಗೌಡರ ಜಯಂತ್ಯುತ್ಸವ ಆಚರಣೆ



ಚಾಮರಾಜನಗರದ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಅಖಿಲ ಕರ್ನಾಟಕ ಕನ್ನಡ ಮಹಾಸಭಾ ರಾಜ್ಯ ಘಟಕದ ವತಿಯಿಂದ ನಡೆದ ನಾಡಪ್ರಭು ಕೆಂಪೇಗೌಡರವರ ಜಯಂತ್ಯುತ್ಸವ ಸಮಾರಂಭವನ್ನು ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಉದ್ಘಾಟಿಸಿದರು.

ಚಾಮರಾಜನಗರ, ಜು.13– ನಾಡಪ್ರಭು ಕೆಂಪೇಗೌಡರ ದೂರದೃಷ್ಟಿ ಫಲವಾಗಿ ಬೆಂಗಳೂರು ವಿಶ್ವಮಟ್ಟದಲ್ಲಿ ಗುರುತಿಸಿಕೊಂಡು ಬೃಹತ್ ನಗರವಾಗಿ ಬೆಳೆದಿದೆ ಎಂದು ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಹೇಳಿದರು.

ನಗರದ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಅಖಿಲ ಕರ್ನಾಟಕ ಕನ್ನಡ ಮಹಾಸಭಾ ರಾಜ್ಯ ಘಟಕದ ವತಿಯಿಂದ ನಡೆದ ನಾಡಪ್ರಭು ಕೆಂಪೇಗೌಡರವರ ಜಯಂತ್ಯುತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಬೆಂಗಳೂರಿನ ನಿರ್ಮಾತೃ ನಾಡಪ್ರಭು ಕೆಂಪೇಗೌಡರ ದೂರದೃಷ್ಟಿಯುಳ್ಳ ನಾಯಕರಾಗಿದ್ದು, ಎಲ್ಲ ವರ್ಗದ ಸಮಾಜಗಳಿಗೆ ಅನೇಕ ಕೊಡುಗೆಗಳನ್ನು ನೀಡಿದ್ದಾರೆ. ಆಗಾಗಿ ಬೆಂಗಳೂರು ನಗರ ಶಾಂತಿಯುತವಾಗಿ ಬೃಹತ್ ನಗರವಾಗಿ ಬೆಳೆದು ವಿಶ್ವಮಟ್ಟದಲ್ಲಿ ಗುರುತಿಸಿಕೊಂಡಿದೆ ಎಂದರು.

ಕೆಂಪೇಗೌಡರು ಬೆಂಗಳೂರು ನಗರವನ್ನು ವಾಣಿಜ್ಯ ಕೇಂದ್ರವನ್ನಾಗಿ ಮಾಡಬೇಕೆಂಬ ಮಹದಾಸೆಯಾಯಿತು. ಅದರಂತೆ ಆಯಾಯ ಕುಲಕಸುಬಿನ ಜನರಿಗೆ ಅನುಗುಣವಾಗಿ ಪೇಟೆಗಳನ್ನು ಮಾಡಿದರು. ಇಂದು ಬೆಂಗಳೂರು ಎಲ್ಲ ವರ್ಗದ ಜನರಿಗೂ ಕೆಲಸ ಕೊಡುವ ಮೂಲಕ ಆಶ್ರಯ ಕೊಟ್ಟಿದೆ. ಜನರು ಬದುಕು ಕಟ್ಟಿಕೊಂಡಿದ್ದಾರೆ ಎಂದರು. ನಮ್ಮ ಸರ್ಕಾರ ಕೂಡ ಕೆಂಪೇಗೌಡ ಅವರ ಬಗ್ಗೆ ವಿಶೇಷ ಕಾಳಜಿ ವಹಿಸಿದೆ ಎಂದರು.

ಎಂಎಸ್‌ಐಎಲ್ ಅಧ್ಯಕ್ಷರು, ಶಾಸಕ ಸಿ.ಪುಟ್ಟರಂಗಶೆಟ್ಟರು ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿ, ಕೆಂಪೇಗೌಡರು ಮಹಾನ್‌ನಾಯಕರಾಗಿದ್ದರು. ಕೆಂಪೇಗೌಡರು ಸ್ಥಾಪಿಸಿದ ಬೆಂಗಳೂರು ಇಡೀ ವಿಶ್ವದಲ್ಲೇ ಮಹಾನಗರವಾಗಿ ಗುರುತಿಸಿಕೊಂಡಿರುವುದು ಹೆಮ್ಮೆ ವಿಚಾರವಾಗಿದೆ ನಾಡಿನ ಜನತೆ ಕೆಂಪೇಗೌಡರನ್ನು ಸ್ಮರಿಸುವ ಕೆಲಸ ಆಗಬೇಕಿದೆ ಎಂದರು.

ಕೊಳ್ಳೇಗಾಲ ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿ, ಕೆಂಪೇಗೌಡರು ಬೆಂಗಳೂರು ಸ್ಥಾಪಿಸುವ ಮೂಲಕ ನಾಡಿನ ಅಭಿವೃದ್ಧಿಗೆ ಕಾರಣೀಭೂತರಾಗಿದ್ದಾರೆ. ಅವರ ಬದುಕು ಎಲ್ಲರಿಗೂ ಆದರ್ಶವಾಗಿದೆ ಎಂದರು.

ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿ, ನಾಡಪ್ರಭು ಕೆಂಪೇಗೌಡರು ಸರ್ವ ಜಾತಿ, ಧರ್ಮಗಳಿಗೆ ಕೊಡುಗೆ ನೀಡಿದ್ದಾರೆ. ಒಕ್ಕಲಿಗ ಸಮಾಜ ಕೆಂಪೇಗೌಡ ಭಾವಚಿತ್ರವನ್ನು ಪ್ರತಿಮನೆಯಲ್ಲೂ ಅಳವಡಿಸಿಕೊಂಡು ಅವರನ್ನು ಸ್ಮರಿಸುವ ಕೆಲಸ ಆಗಬೇಕಿದೆ ಎಂದರು.

ಸನ್ಮಾನ : ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವರನ್ನು ಸನ್ಮಾನಿಸಲಾಯಿತು. ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು.

ಗುಂಡ್ಲುಪೇಟೆ ಶಾಸಕ ಎಚ್.ಎಂ.ಗಣೇಶ್ ಪ್ರಸಾದ್, ಚಾಮರಾಜನಗರ ವಿಶ್ವವಿದ್ಯಾನಿಲಯದ ಉಪಕುಲಪತಿ ಪ್ರೊ.ಎಂ.ಆರ್. ಗಂಗಾಧರ್ ಮಾತನಾಡಿದರು.

ಮಾಜಿ ಶಾಸಕ ಆರ್.ನರೇಂದ್ರ ಅಧ್ಯಕ್ಷತೆ ವಹಿಸಿದ್ದರು. ಅಖಿಲ ಕರ್ನಾಟಕ ಕನ್ನಡ ಮಹಾಸಭಾದ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಪ್ರಾಸ್ತಾವಿಕ ಭಾಷಣ ಮಾಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತ, ಮೈಸೂರು ಚಾಮುಂಡಿಬೆಟ್ಟ ಪ್ರಧಾನ ಅರ್ಚಕ ಡಾ. ಎನ್.ಶಶಿಶೇಖರ್ ದೀಕ್ಷಿತ್, ಕಾಡಾಧ್ಯಕ್ಷ ಪಿ.ಮರಿಸ್ವಾಮಿ, ಚೂಡಾಧ್ಯಕ್ಷ ಮಹಮ್ಮದ್‌ಅಸ್ಗರ್, ಜಿಲ್ಲಾ ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಸಮಿತಿ ಅಧ್ಯಕ್ಷ ಎಚ್.ವಿ.ಚಂದ್ರು, ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ರಾಜ್ಯಾಧ್ಯಕ್ಷ ಸಿ.ಜಿ.ಗಂಗಾಧರ್, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರಾದ ಕೆ.ವಿ.ಶ್ರೀಧರ್, ಡಾ.ಎಂ.ಬಿ ಮಂಜೇಗೌಡ, ಮಹಾಸಭಾದ ಗೌರವಾಧ್ಯಕ್ಷ ಶಾ.ಮುರಳಿ, ಪ್ರಧಾನ ಕಾರ್ಯದರ್ಶಿ ಚಾ.ವೆಂ.ರಾಜ್‌ಗೋಪಾಲ್, ನಗರಸಭಾ ಮಾಜಿ ಅಧ್ಯಕ್ಷ ಸುರೇಶ್‌ನಾಯಕ, ನಗರ ಯೋಜನಾ ಪ್ರಾಧಿಕಾರದ ಮಾಜಿ ಅಧ್ಯಕ್ಷ ಕೆ.ಪುಟ್ಟಸ್ವಾಮಿಗೌಡ, ಆರ್.ಜಯರಾಂ, ಎ.ಕುಮಾರ್, ಕೆ.ಬಿ.ಚಿನ್ನಸ್ವಾಮಿ, ಪಣ್ಯದ ಹುಂಡಿರಾಜು, ಮಹೇಶ್ ಗೌಡ, ನಿಜಧ್ವನಿ ಗೋವಿಂದರಾಜು, ಅರುಣ್ ಕುಮಾರ್ ಗೌಡ, ಚಾ.ರಾ.ಕುಮಾರ್, ಲಿಂಗರಾಜು, ಅಖಿಲ ಕರ್ನಾಟಕ ಕನ್ನಡ ಮಹಾಸಭಾದ ಪದಾಧಿಕಾರಿಗಳು ಹಾಜರಿದ್ದರು.

ಮುಖ್ಯಮಂತ್ರಿಗೆ ನೀಡಿದ್ದ ಮನವಿ ಪತ್ರಗಳು ಬೀದಿಗೆ ಬಿಸಾಡಿದ ಪ್ರಕರಣ

ಜಿಲ್ಲಾ ಉಸ್ತುವಾರಿ ಸಚಿವರಿಗೆ ರೈತರ ತರಾಟೆ

ಸ್ಪಷ್ಟೀಕರಣ ನೀಡಲು ಆಗ್ರಹ, ಸಿಎಂ ಜೊತೆ ಮಾತಾಡುವೆ ಎಂದ ಸಚಿವರು

ಚಾಮರಾಜನಗರ, ಜು.13– ರೈತರು, ಸಾರ್ವಜನಿಕರು ತಮ್ಮ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲ್ಲಿಸಿದ್ದ ಮನವಿ ಪತ್ರಗಳನ್ನು ಕಾರ್ಯಕ್ರಮದ ಸ್ಥಳದಲ್ಲೇ ಬಿಸಾಡಿ ಹೋಗಿರುವುದರ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಸ್ಪಷ್ಟೀಕರಣ ನೀಡಬೇಕು ಎಂದು ಆಗ್ರಹಿಸಿ ನಗರದಲ್ಲಿ ಶನಿವಾರ ರೈತ ಸಂಘದ ಕಾರ್ಯಕರ್ತರು ಸಚಿವರನ್ನು ತರಾಟೆ ತೆಗೆದುಕೊಂಡ ಘಟನೆ ನಡೆಯಿತು.

ನಗರದ ಜಿಲ್ಲಾಡಳಿತ ಭವನದ ಮುಂಭಾಗ ಸಮಾವೇಶಗೊಂಡ ರೈತರು ಉಸ್ತುವಾರಿ ಸಚಿವರನ್ನು ಭೇಟಿ ಮಾಡಿ, ಜುಲೈ 10 ರಂದು ನಗರದ ಡಾ.ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಕಾಂಗ್ರೆಸ್‌ನ ಕೃತಜ್ಞತಾ ಸಮಾವೇಶದಲ್ಲಿ ಭಾಗವಹಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ರೈತರು ಹಾಗೂ ಸಾರ್ವಜನಿಕರು ತಮ್ಮ ಸಮಸ್ಯೆ ಈಡೇರಿಸುವಂತೆ ಸಲ್ಲಿಸಿದ್ದ ಮನವಿಗಳನ್ನು ಕಾರ್ಯಕ್ರಮದ ಸ್ಥಳದಲ್ಲೇ ಬಿಸಾಡಿ ಹೋಗಿರುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.



ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಅವರನ್ನು ರೈತ ಸಂಘದ ಕಾರ್ಯಕರ್ತರು ತರಾಟೆಗೆ ತೆಗೆದುಕೊಂಡಿರುವುದು.

ರೈತರು, ಸಾರ್ವಜನಿಕರ ಮನವಿಗಳ ಬಗ್ಗೆ ಈ ರೀತಿ ನಿರ್ಲಕ್ಷ್ಯವನ್ನು ಮುಖ್ಯಮಂತ್ರಿಗಳು ವಹಿಸಿದರೆ, ಇನ್ನೂ ಜನಸ್ಪಂದನಾ ಕಾರ್ಯಕ್ರಮದ ಮನವಿಗಳನ್ನು ನೀವು ಯಾವ ರೀತಿ ಪರಿಶೀಲಿಸುತ್ತೀರಿ, ಈ ಬಗ್ಗೆ ನೀವು ಸ್ಪಷ್ಟೀಕರಣ ನೀಡಬೇಕು, ಮುಖ್ಯಮಂತ್ರಿಗಳು ಕೂಡಲೇ ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿದರು. ಇದಕ್ಕೆ ಪ್ರತಿಕ್ರಿಯೆ ನೀಡಿದ ಸಚಿವ ಕೆ. ವೆಂಕಟೇಶ್, ಯಾರು ಉದ್ದೇಶ ಪೂರ್ವಕವಾಗಿ ಈ ರೀತಿ ಮಾಡಿಲ್ಲ. ನಮ್ಮ ಸರ್ಕಾರ ಜನಪರವಾದ ಸರ್ಕಾರ, ಈ ಬಗ್ಗೆ ಮುಖ್ಯಮಂತ್ರಿ ಅವರೊಡನೆ ಮಾತನಾಡುತ್ತೇನೆ ಎಂದು ಹೇಳಿದರು.

ಈ ವೇಳೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕವಿತಾ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ರೈತ ಮುಖಂಡರಾದ ಗುರುಪ್ರಸಾದ್, ಮಾಡ್ರಹಳ್ಳಿ ಮಹದೇವಪ್ಪ, ಕುಂದಕೆರೆ ಸಂಪತ್ತು ಇತರರಿದ್ದರು.

ಸೋಮಶೇಖರ್ ನಿಧನ

ಗುಂಡ್ಲುಪೇಟೆ, ಜು.13– ಪಟ್ಟಣದ ಅಶ್ವಿನಿ ಬಡಾವಣೆ ನಿವಾಸಿ ಶಿಕ್ಷಕ ಸೋಮಶೇಖರ್ (53) ನಿಧನರಾದರು.



ಮೃತರಿಗೆ ಪತ್ನಿ ಹಾಗೂ ಇಬ್ಬರು ಪುತ್ರಿಯರಿದ್ದಾರೆ. ಅಂತ್ಯಕ್ರಿಯೆಯು ಸ್ವಗ್ರಾಮವಾದ ದೇವರಹಳ್ಳಿಯಲ್ಲಿ ಭಾನುವಾರ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿದೆ.

ಮನವಿ ಪತ್ರ ಬಿಸಾಡಿ ಹೋದ ಸಿಎಂಗೆ ಬಡವರ ಬಗ್ಗೆ ಕಾಳಜಿಯಿಲ್ಲ

ಚಾಮರಾಜನಗರ, ಜು.13– ನಗರದಲ್ಲಿ ನಡೆದ ಸಮಾವೇಶಕ್ಕೆ ಆಗಮಿಸಿದ್ದ ಸಿದ್ದರಾಮಯ್ಯ ಅವರು ತಮಗೆ ನೀಡಿದ್ದ ಮನವಿ ಪತ್ರಗಳನ್ನು ಬಿಸಾಡಿ ಹೋಗಿರುವುದು ಖಂಡನೀಯ. ಮುಖ್ಯಮಂತ್ರಿಗೆ ರೈತರು, ಬಡಜನರ ಬಗ್ಗೆ ಕಾಳಜಿಯಿಲ್ಲ ಎಂಬುದನ್ನು ಇದು ತೋರಿಸುತ್ತದೆ ಎಂದು ಜಿಲ್ಲಾ ಬಿಜೆಪಿ ಅಧ್ಯಕ್ಷ ಸಿ.ಎಸ್.ನಿರಂಜನಕುಮಾರ್ ಟೀಕಿಸಿದರು.

ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯನವರ ಬಗ್ಗೆ ಸಾರ್ವಜನಿಕರು ಗೌರವ ಹೊಂದಿದ್ದಾರೆ. ಅವರ ಮೇಲೆ ನಂಬಿಕೆ ಇಟ್ಟಿದ್ದಾರೆ. ಅವರಿಗೆ ಅಹವಾಲು ಕೊಟ್ಟರೆ ಸಮಸ್ಯೆ ಬಗೆಹರಿಯುತ್ತದೆ ಎಂದು ಜನರು ನಂಬಿರುತ್ತಾರೆ. ಆದರೆ ಅಹವಾಲು ಅರ್ಜಿಗಳನ್ನು ಸ್ವೀಕರಿಸಿದ ಮುಖ್ಯಮಂತ್ರಿಯವರು ಅದನ್ನು ಅಲ್ಲೇ ಬಿಸಾಕಿ ಹೋಗಿದ್ದಾರೆ ಎಂದು ಆಕ್ಷೇಪಿಸಿದರು.

ಈ ಘಟನೆಯಿಂದ, ಅಧಿಕಾರಿಗಳಿಗೂ ಕಾಳಜಿ ಇಲ್ಲ. ಮುಖ್ಯಮಂತ್ರಿಯವರಿಗೂ ಕಾಳಜಿ ಇಲ್ಲ ಎಂಬುದು ತಿಳಿಯುತ್ತದೆ. ಜನರು, ಬಡವರು, ರೈತರು ನೀಡಿದ ಮನವಿಗಳನ್ನು ಬಿಸಾಡಿದ್ದೀರಿ ಎಂದರೆ ನಿಮ್ಮ ಕಾಳಜಿ ಎಷ್ಟಿದೆ, ಉಡಾಫೆ, ಉದಾಸೀನ ಎಷ್ಟಿದೆ ಎಂಬುದು ತಿಳಿಯುತ್ತದೆ ಎಂದು ಕಿಡಿಕಾರಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ದಮನ ಮಾಡುವುದು ಮುಂಚಿನಿಂದಲೂ ಕಾಂಗ್ರೆಸ್‌ನ ನಿಲುವಾಗಿದೆ. ಈಗ ರಾಜ್ಯದಲ್ಲಿ ವಿಪಕ್ಷಗಳು ಚಳವಳಿಗಳನ್ನು ಮಾಡದಂತೆ ತಡೆಯಲಾಗುತ್ತಿದೆ. ಚಾ.ನಗರದಲ್ಲಿ ಬಿಜೆಪಿಯಿಂದ ಪ್ರತಿಭಟನೆ ಮಾಡಲು ಮುಂದಾದಾಗ, ಮುಖಂಡರನ್ನು ಮನೆಗೇ ಬಂದು ಚಳವಳಿಗೆ ಹೋಗುವುದನ್ನು ತಡೆದಿದ್ದಾರೆ ಎಂದರು.

ಚಾ.ನಗರದಲ್ಲಿ ಲೋಕ ಅದಾಲತ್ ಯಶಸ್ವಿ

ರಾಜೀ-ಸಂಧಾನಗಳ ಮೂಲಕ ಹಲವು ಪ್ರಕರಣಗಳು ಇತ್ಯರ್ಥ



ಜಿಲ್ಲಾ ಸೆಷನ್ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಬಿ.ಎಸ್. ಭಾರತಿ ಅವರ ಸಮ್ಮುಖದಲ್ಲಿ ನಡೆದ ಲೋಕ ಅದಾಲತ್.

ಚಾಮರಾಜನಗರ, ಜು.13– ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ಶನಿವಾರ ನಡೆದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಹಲವು ಪ್ರಕರಣಗಳು ಇತ್ಯರ್ಥಗೊಂಡು ಯಶಸ್ವಿಯಾಯಿತು.

ಜಿಲ್ಲಾ ಸೆಷನ್ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಬಿ.ಎಸ್. ಭಾರತಿ ಅವರ ಅಧ್ಯಕ್ಷತೆಯಲ್ಲಿ ಜಿಲ್ಲೆಯ ವಿವಿಧ ನ್ಯಾಯಾಲಯಗಳಲ್ಲಿ ಲೋಕ್ ಅದಾಲತ್ ಕಾರ್ಯಕ್ರಮ ನಡೆಯಿತು.

ಅದಾಲತ್‌ನಲ್ಲಿ ಬಾಕಿ ಇರುವ ಬ್ಯಾಂಕ್ ವಸೂಲಾತಿ ಪ್ರಕರಣಗಳು, ಮೋಟಾರ್ ವಾಹನ ಅಪಘಾತ ಪ್ರಕರಣಗಳು, ಕೌಟುಂಬಿಕ ಪ್ರಕರಣಗಳು, ಕಾರ್ಮಿಕ ಸಂಬಂಧಿತ ವಿವಾದಗಳು, ಚೆಕ್ ಬೌನ್ಸ್ ಪ್ರಕರಣಗಳು, ಹಣ ವಸೂಲಾತಿ ಪ್ರಕರಣಗಳು, ಎಂಎಂಡಿಆರ್ ಕಾಯ್ದೆ ಪ್ರಕರಣಗಳು, ಜನನ ನೋಂದಣಿ ಪ್ರಕರಣಗಳು, ಪಾಲು ವಿಭಾಗ, ದಾವೆ ಹಾಗೂ ಸಿವಿಲ್ ಪ್ರಕರಣಗಳು, ಕಂದಾಯ ಪ್ರಕರಣಗಳು ಸೇರಿದಂತೆ ಸಾವಿರಾರು ಪ್ರಕರಣಗಳನ್ನು ಯಶಸ್ವಿಯಾಗಿ ಇತ್ಯರ್ಥಪಡಿಸಲಾಯಿತು.


ಇತ್ಯರ್ಥಗೊಂಡಿರುವ ಪ್ರಕರಣಗಳ ನಿಖರ ಸಂಖ್ಯೆ ಸದ್ಯಕ್ಕೆ ತಿಳಿದು ಬಂದಿಲ್ಲ. ನ್ಯಾಯಾಲಯದಲ್ಲಿ ಬಾಕಿ ಪ್ರಕರಣ, ವ್ಯಾಜ್ಯಪೂರ್ವ ಪ್ರಕರಣ ಸೇರಿದಂತೆ ಸುಮಾರು 30 ಸಾವಿರಕ್ಕೂ ಹೆಚ್ಚು ಪ್ರಕರಣಗಳನ್ನು ಇತ್ಯರ್ಥ ಮಾಡುವ ಗುರಿಯನ್ನು ಈ ಬಾರಿ ಪ್ರಾಧಿಕಾರ ಹಾಕಿಕೊಂಡಿತ್ತು. ಹೀಗಾಗಿ, ಸೋಮವಾರ ಅಥವಾ ಮಂಗಳವಾರ ಇತ್ಯರ್ಥಗೊಂಡ ಪ್ರಕರಣಗಳ ನಿಖರ ಮಾಹಿತಿ ತಿಳಿಯಲಿದ್ದು, ಗುರಿ ತಲುಪುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಉಳಿದಂತೆ ಜಿಲ್ಲೆಯ ಕೊಳ್ಳೇಗಾಲ, ಗುಂಡ್ಲುಪೇಟೆ, ಯಳಂದೂರಿನ ನ್ಯಾಯಾಲಯಗಳಲ್ಲೂ ಅದಾಲತ್ ಶನಿವಾರ ಯಶಸ್ವಿಯಾಗಿ ನಡೆದಿದ್ದು, ಸಾಕಷ್ಟು ಪ್ರಕರಣಗಳನ್ನು ರಾಜೀ– ಸಂಧಾನದ ಮೂಲಕ ಇತ್ಯರ್ಥಗೊಳಿಸಲಾಗಿದೆ. ಮೆಗಾ ಲೋಕ ಅದಾಲತ್ ಹಿನ್ನೆಲೆಯಲ್ಲಿ ಜಿಲ್ಲೆಯ ವಿವಿಧೆಡೆಯಿಂದ ಕಕ್ಷಿದಾರರು ನ್ಯಾಯಾಲಯಕ್ಕೆ ಬೆಳಗ್ಗೆಯೇ ಬಂದಿದ್ದರು. ಬೆಳಗ್ಗೆ 11 ಗಂಟೆ ಸುಮಾರಿಗೆ ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ಅದಾಲತ್ ಆರಂಭವಾಯಿತು. ವಕೀಲರು, ಕಕ್ಷಿದಾರರ ಸಮ್ಮುಖದಲ್ಲಿ ನ್ಯಾಯಾಧೀಶರು ಪ್ರಕರಣಗಳ ವಿಚಾರಣೆಯನ್ನು ಮಾಡಿ ಬಹುತೇಕ ಪ್ರಕರಣಗಳನ್ನು ಸ್ಥಳದಲ್ಲಿಯೇ ಇತ್ಯರ್ಥಪಡಿಸಿದರು. ಉಳಿದಂತೆ ರಾಜಿಗೆ ಸಮ್ಮತಿಯಾಗದ ಪ್ರಕರಣಗಳಿಗೆ ಮುಂದಿನ ದಿನಾಂಕವನ್ನು ನೀಡಿದರು. ಈ ವೇಳೆ ನ್ಯಾಯಾಧೀಶರಾದ ಬಿ.ಎಸ್.ಭಾರತಿ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯೂ ಆದ ನ್ಯಾಯಾಧೀಶರಾದ ಈಶ್ವರ್, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ನಂಜಯ್ಯ, ಪ್ರಧಾನ ಕಾರ್ಯದರ್ಶಿ ರಂಗಸ್ವಾಮಿ ಸೇರಿದಂತೆ ಹಿರಿಯ ಹಾಗೂ ಕಿರಿಯ ವಕೀಲರು, ನ್ಯಾಯಾಲಯದ ಸಿಬ್ಬಂದಿ ಹಾಜರಿದ್ದರು.


ಬಹುತೇಕ ಪ್ರಕರಣ ಇತ್ಯರ್ಥ: ಪಿತ್ರಾರ್ಜಿತ ಆಸ್ತಿಯ ವಿಭಾಗದ ಸಂಬಂಧ ನಗರದ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ ನ್ಯಾಯಾಲಯದಲ್ಲಿ 2022 ರಲ್ಲಿ ತಾಲೂಕಿನ ಕಾಡಳ್ಳಿ ಗ್ರಾಮದ ಗೌರಮ್ಮ, ಚಿನ್ನತಾಯಮ್ಮ ಎಂಬುವರು ದಾವೆ ಹೂಡಿದ್ದರು. ಈ ಪ್ರಕರಣವೂ ಎರಡು ವರ್ಷಗಳ ಕಾಲ ನ್ಯಾಯಾಲಯದಲ್ಲಿ ವ್ಯಾಜ್ಯ ನಡೆದು ಇಂದು ನ್ಯಾಯಾಧೀಶರ ಲೋಕ ಅದಾಲತ್‌ನಲ್ಲಿ ಪ್ರಕರಣದ ವಿಚಾರಣೆ ನಡೆಸಿ ಗೌರಮ್ಮ, ಚಿನ್ನತಾಯಮ್ಮ ಅವರ ಸಹೋದರರಾದ ಶಿವಮಲ್ಲೇಗೌಡ, ರಾಜೇಂದ್ರ ಅವರನ್ನು ನ್ಯಾಯಾಲಯಕ್ಕೆ ಕರೆಸಿ, ರಾಜೀ ಸಂಧಾನ ಮಾಡಿ, ಪ್ರಕರಣವನ್ನು ಇತ್ಯರ್ಥಗೊಳಿಸಲಾಯಿತು.

ಈ ವೇಳೆ ವಕೀಲರಾದ ಎಂ. ಶಿವರಾಮು ಹಾಗೂ ರಾಜೇಂದ್ರ ತಮ್ಮ– ತಮ್ಮ ಕಕ್ಷಿದಾರರ ಪರವಾಗಿ ವಾದ ಮಂಡಿಸಿದರು.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ
ಭಾನುವಾರ 14–7–2024



ಕರ್ನಾಟಕದಲ್ಲಿ ಸ್ಮಾರ್ತ ಬ್ರಾಹ್ಮಣರು



ಡಾ.ಹೆಚ್.ವಿ.ನಾಗರಾಜರಾವ್
ಮೈಸೂರು.

“ಈ ಗ್ರಂಥದಲ್ಲಿರುವ ಲೇಖನಗಳನ್ನು ಬರೆದಿರುವವರೂ ಹೆಸರಾಂತವರು. ಶತಾವಧಾನಿ ಡಾ.ಆರ್.ಗಣೇಶ್, ಡಾ.ಎ.ವಿ.ಪ್ರಸನ್ನ, ಡಾ.ಎಸ್.ನಾಗರಾಜು ಮುಂತಾದವರು. ಒಟ್ಟು ಮೂವತ್ತಮೂರು ಅಮೂಲ್ಯ ಲೇಖನಗಳು ಇದರಲ್ಲಿವೆ. ಇದರ ವೈಶಿಷ್ಟ್ಯವನ್ನು ಕುರಿತು ಮುನ್ನುಡಿಯಲ್ಲಿ ನಾಡೋಜ ಡಾ.ಟಿ.ವಿ. ವೆಂಕಟಾಚಲಶಾಸ್ತ್ರಿಗಳು ಹೀಗೆಂದಿದ್ದಾರೆ “ವಿಶೇಷವಾಗಿ ಪ್ರಾದೇಶಿಕವಾಗಿಯೂ, ಭಾಷಿಕವಾಗಿಯೂ ಹಿಂದೆ ಬೇರೆ ಬೇರೆ ನೆಲೆಗಳಲ್ಲಿ ವಾಸವಿದ್ದು, ಬೇರೆ ಬೇರೆ ಭಾಷಾ ಪ್ರಭೇದಗಳಲ್ಲಿ ವ್ಯವಹರಿಸುತ್ತಿದ್ದು ಮುಂದೆ ವಲಸೆ–ಮರು ವಲಸೆಗಳಲ್ಲಿ ಹರಡಿ ಬೆಳೆಯುತ್ತ, ಪರಸ್ಪರವಾಗಿ ಬೆರೆಯುತ್ತ, ಬೇರೆಯಾಗುತ್ತ ಈ ಸ್ಮಾರ್ತ ಬ್ರಾಹ್ಮಣ ಸಮುದಾಯ ವರ್ಧಿಸಿರುವುದು ತಿಳಿದ ಸಂಗತಿ. ಅದೊಂದು ಚೈತನ್ಯವಾಹಿನಿ. ಶ್ರದ್ಧೆ– ಆಚರಣೆಗಳಲ್ಲಿ, ಭಾಷೆ–ಭಣಿತಿಗಳಲ್ಲಿ ವ್ಯಕ್ತವಾಗುವ ವಿಶಿಷ್ಟ ವಿದ್ಯಮಾನಗಳ ಸಾಮಾನ್ಯ ಸ್ವರೂಪವನ್ನು ಗುರುತಿಸುವ, ದಾಖಲಿಸುವ ಒಂದು ಪ್ರಾಮಾಣಿಕ ಪ್ರಯತ್ನ ಇಲ್ಲಿ ನಡೆದಿದೆ”.



‘ಬ್ರಾಹ್ಮಣ’ ಎಂಬ ಶಬ್ದವು ವೇದಗಳಲ್ಲಿ ಕಂಡು ಬರುವುದರಿಂದ ವೇದ ಕಾಲದಿಂದ ಇಂದಿನವರೆಗೂ ಬ್ರಾಹ್ಮಣರು ಭಾರತ ದೇಶದಲ್ಲಿ ವಾಸ ಮಾಡುತ್ತಿದ್ದಾರೆ. ಅಧ್ಯಯನ, ಅಧ್ಯಾಪನ, ಯಜನ, ಯಾಜನ, ದಾನ, ಪ್ರತಿಗ್ರಹ ಎಂಬವು ಬ್ರಾಹ್ಮಣರ ಆರು ಕರ್ಮಗಳಾಗಿದ್ದುದರಿಂದ ಅವರನ್ನು ‘ಷಟ್ಕರ್ಮಾ’ ಎನ್ನುತ್ತಿದ್ದರು. ಅವರು ಶ್ರುತ್ಯುಕ್ತವಾದ, ಎಂದರೆ ವೇದದಲ್ಲಿ ಹೇಳಿರುವ ಕರ್ಮಗಳನ್ನೂ ಸ್ಮೃತ್ಯುಕ್ತವಾದ, ಎಂದರೆ ಸ್ಮೃತಿಗಳಲ್ಲಿ ಹೇಳಿರುವ ಧಾರ್ಮಿಕ ಕಾರ್ಯಗಳನ್ನೂ ಮಾಡುತ್ತಿದ್ದರು. ಆದ್ದರಿಂದ ಶ್ರೌತ ಮತ್ತು ಸ್ಮಾರ್ತ ಕರ್ಮಗಳು ಎಲ್ಲಾ ಬ್ರಾಹ್ಮಣರಿಗೆ ಸಮಾನ. ಇವರು ಸ್ಮಾರ್ತರು, ಅವರು ಸ್ಮಾರ್ತರಲ್ಲ ಎಂಬ ವಿಭಾಗ ಹಿಂದೆ ಇರಲಿಲ್ಲ. ಅವರವರು ಆರಾಧಿಸುವ ದೇವರನ್ನು ಆಶ್ರಯಿಸಿ ಶೈವರು, ವೈಷ್ಣವರು, ಶಾಕ್ತರು ಎಂದು ಆಗ ಕರೆಯುತ್ತಿದ್ದಿರಬಹುದು.

ದರ್ಶನಾಧಾರಿತವಾಗಿ ಹೇಳುವುದಾದರೆ, ಶ್ರೀ ಶಂಕರಾಚಾರ್ಯರು ಬೋಧಿಸಿದುದು ಅದ್ವೈತ, ಶ್ರೀರಾಮಾನುಜರು ಬೋಧಿಸಿದುದು ವಿಶಿಷ್ಟಾದ್ವೈತ, ಶ್ರೀ ಮಧ್ವಾಚಾರ್ಯರು ಬೋಧಿಸಿದುದು ದ್ವೈತ. ಆದುದರಿಂದ ಶಂಕರರ ಅನುಯಾಯಿಗಳು ಅದ್ವೈತಿಗಳು, ರಾಮಾನುಜರ ಅನುಯಾಯಿಗಳು ವಿಶಿಷ್ಟಾದ್ವೈತಿಗಳು, ಮಧ್ವರ ಅನುಯಾಯಿಗಳು ದ್ವೈತಿಗಳು. ಈಚೆಗೆ ಅದ್ವೈತಿಗಳನ್ನು ಸ್ಮಾರ್ತರೆಂದೂ, ವಿಶಿಷ್ಟಾದ್ವೈತಿಗಳನ್ನು ಶ್ರೀ ವೈಷ್ಣವರೆಂದೂ, ದ್ವೈತಿಗಳನ್ನು ಮಾಧ್ವರು ಅಥವಾ ವೈಷ್ಣವರೆಂದೂ ಗುರುತಿಸುವ ಪರಿಪಾಠ ಅಥವಾ ರೂಢಿ ಬಂದಿದೆ.

(ಸ್ಮಾರ್ತ) ಬ್ರಾಹ್ಮಣರೆಲ್ಲರೂ ಶಾಂಕರರು, ಎಂದರೆ ಶಂಕರಾಚಾರ್ಯರನ್ನು ಪರಮಗುರುಗಳೆಂದು ಭಾವಿಸುತ್ತಾರೆ. ವಿಷ್ಣು–ಶಿವ ಮುಂತಾದ ದೇವರುಗಳು ಪರಬ್ರಹ್ಮದ ನಾನಾ ಅಭಿವ್ಯಕ್ತರೂಪಗಳೆಂದು ಎಲ್ಲರನ್ನೂ ಪೂಜಿಸುತ್ತಾರೆ. ಸ್ಮಾರ್ತರಲ್ಲಿ ಹಲವು ಸಮುದಾಯಗಳಿವೆ. ಹೊಯ್ಸಳ ಕರ್ನಾಟಕ, ಸಂಕೇತಿ, ಮುಲಕನಾಡು, ಉಲುಚುಕಮ್ಮೆ, ಬಬ್ಬೂರು ಕಮ್ಮೆ, ಹವ್ಯಕ, ಸಿರಿನಾಡು, ಗೌಡ ಸಾರಸ್ವತ ಇತ್ಯಾದಿ, ಇತ್ಯಾದಿ. ಈ ಪಂಗಡಗಳು ಮತ್ತು ಉಪ ಪಂಗಡಗಳು ಏಕೆ ಹುಟ್ಟಿದುವು. ಇವರ ಭಾಷಾ ವೈವಿಧ್ಯ ಯಾವ ಸ್ವರೂಪದ್ದು, ಆಚಾರದಲ್ಲಿ ವೈಶಿಷ್ಟ್ಯವಿದೆಯೇ ಎಂಬ ಅನ್ವೇಷಣೆ ಸಂಕೀರ್ಣ, ಕುತೂಹಲ ಜನಕ, ಆದರೆ ಕಷ್ಟ. ಅನೇಕ ವಿದ್ವಾಂಸರು ಈ ಬಗೆಗೆ ಅಲ್ಲಲ್ಲಿ ಲೇಖನಗಳನ್ನು ಬರೆದಿದ್ದಾರೆ. ಕೆಲವು ಸಮುದಾಯಗಳ ಅಧ್ಯಯನಗಳು ಆಳ–ಅಗಲಗಳನ್ನು ಹೊಂದಿ ಅನುಕರಣೀಯವಾಗಿವೆ.

ಕರ್ನಾಟಕದಲ್ಲಿ ಸ್ಮಾರ್ತ ಬ್ರಾಹ್ಮಣರು

ಇದು 14.7.2024 ಭಾನುವಾರದಂದು ಮೈಸೂರಿನ ಗಾನಭಾರತಿ (ವೀಣೆ ಶೇಷಣ್ಣ ಭವನ)ದಲ್ಲಿ ಬಿಡುಗಡೆಯಾಗಲಿರುವ ಗ್ರಂಥದ ಹೆಸರು. ಇದು ಒಂದು ಬೃಹದ್ ಗ್ರಂಥ. ಕ್ರೌನ್ 1/4 ಅಳತೆಯಲ್ಲಿ ಸುಮಾರು ಆರುನೂರೈವತ್ತು ಪುಟಗಳ ಪರಿಮಿತಿಯನ್ನುಳ್ಳದ್ದು. ಇದರ ಸಂಪಾದಕರು ವಿಜ್ಞಾನ ಲೇಖಕರೆಂದು ವಿದ್ವ ವೃಂದದಲ್ಲಿ ಪ್ರಸಿದ್ಧರಾಗಿರುವ ಡಾ. ಟಿ.ಆರ್. ಅನಂತರಾಮು. ಈ ಗ್ರಂಥ ಎಷ್ಟು ಜನಪ್ರಿಯವಾಗಿದೆಯೆಂದರೆ 2023ರಲ್ಲಿ ಮೊದಲಿಗೆ ಪ್ರಕಟವಾಗಿ ಈಗ ಪರಿಷ್ಕೃತ ಆವೃತ್ತಿಯಾಗಿ ಮೂರನೆಯ ಮುದ್ರಣವನ್ನು ಕಂಡಿದೆ.

ಈ ಗ್ರಂಥದಲ್ಲಿರುವ ಲೇಖನಗಳನ್ನು ಬರೆದಿರುವವರೂ ಹೆಸರಾಂತವರು. ಶತಾವಧಾನಿ ಡಾ. ಆರ್. ಗಣೇಶ್, ಡಾ.ಎ.ವಿ. ಪ್ರಸನ್ನ, ಡಾ.ಎಸ್. ನಾಗರಾಜು ಮುಂತಾದವರು. ಒಟ್ಟು ಮೂವತ್ತಮೂರು ಅಮೂಲ್ಯ ಲೇಖನಗಳು ಇದರಲ್ಲಿವೆ. ಇದರ ವೈಶಿಷ್ಟ್ಯವನ್ನು ಕುರಿತು ಮುನ್ನುಡಿಯಲ್ಲಿ ನಾಡೋಜ ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿಗಳು ಹೀಗೆಂದಿದ್ದಾರೆ “ವಿಶೇಷವಾಗಿ ಪ್ರಾದೇಶಿಕವಾಗಿಯೂ, ಭಾಷಿಕವಾಗಿಯೂ ಹಿಂದೆ ಬೇರೆ ಬೇರೆ ನೆಲೆಗಳಲ್ಲಿ ವಾಸವಿದ್ದು, ಬೇರೆ ಬೇರೆ ಭಾಷಾ ಪ್ರಭೇದಗಳಲ್ಲಿ ವ್ಯವಹರಿಸುತ್ತಿದ್ದು ಮುಂದೆ ವಲಸೆ–ಮರು ವಲಸೆಗಳಲ್ಲಿ ಹರಡಿ ಬೆಳೆಯುತ್ತ, ಪರಸ್ಪರವಾಗಿ ಬೆರೆಯುತ್ತ, ಬೇರೆಯಾಗುತ್ತ ಈ ಸ್ಮಾರ್ತ ಬ್ರಾಹ್ಮಣ ಸಮುದಾಯ ವರ್ಧಿಸಿರುವುದು ತಿಳಿದ ಸಂಗತಿ. ಅದೊಂದು ಚೈತನ್ಯವಾಹಿನಿ. ಶ್ರದ್ಧೆ– ಆಚರಣೆಗಳಲ್ಲಿ, ಭಾಷೆ–ಭಣಿತಿಗಳಲ್ಲಿ ವ್ಯಕ್ತವಾಗುವ ವಿಶಿಷ್ಟ ವಿದ್ಯಮಾನಗಳ ಸಾಮಾನ್ಯ ಸ್ವರೂಪವನ್ನು ಗುರುತಿಸುವ, ದಾಖಲಿಸುವ ಒಂದು ಪ್ರಾಮಾಣಿಕ ಪ್ರಯತ್ನ ಇಲ್ಲಿ ನಡೆದಿದೆ”.

ಸಂಪಾದಕರಾದ ಡಾ. ಟಿ.ಆರ್. ಅನಂತರಾಮು ಅವರು ವಹಿಸಿರುವ ಶ್ರಮ ಬಹು ದೊಡ್ಡದು. ಅವರು ಎಷ್ಟು ವಿದ್ವಲ್ಲೇಖನಗಳನ್ನು ಪರಾಮರ್ಶಿಸಿದ್ದಾರೆ. ಎಷ್ಟು ಶಾಸನಗಳನ್ನು ಅವಲೋಕಿಸಿದ್ದಾರೆ ಎಂಬುದನ್ನು ನೋಡಿದಾಗ ಅವರಿಗೆ ತಲೆಬಾಗಬೇಕೆನಿಸುತ್ತದೆ. ವಿದ್ಯಾರಣ್ಯರ ಬಗೆಗೆ ಪರಶುರಾಮನ ಬಗೆಗೆ ಅವರು ಹೇಳಿರುವ ಮಾತುಗಳು ಗಮನಾರ್ಹ.

ಈ ಗ್ರಂಥದ ಲೇಖನಗಳನ್ನು ಓದುವಾಗ ಹೊಸ ವಿಷಯಗಳಿಂದ ನಮ್ಮ ಜ್ಞಾನ ಕಣಜವನ್ನು ತುಂಬಿಸಿಕೊಳ್ಳಬಹುದು. ನಾರಾಯಣ ಶಾನುಭಾಗರು ಹವ್ಯಕ ಬ್ರಾಹ್ಮಣರ ಬಗೆಗೆ ಬರೆದಿರುವ ಲೇಖನದಲ್ಲಿ ಅಪೂರ್ವ ಅನರ್ಘ್ಯ ವಿಷಯಗಳಿವೆ. ಕನ್ನಡದ ಒಂದು ಉಪಭಾಷೆ ಎನ್ನಬಹುದಾದ, ಹವ್ಯಕರು ಬಳಸುವ ಹವಿಗನ್ನಡದ ಬಗೆಗೆ ಈ ಲೇಖನದಲ್ಲಿ ಒಳ್ಳೆಯ ಮಾಹಿತಿ ಇದೆ. ಈ ಭಾಷೆಯಲ್ಲಿ ರಚಿತವಾದ ಸಾಹಿತ್ಯವೂ ಸ್ವಲ್ಪವಲ್ಲ. ಇದೇ ರೀತಿಯಾಗಿ ಚಿತ್ಪಾವನ ಬ್ರಾಹ್ಮಣ ಕುಟುಂಬಗಳು ಬಳಸುವ ಚಿತ್ಪಾವನೀ ಭಾಷೆ, ಸಂಕೇತಿ ಬ್ರಾಹ್ಮಣರ ಸಂಕೇತಿ ಭಾಷೆ ಮುಂತಾದವುಗಳ ಬಗೆಗೂ ಮಾಹಿತಿ ಈ ಗ್ರಂಥದಲ್ಲಿ ದೊರೆಯುತ್ತದೆ. ಚಿತ್ಪಾವನ ಬ್ರಾಹ್ಮಣರು ಪರಶುರಾಮನನ್ನು ಪೂಜಿಸುತ್ತಾರೆ. ಅವನಿಗಾಗಿ ಹಲವು ಗುಡಿಗಳನ್ನು ಕಟ್ಟಿದ್ದಾರೆ ಎಂಬ ಮಾಹಿತಿಯೂ ಎಂ. ದಿವಾಕರ ಡೋಂಗ್ರೆಯವರ ಲೇಖನದಲ್ಲಿ ಲಭ್ಯವಿದೆ. ವೆಲನಾಡು ಬ್ರಾಹ್ಮಣರು ಎಂಬ ಲೇಖನದಲ್ಲಿ ಶೃಂಗೇರಿಯ ಜಗದ್ಗುರುಗಳಾಗಿರುವ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು ವೆಲನಾಡು ಬ್ರಾಹ್ಮಣರು ಎಂಬ ಅಮೂಲ್ಯ ಮಾಹಿತಿ ಇದೆ. ಎಂ.ಗೋವಿಂದ ಪೈ ಅವರ ‘ನಮ್ಮ ಹಿರಿಯರನ್ನು ಕುರಿತು’ ಎಂಬ ಲೇಖನವು ಪಾಂಡಿತ್ಯ ಪೂರ್ಣವಾಗಿದೆ. ವೇದಗಳ ಸೂಕ್ತಗಳನ್ನೂ ಪುರಾಣ ಶ್ಲೋಕಗಳನ್ನೂ ಒಳಗೊಂಡಿದೆ.

ಸನಂದನ ಕರಣೀಕ ಅವರು ಬರೆದಿರುವ ‘ವಂಗಿಪುರಂ ಬ್ರಾಹ್ಮಣರು’ ಎಂಬ ಲೇಖನ ಪಂಪ ಮಹಾಕವಿಯ ಬಗೆಗೆ ಮತ್ತು ತುಮಕೂರು ಜಿಲ್ಲೆಯ ಸೀಬಿ ಎಂಬ ಗ್ರಾಮದಲ್ಲಿರುವ ನರಸಿಂಹಸ್ವಾಮಿ ದೇವಾಲಯದ ಬಗೆಗೆ ಸ್ವಾರಸ್ಯಪೂರ್ಣ ವಿಷಯಗಳನ್ನು ತಿಳಿಸುತ್ತದೆ. ಈ ನರಸಿಂಹ ದೇವಾಲಯದ ನಿರ್ಮಾತೃ ವಂಗಿಪುರಂ ಸ್ಮಾರ್ತ ಬ್ರಾಹ್ಮಣ ಕರಣಿಕ ನಲ್ಲಪ್ಪನವರಂತೆ. ಈ ನಲ್ಲಪ್ಪನವರು ಹೈದರಾಲಿಯ ಕಾಲದಲ್ಲಿ ಫೌಜುದಾರರಾಗಿದ್ದರಂತೆ. 1784 ರಲ್ಲಿ ಇವರು ಹೈದರಾಲಿಯ ಜೀವನ ಚರಿತ್ರೆಯಾದ ‘ಹೈದರ್‌ನಾಮಾ’ ಎಂಬ ಗ್ರಂಥವನ್ನು ರಚಿಸಿದವರು. ಮೈಸೂರಿನ ಶಿವರಾಮಪೇಟೆಯಲ್ಲಿರುವ ನಲ್ಲಪ್ಪ ಠಾಣಾ ಪೊಲೀಸ್ ಸ್ಟೇಷನ್ನಿಗೆ ಆ ಹೆಸರು ಬರಲು ಕಾರಣ ವಂಗಿಪುರಂ ಸ್ಮಾರ್ತ ಬ್ರಾಹ್ಮಣ ನಲ್ಲಪ್ಪ ಎಂಬುದೂ ಇಲ್ಲಿ ನಮೂದಿತವಾಗಿದೆ. ಕನ್ನಡ ನಾಟಕಗಳನ್ನು ಬರೆದ ಬೆಳ್ಳಾವೆ ನರಹರಿ ಶಾಸ್ತ್ರಿಗಳೂ ಈ ಸಮುದಾಯದವರು. ಬೆಳ್ಳಾವೆ ವೆಂಕಟ ನಾರಣಪ್ಪನವರು ಕನ್ನಡ ಸಾಹಿತ್ಯಕ್ಕೆ ಅಪಾರ ಸೇವೆ ಸಲ್ಲಿಸಿದವರು. ಜೀವವಿಜ್ಞಾನ ಎಂಬ ಗ್ರಂಥವನ್ನು 1934ರಲ್ಲಿ ರಚಿಸಿದರಂತೆ.


ಕೆ.ಎನ್. ಸೂರ್ಯಪ್ರಕಾಶ್‌ರಾವ್ ಅವರು “ಆರುವೇಲು ನಿಯೋಗಿಗಳು: ಒಳನೋಟ” ಎಂಬ ಉತ್ತಮ ಲೇಖನವನ್ನು ಕೊಟ್ಟಿದ್ದಾರೆ. “ಆರುವೇಲು ನಿಯೋಗಿ ಬ್ರಾಹ್ಮಣರು ರಾಜರಾಗಿ, ಮಂತ್ರಿಗಳಾಗಿ, ದಂಡನಾಯಕರಾಗಿ, ಕವಿಗಳಾಗಿ ಪ್ರಖ್ಯಾತಿ ಹೊಂದಿದವರು” ಎಂದು ಅವರು ಹೇಳಿದ್ದಾರೆ. ಇವರ ಲೇಖನದಲ್ಲಿ ಅನೇಕ ತೆಲುಗು ಪದ್ಯಗಳನ್ನೂ ಉದಾಹರಿಸಿದ್ದಾರೆ. ತೆಲುಗು ಸಾಹಿತ್ಯದ ಮೇರು ಶಿಖರಗಳೆಂದು ಪರಿಗಣಿಸಲಾಗುವ ನನ್ನಯಭಟ್ಟಾರಕ, ತಿಕ್ಕನ, ಎರ್ರಪ್ರಗಡ ಎಂಬ ಕವಿತ್ರಯರು, ಕವಿಸಾರ್ವಭೌಮ ಶ್ರೀನಾಥ, ಆಂಧ್ರ ಭಾಗವತವನ್ನು ರಚಿಸಿದ ಪೋತನ–ಇವರೆಲ್ಲ ಆರುವೇಲು ನಿಯೋಗಿಗಳೆಂಬ ಮಾಹಿತಿ ಇಲ್ಲಿ ದೊರಕುತ್ತದೆ.

ಉಲುಚು ಕಮ್ಮೆ ಬ್ರಾಹ್ಮಣರನ್ನು ಕುರಿತು ಡಾ. ಎಸ್. ನಾಗರಾಜು ಅವರು ಮತ್ತು ಆಕಾಶ್ ಬಾಲಕೃಷ್ಣ ಅವರು ಸಪ್ರಮಾಣವಾದ ಲೇಖನಗಳನ್ನು ಒದಗಿಸಿದ್ದಾರೆ. ಡಾ.ಎ.ವಿ. ಪ್ರಸನ್ನ ಅವರು ‘ಬಬ್ಬೂರು ಕಮ್ಮೆ ಬ್ರಾಹ್ಮಣರು’ ಎಂಬ ಲೇಖನವನ್ನು ಗಂಭೀರ ಶೈಲಿಯಲ್ಲಿ ಬರೆದಿದ್ದಾರೆ.

ಪ್ರಸ್ತುತ ಗ್ರಂಥದಲ್ಲಿರುವ ಎಲ್ಲ ಲೇಖನಗಳೂ ಉತ್ತಮವಾಗಿವೆ. ಪ್ರತಿಯೊಂದು ಲೇಖನವನ್ನು ಉದ್ಧರಿಸಿ ಹೇಳಲು ಈ ಲೇಖನದಲ್ಲಿ ಸಾಧ್ಯವಾಗದು. ಆಸಕ್ತ ಓದುಗರು ಗ್ರಂಥವನ್ನೇ ಓದಿ ರಸಗ್ರಹಣ ಮಾಡಬೇಕು. ಗ್ರಂಥದ ಕೊನೆಯಲ್ಲಿ ಕೊಟ್ಟಿರುವ ಅನುಬಂಧಗಳು ಜಿಜ್ಞಾಸುಗಳಿಗೆ ಉಪಕಾರಕಗಳಾಗಿವೆ. ವಿಶೇಷತಃ ಗೋತ್ರಪ್ರವರ ವಿವರಣೆಗಳು ಅತ್ಯಂತಾನುಕೂಲವಾಗಿವೆ. ಆಮೇಲೆ ಸಚಿತ್ರವಾಗಿ ಲೇಖಕರ ಪರಿಚಯವನ್ನು ಕೊಟ್ಟಿರುವುದು ಶ್ಲಾಘನೀಯವಾಗಿದೆ.

ಸಂಪಾದಕರಾದ ಡಾ. ಟಿ.ಆರ್. ಅನಂತರಾಮು ಅವರಿಗೆ ಎಲ್ಲ ಸ್ಮಾರ್ತ ಬ್ರಾಹ್ಮಣರ ಹಾರ್ದ ಕೃತಜ್ಞತೆಯು ಸಲ್ಲುತ್ತದೆ. ಅವರು ಸಂಸ್ಕೃತಿ ಪ್ರೇಮವನ್ನೂ ವೈಜ್ಞಾನಿಕ ದೃಷ್ಟಿಯನ್ನೂ ಗ್ರಥನಕೌಶಲವನ್ನೂ ಮಥನನೈಪುಣ್ಯವನ್ನೂ ಪಡೆದವರು. ಇಂತಹ ಶ್ರೇಷ್ಠ ವಿದ್ವತ್ಕಾರ್ಯವನ್ನು ಅವರು ದೀರ್ಘಕಾಲ ಮಾಡುವಂತಾಗಲೆಂದು ಹಾರೈಸುತ್ತೇನೆ. ಸುಂದರವಾಗಿ, ಬಂಧುರವಾಗಿ ಗ್ರಂಥವನ್ನು ಪ್ರಕಟಿಸಿರುವ ಬೆಂಗಳೂರಿನ ಹರಿವು ಬುಕ್ಸ್ ಸಂಸ್ಥೆಗೂ ನನ್ನ ಅಭಿನಂದನೆಗಳು.

ವಾರಭವಿಷ್ಯ



14.7.2024 ರಿಂದ 20.7.2024

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಮಿಥುನ, ಕಟಕ, ಚಂದ್ರ–ಕನ್ಯಾ, ತುಲಾ, ವೃಶ್ಚಿಕ, ಧನುಸ್ಸು, ಕುಜ–ಮಿಥುನ, ಬುಧ–ಕಟಕ, ಗುರು–ವೃಷಭ, ಶುಕ್ರ–ಕಟಕ, ಶನಿ–ಕುಂಭ, ರಾಹು–ಮೀನ ಮತ್ತು ಕೇತು–ಕನ್ಯಾ

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, ‘ಭಾವಸಾರ ರತ್ನ’
‘ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು’
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಈ ವಾರದಲ್ಲಿ ನಿಮ್ಮ ಆರ್ಥಿಕ ಪರಿಸ್ಥಿತಿಯು ಗಣನೀಯವಾಗಿ ಸುಧಾರಿಸುವುದು. ಇದಕ್ಕಾಗಿ ನಿಮ್ಮ ಪರಿಶ್ರಮವನ್ನು ಹೆಚ್ಚಿಸುವ ಅಗತ್ಯವಿದೆ. ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ಚೆನ್ನಾಗಿ ನಡೆಯಲಿ. ಸಿಮೆಂಟು, ಕಬ್ಬಿಣ, ಸಾಮಿಲ್ ವ್ಯವಹಾರಿಗಳಿಗೆ ಉತ್ತಮ ಧನಲಾಭವಾಗಲಿದೆ. ನಿಮ್ಮ ಮೆದುಳು ಹಾಗೂ ಶರೀರಕ್ಕೆ ವಿಶ್ರಾಂತಿ ನೀಡಲು ಪ್ರಯತ್ನಿಸಿ. ಸರ್ಕಾರದಿಂದ ಸಹಾಯ ದೊರಕುವುದು.

ಶ್ರೀ ಗಣಪತಿ ಪ್ರಾರ್ಥನೆ. ಶುಭ ಸಂಖ್ಯೆ–7

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ನಾನಾ ಮಾರ್ಗಗಳಿಂದ ಹಣ ಸಂಚಿತವಾದರೂ ಮಾನಸಿಕ ಅಸ್ಥಿರತೆ ಕಾಡುವುದು. ವಿದ್ಯಾರ್ಥಿಗಳು ಅನ್ಯ ವಿಷಯದ ಕಡೆ ಗಮನ ನೀಡುವರು. ಅನ್ಯ ಸ್ತ್ರೀಯರನ್ನು ಗೌರವದಿಂದ ಕಾಣಿ. ಅನ್ಯತಾ ತೊಂದರೆ ಎದುರಿಸಬೇಕಾಗುವುದು. ಗುರುದೇವ ಶುಭರಿಲ್ಲ, ಯಾರೊಡನೆಯೂ ದ್ವೇಷ ಸಾಧಿಸದೆ ಉಪಾಯದಿಂದ ಪಾರಾಗುವ ಬಗ್ಗೆ ಚಿಂತಿಸಿ, ಹೊರಗಡೆ ಓಡಾಡುವಾಗ ಎಚ್ಚರಿಕೆಯಿಂದಿರಿ.

ಶ್ರೀಚಾಮುಂಡೇಶ್ವರಿ ಅರ್ಚನೆ. ಶುಭ ಸಂಖ್ಯೆ–3

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಮುನ್ನಡೆಯುವ ಮುನ್ನ ಯೋಚಿಸಿ ಮುಂದಡಿ ಇಡಿ. ಬಂಧು ವರ್ಗದವರಿಂದ ಬೇಸರದ ಸನ್ನಿವೇಶಗಳು ಉಂಟಾದೀತು. ವಾರ ಮಧ್ಯೆ ಸಂಕಲ್ಪಿತ ಕಾರ್ಯಗಳು ಸಿದ್ಧಿಸುತ್ತವೆ. ಶರೀರಾರೋಗ್ಯಭಾಗ್ಯ ಉಂಟಾಗಲಿದೆ. ಸಜ್ಜನರ ಸಹವಾಸ ಹಾಗೂ ಪುಣ್ಯ ಕಾರ್ಯಾಚರಣೆ. ಅಪ್ರಾಮಾಣಿಕ ಕೆಲಸಗಳಿಂದ ಮನಸ್ಸಿಗೆ ಅಶಾಂತಿ. ಚಾಡಿಕೋರರಿಂದ ತೊಂದರೆಗೆ ಒಳಪಡುವಿರಿ.

ಶ್ರೀವಿಷ್ಣುನಾಮ ಸ್ಮರಣೆ. ಶುಭ ಸಂಖ್ಯೆ–1.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ಹೊಸ ವ್ಯವಹಾರಗಳನ್ನು ಕುದುರಿಸಿಕೊಳ್ಳಲು ನಿಮ್ಮ ರಾಶಿ ಮಿತ್ರ ಬೃಹಸ್ಪತಿಯ ಕೃಪಾಕಟಾಕ್ಷವಿದೆ. ವಿದ್ಯಾ ಸಾಧನೆಯಲ್ಲಿ ಗೌರವ ಪ್ರಾಪ್ತಿ. ಪ್ರೇಮ–ಪ್ರಣಯ ವಿಚಾರಗಳು ವಿವಾಹದ ಕಡೆಗೆ ಮುಖ ಮಾಡಬಹುದು. ಆಪ್ತೇಷ್ಟರ ಮಿಲನ, ಸಂತೋಷ ಕೂಟಗಳು ನಡೆಯುವುದು. ಮನೆಗೆ ಅತಿಥಿ, ಅಭ್ಯಾಗತರ ಆಗಮನವಾಗುವುದು. ಅವರ ಉಪಚಾರಕ್ಕೆ ಧಾರಾಳ ಹಣ ವ್ಯಯವಾಗುವುದು. ಆಫೀಸಿನಲ್ಲಿ ಸಹೋದ್ಯೋಗಿಗಳು ಪಿತೂರಿ ನಡೆಸುವರು.

ಶ್ರೀ ಗುರುರಾಯರ ದರ್ಶನ. ಶುಭ ಸಂಖ್ಯೆ–5

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

‘ನಾಳೆ ಎನ್ನುವುದು ಹಾಳು’. ಕೆಲವೊಂದು ಸಂಗತಿಗಳು ನಿಮ್ಮ ತುರ್ತು ತೀರ್ಮಾನಕ್ಕೆ ಕಾಯುತ್ತಿವೆ. ನಿಮ್ಮ ಶ್ರಮ ಹಾಗೂ ಪ್ರತಿಭೆಗೆ ತಕ್ಕಂತೆ ಧನ ಸಂಚಯವಾಗುತ್ತದೆ. ಆದರೆ ಈ ಸಮಯದಲ್ಲಿ ಹೆಚ್ಚಿನ ಹಣ ವ್ಯಯವಾಗುತ್ತದೆ. ನಿಮ್ಮ ತೆರೆದ ಕೈಯ್ಯನ್ನು ನಿಯಂತ್ರಿಸಬೇಕು. ಸರ್ಕಾರಿ ಅಧಿಕಾರಿಗಳ ಸಮಯೋಚಿತ ಸಹಾಯ ದೊರಕುತ್ತದೆ. ಯಾವುದೇ ದೀರ್ಘ ಪ್ರವಾಸಗಳನ್ನು ಮಾಡುವುದು ಉಚಿತವಲ್ಲ.

ಶ್ರೀ ಶನಿಮಹಾತ್ಮ ಓದಿ. ಶುಭ ಸಂಖ್ಯೆ–4

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಭಾಗ್ಯ ಸ್ಥಾನದಲ್ಲಿ ಗುರು ಸಂಚಾರವಿದ್ದು ಮನೋವಾಂಛಿತ ಫಲಗಳನ್ನು ಪಡೆಯುವಿರಿ. ನಿರೀಕ್ಷಿತ ಹಣ ಅಥವಾ ಸಾಲ ಕೈ ಸೇರುವುದು. ಸಭೆ, ಸಮಾರಂಭಗಳಲ್ಲಿ ಭಾಗವಹಿಸಿ ಸನ್ಮಾನಕ್ಕೆ ಭಾಜನರಾಗುವಿರಿ. ಹಲವರಿಗೆ ಪುತ್ರ ಸಂತಾನದ ಸಂಭ್ರಮ ಉಂಟಾದೀತು. ವಸ್ತು, ವಾಹನ, ಚಿನ್ನಾಭರಣ ಖರೀದಿ, ವಿದ್ಯಾರ್ಥಿಗಳಿಗೆ ಶುಭ ಸಮಾಚಾರವಿದೆ. ಸ್ತ್ರೀಯರು ಕಳ್ಳಕಾಕರಿಂದ ಎಚ್ಚರವಿರಿ.

ಶ್ರೀ ಸತ್ಯನಾರಾಯಣ ಸೇವೆ. ಶುಭ ಸಂಖ್ಯೆ–8

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ವಾರದ ಆದಿಗೆ ಹಿತ ಶತ್ರುಗಳ ಕಾಟದ ಹೊರತಾಗಿಯೂ ನಿಮ್ಮ ಪೂರ್ವಯೋಜಿತ ಕಾರ್ಯಗಳು ಸಾಕಾರವಾಗುವುದು. ವನಿತಾಮಣಿಯರು ವಿಲಾಸಿ ವಸ್ತುಗಳನ್ನು ಖರೀದಿಸುವರು. ಉದ್ಯೋಗ, ವ್ಯವಹಾರಗಳಲ್ಲಿ ಶುಭ ಫಲಗಳನ್ನು ನಿರೀಕ್ಷಿಸಬಹುದು. ರಾಹು–ಕೇತುಗಳು ಬಾಧಕ–ಮಾರಕ ಸ್ಥಾನದಲ್ಲಿದ್ದು ನಿಮ್ಮ ಗೌರವಕ್ಕೆ ಕುಂದುಂಟಾಗಬಹುದು. ವಾಹನಾಪಘಾತದಿಂದ ಜಾಗೃತರಾಗಿರಿ.

ಶ್ರೀ ಲಕ್ಷ್ಮೀ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–2

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ

ವಾರದಾರಂಭಕ್ಕೆ ಆಶಾದಾಯಕ ಘಟನೆಗಳು ನಡೆಯಲಿವೆ. ಹಣಕಾಸಿನ ಪರಿಸ್ಥಿತಿಯಲ್ಲಿ ಗಣನೀಯ ಸುಧಾರಣೆಯನ್ನು ಕಾಣುವಿರಿ. ಆಸ್ತಿ ಖರೀದಿ ವಿಷಯದಲ್ಲಿ ಉಂಟಾಗಿದ್ದ ಅಡಚಣೆಗಳು ನಿವಾರಣೆ ಆಗುವುದು. ಹಲವರಿಗೆ ಹೊಸ ವಾಹನ ಮನೆಗೆ ಬರಲಿದೆ. ಸತಿ–ಪತಿಯರಲ್ಲಿ ಉಂಟಾಗಿದ್ದ ಅನುಮಾನ ನಿವಾರಣೆ ಆಗುವುದು. ವಾರದ ಕಡೆಗೆ ಗುರು ಜನರ ಭೇಟಿ ಶುಭ ಫಲವನ್ನು ತರುವುದು.

ಶ್ರೀ ನೃಸಿಂಹ ಕರಾವಲಂಬನ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–6

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಗ್ರಹಗಳ ಸಹಕಾರ ಕಡಿಮೆ ಇದೆ. ಎಲ್ಲಾ ಕಾರ್ಯಗಳನ್ನು ಅಳೆದು ತೂಗಿ ಮಾಡಿ ಸಾಲ ಮಾಡಬೇಕಾದ ಪರಿಸ್ಥಿತಿ ಬರುವುದು. ಕುಟುಂಬ ಸದಸ್ಯರ ಅನುಮಾನಕ್ಕೆ ಗುರಿಯಾಗುವಿರಿ. ಎಲ್ಲರನ್ನೂ ನಂಬಿ ಮೋಸ ಹೋಗದಿರಿ. ಸರ್ಕಾರಿ ನೌಕರರು ತನಿಖಾ ಸಂಸ್ಥೆಗಳ ಉಪಟಳದಿಂದ ನಲುಗುವರು. ವಾರಾಂತ್ಯಕ್ಕೆ ನೂತನ ವಸ್ತು, ವಾಹನ ಮನೆಗೆ ಬರುವುದು. ಚೆಲುವೆಯರ ಸಂಗದಿಂದ ಮನಸ್ಸಿಗೆ ಹರುಷ.

ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–5

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ವಾರದಾರಂಭಕ್ಕೆ ಹೋಟೆಲ್ ಹಾಗೂ ಟ್ರಾವೆಲ್ ಏಜೆನ್ಸಿಯವರಿಗೆ ಉತ್ತಮ ಧನ ಸಂಚಯವಾಗುತ್ತದೆ. ವನಿತಾಮಣಿಯರು ಶೃಂಗಾರ ಸಾಧನಗಳಿಗೆ ಹೆಚ್ಚಿನ ಹಣ ವ್ಯಯಿಸುವರು. ಇತರರು ನಿಮ್ಮ ವೈಯಕ್ತಿಕ ವಿಚಾರಗಳಲ್ಲಿ ತಲೆ ಹಾಕಿ ಕಿರಿಕಿರಿ ಎನಿಸುವುದು. ‘ಆರೋಗ್ಯವೇ ಭಾಗ್ಯ’ ಜ್ವರ ಮೈ ಕೈ ನೋವು ಕಾಡಬಹುದು. ಸಂಚಾರಿ ನಿಯಮ ಮೀರಿ ಸರ್ಕಾರಕ್ಕೆ ದಂಡ ಕಟ್ಟುವಿರಿ.

ಶ್ರೀ ಶನಿಚಾಲೀಸ ಪಠಿಸಿ. ಶುಭ ಸಂಖ್ಯೆ–9

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಮಿತವಾಗಿ ಬಾಳಿದರೆ, ಹಿತವಾದದ್ದು ಫಲಿಸುತ್ತದೆ. ಈ ವಾರ ನಿಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು. ಹಿಂದೆ ಮಾಡಿದ್ದ ವಹಿವಾಟುಗಳು ಈಗ ಪ್ರಯೋಜನವನ್ನು ನೀಡಲಿದೆ. ನಿಮ್ಮ ವಿರೋಧಿಗಳೆಂದು ಭಾವಿಸಿದ್ದವರ ಜೊತೆ ಉಂಟಾಗಿದ್ದ ಕೆಟ್ಟ ಅನುಭವಗಳನ್ನು ಮರೆತು ಸಕಾರಾತ್ಮಕ ದೃಷ್ಟಿ ಬೆಳೆಸಿದಲ್ಲಿ ಭವಿಷ್ಯದಲ್ಲಿ ಒಳ್ಳೆಯದಾಗಲಿದೆ. ಜಲಾಶಯ, ಜಲಪಾತಗಳ ಹತ್ತಿರ ಹುಡುಗಾಟ ಕೂಡದು.

ಶ್ರೀವೆಂಕಟೇಶ್ವರ ಅರ್ಚನೆ. ಶುಭ ಸಂಖ್ಯೆ–3

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ವಾರದಾರಂಭಕ್ಕೆ ತುಂಬಾ ಕೆಲಸದ ಒತ್ತಡವಿರುತ್ತದೆ. ಕೆಲಸ ಮತ್ತು ವಿರಾಮದ ನಡುವೆ ಸಮತೋಲನವಿರಲಿ ಅನ್ಯಥಾ ಆರೋಗ್ಯ ಹದಗೆಡುವುದು. ಆದಾಯಕ್ಕಿಂತ ಹೆಚ್ಚು ಖರ್ಚು–ವೆಚ್ಚಗಳು ಹೆಚ್ಚಾಗಿ ಸಾಲ ಮಾಡಬೇಕಾದ ಪರಿಸ್ಥಿತಿ ಎದುರಾಗುವುದು. ಉನ್ನತ ಶಿಕ್ಷಣಕ್ಕಾಗಿ ವಿದೇಶಕ್ಕೆ ಹೋಗಲು ಬಯಸುವ ವಿದ್ಯಾರ್ಥಿಗಳಿಗೆ ಗ್ರಹಾನುಕೂಲವಿದೆ. ನದಿ, ಸಮುದ್ರಗಳ ಹತ್ತಿರ ಜಾಗರೂಕರಾಗಿರಿ.

ಶ್ರೀ ಶಿವಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–4

ಮಕ್ಕಳ ಚಿತ್ರಕಥೆ: ‘ಆ ಪುಟ್ಟ ಬಾಲಕ ಏನು ಹೇಳಿದ ಗೊತ್ತೇ...?’

■ ಹೆಚ್.ಜಿ.ಎನ್.ಪ್ರಸಾದ್



ಒಂದು ನಗರದಲ್ಲಿ ಮದ್ಯದಂಗಡಿ (ಬಾರ್) ಇತ್ತು.




ಆ ಬಾರ್‌ನಲ್ಲಿ ಪುಟ್ಟ ಬಾಲಕನೊಬ್ಬ ಕೆಲಸ ಮಾಡುತ್ತಿದ್ದ.




ಒಬ್ಬ ಕುಡುಕ ಆ ಬಾರ್‌ಗೆ ಬಂದನು.



ಆ ಕುಡುಕ ಬಾಲಕನನ್ನು ಕರೆದು, "ನೀನು ಇಲ್ಲೆಲ್ಲಾ ಬರುವುದು ಬೇಡ... ನೀನೂ ನನ್ನ ತರಹ ದೊಡ್ಡ ಕುಡುಕನಾಗಿಬಿಡುತ್ತೀಯಾ...!" ಎಂದ.



ಆಗ ಆ ಬಾಲಕ, "ನೀನೂ ಇನ್ನೇಲೆ ಇಲ್ಲಿ ಕುಡಿಯೋಕೆ ಬರಬೇಡ...... ನಾಳೆ ನಿನ್ನ ಮಗನೂ ನನ್ನ ಹಾಗೆ ಅಪ್ಪನಿಲ್ಲದೇ ಇಲ್ಲಿ ಕೆಲಸಕ್ಕೆ ಬರಬಹುದು...!" ಎಂದುಬಿಟ್ಟ



ಆ ಕುಡುಕನ ಹೃದಯ ನುಚ್ಚುನೂರಾಯಿತು.

ಮೈಸೂರು ಮಿತ್ರ ಭಾನುವಾರ 14 ಜುಲೈ 2024

ಕೇರಳದಲ್ಲಿ ಭಾರೀ ಮಳೆ: ಕಬಿನಿ ಜಲಾಶಯ ಭರ್ತಿ



ಕಬಿನಿ ಜಲಾಶಯದಿಂದ ನದಿಗೆ ನೀರನ್ನು ಬಿಡುತ್ತಿರುವುದು

ಹೆಚ್.ಡಿ.ಕೋಟೆ, ಜು.13– ಕೇರಳದ ವೈನಾಡಿನಲ್ಲಿ ಭಾರೀ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ತಾಲೂಕಿನಲ್ಲಿ ಬೀಚನಹಳ್ಳಿ ಗ್ರಾಮದಲ್ಲಿರುವ ಕಬಿನಿ ಜಲಾಶಯ ಸಂಪೂರ್ಣ ಭರ್ತಿಯಾಗಿದೆ ಎಂದು ಕಬಿನಿ ಸಹಾಯಕ ಕಾರ್ಯಪಾಲಕ ಅಭಿಯಂತರದ ಗಣೇಶ್ ತಿಳಿಸಿದ್ದಾರೆ.

ಒಟ್ಟು 2284 ಗರಿಷ್ಠ ಸಾಮರ್ಥ್ಯದ ಜಲಾಶಯದಲ್ಲಿ ಪ್ರಸ್ತುತ 2284 ಅಡಿ ನೀರು ಸಂಗ್ರವಾಗಿದೆ. ಜಲಾಶಯಕ್ಕೆ ಒಳಹರಿವು 20 ಸಾವಿರ ಕ್ಯೂಸೆಕ್ ಇದ್ದು, ಜಲಾಶಯದ ಭದ್ರತಾ ದೃಷ್ಟಿಯಿಂದ ಸುಭಾಷ್ ಕಬಿನಿ ಪವರ್ ಪ್ರಾಜೆಕ್ಟ್‌ನಿಂದ 3 ಕ್ಯೂಸೆಕ್ ಹಾಗೂ ಜಲಾಶಯದ 4 ಕ್ರಸ್ಟ್‌ಗೇಟ್ ಗಳಿಂದ ಒಟ್ಟು 17 ಸಾವಿರ ಕ್ಯೂಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದೆ ಎಂದರು.

ರಸ್ತೆ ಸಂಚಾರ ರದ್ದು: ಮುಂಜಾಗ್ರತಾ ಕ್ರಮವಾಗಿ ಜಲಾಶಯದಿಂದ ನದಿಗೆ ನೀರು ಹರಿಸುತ್ತಿರುವ ಹಿನ್ನೆಲೆಯಲ್ಲಿ ಜಲಾಶಯದ ಮುಂಭಾಗದ ಸೇತುವೆ ಮುಳುಗಡೆಯಾಗಿರುವ ಕಾರಣ ಸೇತುವೆ ಮೇಲೆ ಸಂಚಾರ ನಿರ್ಬಂಧ ಮಾಡಲಾಗಿದೆ. ಹೀಗಾಗಿ ಹ್ಯಾಂಡ್‌ಪೋಸ್ಟ್‌ನಿಂದ ಬಿದರ ಹಳ್ಳಿ, ತೆರಣಿ ಮಂಟಿ, ನಂಜನಾಥಪುರ, ಬಸಾಪುರ, ಉಯ್ಯಂಬಳ್ಳಿ, ಕಳಸೂರು, ಕೆಂಚನಹಳ್ಳಿ, ಕಾಳೇನಹಳ್ಳಿ, ಮೂರ್ ಬಾಂಡ್, ಗುಂಡನಮಾಳ, ಬೋರೆದೇವರ ಮುಂಟಿ, ಭೀಮನ ಕೊಲ್ಲಿ, ಎನ್.ಬೇಗೂರು, ಜಕ್ಕಳ್ಳಿ, ಬೀರಂಬಳ್ಳಿ, ಬ್ರಹ್ಮಗಿರಿ, ಗೆಂಡತ್ತೂರು ಕಡೆಗೆ ತೆರಳುವ ಸಾರ್ವಜನಿಕರು ದ್ವಿಚಕ್ರ ವಾಹನದಲ್ಲಿ ಜಲಾಶಯದ ಮೇಲಿನ ರಸ್ತೆಯಲ್ಲಿ ಸಂಚರಿಸಲು ವ್ಯವಸ್ಥೆ ಮಾಡಲಾಗಿದೆ ಎಂದರು.

ನದಿಗೆ ತೆರಳದಂತೆ ಮನವಿ: ಕೇರಳದಲ್ಲಿ ಭಾರೀ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಜಲಾಶಯಕ್ಕೆ ಹರಿದು ಬರುವ ಒಳಹರಿವಿನ ಪ್ರಮಾಣ ಹೆಚ್ಚಾಗುವ ಸಂಭವವಿದೆ. ಹೀಗಾಗಿ ಜಲಾಶಯದ ಸುರಕ್ಷತೆಗಾಗಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ನದಿಗೆ ಹರಿಸುವ ಸಾಧ್ಯತೆಗಳಿರುವುದರಿಂದ ನದಿ ಪಾತ್ರದ ಜನತೆ, ಮೀನುಗಾರರು, ಜಾನುವಾರು ಮೇಯಿಸುವವರು ನದಿ ಇಳಿಯಬಾರದು ಎಂದು ಮನವಿ ಮಾಡಿದರು.

ಬಸಾಪುರ ಗ್ರಾಮದ ನಿವಾಸಿ ತಿಮ್ಮ ನಾಯಕ ಮಾತನಾಡಿ, ಕಬಿನಿ ಜಲಾಶಯ ತುಂಬಿದರೆ ಜಲಾಶಯದ ಮುಂಭಾಗ ಇರುವ ಸೇತುವೆ ಸಂಪೂರ್ಣ ಮುಳುಗಿ ಹೋಗುತ್ತದೆ. ಹೀಗಾಗಿ ಈ ಭಾಗದ ಜನತೆ ತಮ್ಮ ಗ್ರಾಮಗಳಿಗೆ ತೆರಳಲು ಸಮಸ್ಯೆ ಎದುರಾಗಲಿದೆ. ಜಲಾಶಯದ ಮೇಲೆ ತೆರಳಲು ನೀರಾವರಿ ಇಲಾಖೆ ಅಧಿಕಾರಿಗಳು ಹಾಗೂ ಪೊಲೀಸರು, ದ್ವಿಚಕ್ರ ವಾಹನದಲ್ಲಿ ತೆರಳುವವರಿಗೆ ಮಾತ್ರ ಅವಕಾಶ ಮಾಡಿ ಕೊಡುತ್ತಾರೆ. ಬಡಜನತೆ ಸರ್ಕಾರಿ ಬಸ್ಸಿನಲ್ಲಿ ಬರುತ್ತೇವೆ. ಜಲಾಶಯದ ಮೇಲೆ ಸರ್ಕಾರಿ ಬಸ್‌ಗಳನ್ನು ಬಿಡುವುದಿಲ್ಲ. ಹೀಗಾಗಿ ನಾವು ಹೆಚ್.ಡಿ.ಕೋಟೆಯಿಂದ ಸರಗೂರು ಮಾರ್ಗವಾಗಿ ಬಳಸಿಕೊಂಡು ಬರಬೇಕಾಗಿದೆ ಎಂದರು.

ಜಲಾಶಯದ ಮುಂಭಾಗದ ಸೇತುವೆ ನಿರ್ಮಾಣ ಹಾಗೂ ಕಾಂಕ್ರೀಟ್ ರಸ್ತೆ ಕಾಮಗಾರಿಗೆ ಶಾಸಕ ಅನಿಲ್ ಅವರು 55 ಕೋಟಿ ಅನುದಾನ ತಂದು ಕಾಮಗಾರಿ ಆರಂಭಿಸಿದ್ದಾದರೂ, ಅಧಿಕಾರಿಗಳ ನಿರ್ಲಕ್ಷ್ಯದಿಂದ ಕಾಮಗಾರಿ ಆರಂಭವಾಗಿ 3 ವರ್ಷವಾದರೂ ಇನ್ನೂ ಮಂದಗತಿಯಲ್ಲಿ ನಡೆಯುತ್ತಿದೆ. ಇನ್ನಾದರೂ ಶಾಸಕರು ಈ ಬಗ್ಗೆ ಗಮನ ಹರಿಸಿ ನೂತನ ಸೇತುವೆ ಕಾಮಗಾರಿ ಪೂರ್ಣಗೊಳಿಸಬೇಕು ಎಂದು ಮನವಿ ಮಾಡಿದರು.

ರಾಜ್ಯಾದ್ಯಂತ 400 ಪಶು ವೈದ್ಯರ ನೇಮಕ: ಸಚಿವ ಕೆ.ವೆಂಕಟೇಶ್



ಕಂದೇಗಾಲದಲ್ಲಿ ಪಶು ಆಸ್ಪತ್ರೆಯನ್ನು ಸಚಿವ ಕೆ.ವೆಂಕಟೇಶ್ ಉದ್ಘಾಟಿಸಿದರು.

ನಂಜನಗೂಡು, ಜು.13– ರಾಜ್ಯದ ಪಶು ಚಿಕಿತ್ಸಾಲಯಗಳಲ್ಲಿ ವೈದ್ಯರ ಕೊರತೆ ಜೊತೆಗೆ ಕಟ್ಟಡದ ಕೊರತೆ ಎದುರಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ನಮ್ಮ ಮನವಿಗೆ ಸ್ಪಂದಿಸಿ ರಾಜ್ಯಾದ್ಯಂತ 400 ಪಶು ವೈದ್ಯರ ನೇಮಕಾತಿ ಜೊತೆಗೆ 200 ಪಶು ಚಿಕಿತ್ಸಾ ಕೇಂದ್ರಗಳಿಗೆ ಕಟ್ಟಡಗಳನ್ನು ಮಂಜೂರು ಮಾಡಿಕೊಟ್ಟಿದ್ದಾರೆ. ಈ ಪೈಕಿ ಮೈಸೂರು ಜಿಲ್ಲೆಗೆ 12 ಹೊಸ ಪಶು ಚಿಕಿತ್ಸಾ ಕಟ್ಟಡಗಳು ಮಂಜೂರಾಗಿವೆ ಎಂದು ಪಶು ಸಂಗೋಪನೆ ಮತ್ತು ರೇಷ್ಮೆ ಖಾತೆ ಸಚಿವ ಕೆ.ವೆಂಕಟೇಶ್ ತಿಳಿಸಿದರು.

ತಾಲೂಕಿನ ಕಂದೇಗಾಲ ಗ್ರಾಮದಲ್ಲಿ ಶನಿವಾರ ನೂತನ ಪಶುಚಿಕಿತ್ಸಾ ಆಸ್ಪತ್ರೆ ಉದ್ಘಾಟಿಸಿ ಮಾತನಾಡಿದ ಅವರು, ಶಾಸಕ ದರ್ಶನ್, ತಾಲೂಕಿನಲ್ಲಿ 3 ಪಶು ಚಿಕಿತ್ಸಾ ಆಸ್ಪತ್ರೆ ಆರಂಭಿಸಲು ಮನವಿ ಸಲ್ಲಿಸಿದ್ದರು. ಕಂದೇಗಾಲ ಕಾಡಂಚಿನ ಗ್ರಾಮವಾಗಿದ್ದು, ಜಾನುವಾರುಗಳಿಗೆ ಚಿಕಿತ್ಸೆ ಕೊಡಿಸಲು ರೈತರು ಹೆಡಿಯಾಲ ಪಶು ಆಸ್ಪತ್ರೆಗೆ ಬರಬೇಕಾಗಿತ್ತು. ಈ ಭಾಗದಲ್ಲಿ 2100ಕ್ಕೂ ಹೆಚ್ಚು ಜಾನುವಾರುಗಳಿದ್ದು, ಗ್ರಾಮಕ್ಕೆ ಪಶು ಚಿಕಿತ್ಸಾ ಕೇಂದ್ರದ ಅಗತ್ಯತೆ ಬಗ್ಗೆ ಇಲಾಖೆಗೆ ಮನವರಿಕೆಯಾಗಿತ್ತು. ಹೀಗಾಗಿ ರೈತರಿಗೆ ಅನುಕೂಲ ಕಲ್ಪಿಸುವ ಸಲುವಾಗಿ ವೈದ್ಯರು ಮತ್ತು ತಾಂತ್ರಿಕ ಸಿಬ್ಬಂದಿ, ಔಷಧಗಳ ಸಹಿತವಾಗಿ ನೂತನ ಪಶು ಆಸ್ಪತ್ರೆ ತೆರೆಯಲಾಗಿದೆ. ಮುಂದಿನ ದಿನಗಳಲ್ಲಿ ಚಿಕಿತ್ಸಾ ಕೇಂದ್ರಕ್ಕೆ ಸುಸಜ್ಜಿತ ಹೊಸ ಕಟ್ಟಡ ಮಂಜೂರು ಮಾಡಲಾಗುವುದು. ಅಲ್ಲದೇ ನಂಜನಗೂಡು ತಾಲೂಕಿನಲ್ಲಿ ಈ ವರ್ಷ ಮತ್ತೊಂದು ಪಶು ಚಿಕಿತ್ಸಾ ಆಸ್ಪತ್ರೆ ತೆರೆಯಲಾಗುವುದು ಎಂದು ಶಾಸಕ ದರ್ಶನ್ ಅವರಿಗೆ ಭರವಸೆ ನೀಡಿದ್ದೇನೆ ಎಂದರು.

ಶಾಸಕ ದರ್ಶನ್ ಮಾತನಾಡಿ, ಜಿಲ್ಲೆಯಲ್ಲಿ ಜಾನುವಾರುಗಳ ಚಿಕಿತ್ಸೆಗಾಗಿ ಆಂಬುಲೆನ್ಸ್ ಸೇವೆ ಆರಂಭಿಸಲಾಗಿದ್ದು, 1965ಕ್ಕೆ ಕರೆ ಮಾಡಿದರೆ ವೈದ್ಯರು ಮನೆ ಬಾಗಿಲಿಗೆ ಸಿಬ್ಬಂದಿಯೊಂದಿಗೆ ದೌಡಾಯಿಸಿ ಪಶುಗಳಿಗೆ ಚಿಕಿತ್ಸೆ ನೀಡಲಿದ್ದಾರೆ. ರೈತರು ಈ ಸೇವೆಯನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು. ತಾಲೂಕಿಗೆ 3 ಪಶು ವೈದ್ಯಕೀಯ ಕೇಂದ್ರಗಳ ಅಗತ್ಯವಿದೆ ಎಂದು ಸಚಿವರಿಗೆ ಮನವಿ ಮಾಡಿದ್ದೇನೆ. ಹಂತ–ಹಂತವಾಗಿ ಕೇಂದ್ರಗಳನ್ನು ಮಂಜೂರು ಮಾಡುವುದಾಗಿ ಭರವಸೆ ನೀಡಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಕಾಂಗ್ರೆಸ್ ವಕ್ತಾರ ಲಕ್ಷ್ಮಣ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಶ್ರೀಕಂಠನಾಯಕ, ಜಿಪಂ ಮಾಜಿ ಸದಸ್ಯ ಕೆ.ಮಾರುತಿ, ಗ್ರಾಪಂ ಅಧ್ಯಕ್ಷ ಹರೀಶ್ ಕುಮಾರ್, ಮುಖಂಡರಾದ ಅಭಿನಂದನ್ ಪಟೇಲ್, ಗೋವಿಂದರಾಜು, ಜಯರಾಮು, ಶಿವಕುಮಾರ್, ದೊರೆಸ್ವಾಮಿ ನಾಯಕ, ಸಂಘರಾಜು, ಪಶುಸಂಗೋಪನೆ ಇಲಾಖೆ ಜಿಲ್ಲಾ ಉಪ ನಿರ್ದೇಶಕ ಡಾ.ನಾಗರಾಜ್, ತಾಲೂಕು ಉಪ ನಿರ್ದೇಶಕ ಮಲ್ಲಿಕಾರ್ಜುನ್, ಪಶು ವೈದ್ಯಾಧಿಕಾರಿ ಶರಣಬಸಪ್ಪ, ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು ಉಪಸ್ಥಿತರಿದ್ದರು.

> ಪಶು ಸಂಗೋಪನಾ ಇಲಾಖೆ ಬರಗಾಲ ಪರಿಸ್ಥಿತಿಯಲ್ಲಿ ಜಾನುವಾರುಗಳಿಗೆ ಮೇವಿನ ಕೊರತೆ ಉಂಟಾಗದಂತೆ ಮುಂಜಾಗ್ರತೆ ವಹಿಸಿ, ರಾಜ್ಯಾದ್ಯಂತ 40 ಕೋಟಿ ವೆಚ್ಚದಲ್ಲಿ ರೈತರಿಗೆ ಮೇವಿನ ಬಿತ್ತನೆ ಬೀಜ ವಿತರಿಸಿದೆ. ಜಿಲ್ಲೆಯಲ್ಲಿ 87 ಸಾವಿರ ರೈತರಿಗೆ 1.9 ಲಕ್ಷ ಮೇವಿನ ಬಿತ್ತನೆ ಬೀಜದ ಕಿಟ್‌ಗಳನ್ನು ವಿತರಿಸಲಾಗಿತ್ತು. ಹೀಗಾಗಿ ಬರಗಾಲದ ಪರಿಸ್ಥಿತಿಯಲ್ಲಿ ಹಾಲಿನ ಉತ್ಪಾದನೆ ಹೆಚ್ಚಿದೆ. ರಾಜ್ಯದಲ್ಲಿ ಪಶು ವೈದ್ಯರ ಕೊರತೆ ನೀಗಿಸಲು 400 ಪಶು ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗುತ್ತಿದೆ.
> – **ಕೆ.ವೆಂಕಟೇಶ್,** ಸಚಿವ.

ಹಿರೀಕ್ಯಾತನಹಳ್ಳಿಯಲ್ಲಿ ಹಳೇ ವಿದ್ಯಾರ್ಥಿಗಳ ಸಂಘ ಉದ್ಘಾಟನೆ



ಹಿರೀಕ್ಯಾತನಹಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ ಹಳೇ ವಿದ್ಯಾರ್ಥಿಗಳ ಸಂಘ ಉದ್ಘಾಟಿಸಲಾಯಿತು

ಹಿರೀಕ್ಯಾತನಹಳ್ಳಿ, ಜು.13– ಹುಣಸೂರು ತಾಲೂಕಿನ ಹಿರೀಕ್ಯಾತನಹಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ ಹಳೇ ವಿದ್ಯಾರ್ಥಿಗಳ ಸಂಘ ಉದ್ಘಾಟಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಮುಖ್ಯ ಶಿಕ್ಷಕಿ ಸರಳ, ಶಾಲೆಯಲ್ಲಿ ಶಿಕ್ಷಕರ ಪಾತ್ರ ಎಷ್ಟು ಮುಖ್ಯವೋ, ಹಳೇ ಹಳೆ ವಿದ್ಯಾರ್ಥಿಗಳ ಪಾತ್ರವೂ ಅಷ್ಟೇ ಮುಖ್ಯ. ಹೀಗಾಗಿ ಸಂಘ ಪ್ರತಿ ತಿಂಗಳು ಸಭೆ ನಡೆಸಿ ಶಾಲೆಯಲ್ಲಿ ಯಾವ ನ್ಯೂನತೆಗಳಿವೆ ಎಂದು ಪಟ್ಟಿ ಮಾಡಿ ಅದಕ್ಕೆ ಪರಿಹಾರ ನೀಡುವ ಕಾರ್ಯ ಮಾಡಬೇಕಿದೆ. ಅಲ್ಲದೇ ವಾರ್ಷಿಕ ವರದಿ ಸಿದ್ಧಪಡಿಸಿಕೊಂಡು ಅಭಿವೃದ್ಧಿ ಕೆಲಸ ಮಾಡುವ ನಿಟ್ಟಿನಲ್ಲಿ ಯೋಜನೆ ರೂಪಿಸಿಕೊಳ್ಳುವುದು ಅತ್ಯಗತ್ಯ ಎಂದರು.

ಹಳೇ ವಿದ್ಯಾರ್ಥಿಗಳ ಸಂಘದಿಂದ ರಾಷ್ಟ್ರೀಯ ಹಬ್ಬಗಳ ಆಚರಣೆ, ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿ ಸನ್ಮಾನಿಸುವುದು, ಹಿಂದುಳಿದ ಮಕ್ಕಳ ಕಲಿಕೆಗೆ ಕಾರ್ಯಕ್ರಮ ರೂಪಿಸುವುದು, ಶಿಕ್ಷಕರು, ಮಕ್ಕಳ ದಿನಾಚರಣೆ ಆಚರಿಸುವುದು, ಸಾಧಕರನ್ನು ಕರೆದು ಸನ್ಮಾನಿಸುವುದು, ಮಕ್ಕಳ ಕಲಿಕೆಗೆ ಕಾಳಜಿ ತೋರದ ಪೋಷಕರಿಗೆ ಕಾರ್ಯಾಗಾರ ನಡೆಸಿ ಅವರಿಗೆ ಮಕ್ಕಳ ವಿದ್ಯಾಭ್ಯಾಸದ ಪ್ರಾಮುಖ್ಯತೆ ಬಗ್ಗೆ ತಿಳಿಸಿಕೊಡುವುದು ಸೇರಿದಂತೆ ಇನ್ನಿತರ ಕಾರ್ಯಗಳನ್ನು ಕೈಗೊಳ್ಳುವಂತೆ ಸಂಘದ ಪದಾಧಿಕಾರಿಗಳಿಗೆ ಕಿವಿಮಾತು ಹೇಳಿದರು.

ಹಳೇ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷರಾಗಿ ಜಗದೀಶ್, ಗೌರವಾಧ್ಯಕ್ಷ ಸುರೇಶ್, ಉಪಾಧ್ಯಕ್ಷ ಸತೀಶ್, ಕಾರ್ಯದರ್ಶಿ ಕುಮಾರ್, ಖಜಾಂಚಿಗಳಾಗಿ ಪತ್ರಕರ್ತ ಸ್ವಾಮಿಗೌಡ, ಹರೀಶ್, ಉಪ ಕಾರ್ಯದರ್ಶಿ ಮಹದೇವ್, ನಿರ್ದೇಶಕರಾಗಿ ಶಿಕ್ಷಕ ಮಹೇಶ್, ಯೋಗೇಂದ್ರ, ಡೈರಿ ಮಹೇಶ್, ಎಸ್‌ಡಿಎಂಸಿ ಅಧ್ಯಕ್ಷ ಪುಟ್ಟರಾಜು, ನಿರ್ದೇಶಕರಾದ ಸಂಪತ್, ಅಶೋಕ್, ಸಹ ಶಿಕ್ಷಕರಾದ ಮಹೇಶ್, ಚಿಕ್ಕಣ್ಣ, ಮಮತ, ಬೀರನಾಯಕ, ಅಯ್ಯಪ್ಪ, ಶಿಲ್ಪ, ಡಯಾನ ಟೆಲ್ಲಿಸ್, ಭಾರತಿ ಲಟ್ಟಿ, ಸುನಿಲ್ ಹಾಗೂ ಪೋಷಕರು, ವಿದ್ಯಾರ್ಥಿಗಳು ಹಾಜರಿದ್ದರು.

ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಗಣ್ಯರಿಗೆ ಸನ್ಮಾನ



ಸುದ್ದಿಗೋಷ್ಠಿಯಲ್ಲಿ ಡಾ.ಬಾಬು ಜಗಜೀವನ್ ರಾಂ ಸಂಘದ ಅಧ್ಯಕ್ಷ ಸಿ.ಪುಟ್ಟಯ್ಯ ಮಾತನಾಡಿದರು.

ತಿ.ನರಸೀಪುರ, ಜು.13– ತಾಲೂಕಿನ ಡಾ.ಬಾಬು ಜಗಜೀವನ್ ರಾಂ ಸಂಘದ ವತಿಯಿಂದ ಕಳೆದ ಶೈಕ್ಷಣಿಕ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಗಣ್ಯರನ್ನು ಸನ್ಮಾನಿಸಲು ಸಮಾರಂಭ ಆಯೋಜಿಸಲು ನಿರ್ಧರಿಸಲಾಗಿದೆ ಎಂದು ಅಧ್ಯಕ್ಷ ಸಿ.ಪುಟ್ಟಯ್ಯ ತಿಳಿಸಿದರು.

ಪಟ್ಟಣದ ಲೋಕೋಪಯೋಗಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕು ಡಾ.ಬಾಬು ಜಗಜೀವನ್ ರಾಂ ಸಂಘದ ಚಟುವಟಿಕೆಗಳನ್ನು ಕ್ರಿಯಾತ್ಮಕಗೊಳಿಸುವ ನಿಟ್ಟಿನಲ್ಲಿ ಸಮುದಾಯದ ಯುವ ನಾಯಕ, ಚಿತ್ರನಟ ಆರ್.ಅರ್ಜುನ್ ರಮೇಶ್ ಅವರ ನೇತೃತ್ವದಲ್ಲಿ ಪ್ರತಿಭಾ ಪುರಸ್ಕಾರ ಹಾಗೂ ವಿವಿಧ ಗಣ್ಯರನ್ನು ಸನ್ಮಾನಿಸಲು ತೀರ್ಮಾನಿಸಲಾಗಿದೆ. ಸದ್ಯದಲ್ಲೇ ಕಾರ್ಯಕ್ರಮದ ದಿನಾಂಕ ನಿಗದಿಪಡಿಸಲಾಗುವುದು ಎಂದರು.

ತಾಲೂಕಿನ ಮಾದಿಗ ಸಮುದಾಯದ ಪ್ರತಿಭಾನ್ವಿತ ವಿದ್ಯಾರ್ಥಿಗಳು ನಿಗದಿತ ಅರ್ಜಿಯೊಂದಿಗೆ ಅಂಕಪಟ್ಟಿಯ ಜೆರಾಕ್ಸ್ ಪ್ರತಿಯನ್ನು ಸಂಘದ ಅಧ್ಯಕ್ಷರು ಅಥವಾ ಪ್ರಧಾನ ಕಾರ್ಯದರ್ಶಿಯವರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ಮೊ: 9686483917, 9481822733, 8747932831 ಹಾಗೂ 9482763886 ಸಂಪರ್ಕಿಸಬಹುದು ಎಂದರು.

ಸುದ್ದಿಗೋಷ್ಠಿಯಲ್ಲಿ ಪ್ರಧಾನ ಕಾರ್ಯದರ್ಶಿ ಸಿ.ಡಿ.ವೆಂಕಟೇಶ್, ಖಜಾಂಚಿ ಬಿ.ಎಲ್.ಮಹದೇವ, ನಿರ್ದೇಶಕರಾದ ಚಿನ್ನಸ್ವಾಮಿ, ನಾರಾಯಣ, ಇನ್ನಿತರರಿದ್ದರು.

ಏತ ನೀರಾವರಿಯಿಂದ ತಾರಕ ಜಲಾಶಯಕ್ಕೆ ನೀರು: ಶಾಸಕ ಅನಿಲ್



ತಾರಕ ಏತ ನೀರಾವರಿಗೆ ಶಾಸಕ ಅನಿಲ್ ಚಾಲನೆ ನೀಡಿದರು.

ಹೆಚ್.ಕೋಟೆ, ಜು.13– ತಾರಕ ಅಚ್ಚುಕಟ್ಟು ಪ್ರದೇಶ ವ್ಯಾಪ್ತಿಯ ರೈತರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ತಾರಕ ಏತ ನೀರಾವರಿ ಯೋಜನೆಯಿಂದ ತಾರಕ ಜಲಾಶಯಕ್ಕೆ ನೀರು ಹರಿಸಲಾಗುತ್ತಿದೆ ಎಂದು ಶಾಸಕ ಅನಿಲ್ ತಿಳಿಸಿದರು.

ತಾಲೂಕಿನ ಕಬಿನಿ ಹಿನ್ನೀರಿನ ಸೋಗಳ್ಳಿ ಗ್ರಾಮದಲ್ಲಿ ತಾರಕ ಏತ ನೀರಾವರಿ ಯೋಜನೆಯ ಯಂತ್ರಗಳಿಗೆ ವಿಶೇಷ ಪೂಜೆ ಸಲ್ಲಿಸಿ ನೀರು ಹರಿಸುವ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ತಾರಕ ಜಲಾನಯನದಲ್ಲಿ 20 ಸಾವಿರಕ್ಕೂ ಹೆಚ್ಚು ಅಚ್ಚುಕಟ್ಟು ಪ್ರದೇಶ ಬರಲಿದ್ದು, ಈ ಭಾಗದ ರೈತರ ಜಮೀನುಗಳಿಗೆ ನಾಲೆ ಮೂಲಕ ನೀರು ಹರಿಸಲು ತಾರಕ ಜಲಾಶಯಕ್ಕೆ ನೀರು ತುಂಬಿಸಲಾಗುತ್ತಿದೆ. ರೈತರ ಜಮೀನಿಗೆ ಯಾವುದೇ ತೊಂದರೆಯಾಗದಂತೆ ನೀರು ತಲುಪಲು ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದರು.

ತಾರಕ ಜಲಾಶಯದಲ್ಲಿ 3 ಟಿಎಂಸಿ ನೀರು ಶೇಖರಣೆಯಾಗಲಿದೆ. ಏತ ನೀರಾವರಿ ಮೂಲಕ ತಾರಕ ಜಲಾಶಯ ಭರ್ತಿ ಮಾಡಲಾಗುವುದು. 120 ದಿನಗಳ ಕಾಲ 4 ಯಂತ್ರಗಳ ಮೂಲಕ ನೀರೆತ್ತುವ ಕಾರ್ಯ ನಡೆಯಲಿದೆ. ಇದರಿಂದ 20 ಸಾವಿರ ಎಕರೆ ನೀರಾವರಿಗೆ ಒಳಪಡಲಿದ್ದು, ಕಟ್ಟೆ ಕಡೆ ರೈತನಿಗೂ ನೀರು ಒದಗಿಸುವ ಕಾರ್ಯ ಮಾಡಲಿದ್ದೇವೆ ಎಂದರು.

ನಾಲೆಗಳ ಅಭಿವೃದ್ಧಿ ಮತ್ತು ಪೈಪ್‌ಲೈನ್ ಕಾಮಗಾರಿಗೆ ಸಿಎಂ, ಡಿಸಿಎಂ ಬಳಿ ಮನವಿ ಮಾಡಿದ್ದು, ಶೀಘ್ರ ಅನುದಾನ ನೀಡಲಿದ್ದಾರೆ. ಬಲದಂಡೆ ನಾಲೆ ವ್ಯಾಪ್ತಿಯ 12 ಕಿಮೀ ವ್ಯಾಪ್ತಿಯಲ್ಲಿ ಲೈನಿಂಗ್ ಕಾಮಗಾರಿ ನಡೆಸದೆ ಗುತ್ತಿಗೆದಾರ ನಾಪತ್ತೆಯಾಗಿದ್ದಾನೆ. ಆತನನ್ನು ಕಪ್ಪು ಪಟ್ಟಿಗೆ ಸೇರಿಸಿ ಹೊಸದಾಗಿ ಟೆಂಡರ್ ಕರೆಯಲಾಗುವುದು ಎಂದರು.

ತಾಲೂಕಿನ ರೈತರ ಕಷ್ಟ ಸುಖಗಳಿಗೆ ಪ್ರತಿಯೊಬ್ಬ ಅಧಿಕಾರಿ ಸ್ಪಂದಿಸಬೇಕು. ರೈತರನ್ನು ಅಲೆದಾಡಿಸುವುದು, ಲಂಚಕ್ಕೆ ಪೀಡಿಸುವ ಅಧಿಕಾರಿಗಳನ್ನು ತಾಲೂಕಿನಿಂದ ಹೊರ ಹಾಕಲಾಗುವುದು. ಮುಂದಿನ ದಿನಗಳಲ್ಲಿ ಈ ಬಗ್ಗೆ ರೈತರ ಸಭೆ ಕರೆದು ಚರ್ಚೆ ಮಾಡಲಾಗುವುದು ಎಂದರು.

ತಾರಕ, ಕಬಿನಿ, ನುಗು ಜಲಾಶಯಗಳ ಅಭಿವೃದ್ಧಿಗೆ ಈಗಾಗಲೇ ನೀಲನಕ್ಷೆ ತಯಾರಿಸಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. 3 ವರ್ಷಗಳಿಂದ ಏತ ನೀರಾವರಿ ಮೂಲಕ ನೀರೆತ್ತುವ ಕಾರ್ಯ ಮಾಡಿರಲಿಲ್ಲ. ಈ ಬಾರಿ ಅಧಿಕಾರಿಗಳಿಗೆ ಸೂಚನೆ ನೀಡಿ ಎಚ್ಚರಿಕೆ ಕೊಟ್ಟು ನೀರೆತ್ತುವ ಕಾರ್ಯ ಮಾಡಲಾಗಿದೆ. ತಾಲೂಕಿನಲ್ಲಿ ಉತ್ತಮ ಮಳೆಯಾಗಿ ಕೆರೆಕಟ್ಟೆ, ಜಲಾಶಯಗಳು ಭರ್ತಿಯಾಗುತ್ತಿದೆ. ರೈತರು ಸರ್ಕಾರದ ಯೋಜನೆಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಈ ವೇಳೆ ಕಬಿನಿ ಕಾರ್ಯಪಾಲಕ ಅಭಿಯಂತರ ಚಂದ್ರಶೇಖರ್, ತಾರಕ ಎಇಇ ರಾಮೇಗೌಡ, ಸರಗೂರು ಎಇಇ ಉಷಾ, ಇಂಜಿನಿಯರ್ ಗಳಾದ ಮಂಜು, ನಟಶೇಖರ್, ಮಂಜುನಾಥ್, ಗೌಸಿಯಾ, ಗ್ರಾಪಂ ಅಧ್ಯಕ್ಷೆ ರೇಖಾ, ಗ್ರಾಪಂ ಮಾಜಿ ಅಧ್ಯಕ್ಷರಾದ ಕಲೀಂ ಪಾಷ, ಯಶೋಧಮ್ಮ, ಸುಬ್ರಹ್ಮಣಿ, ಸದಸ್ಯರಾದ ರತ್ನಮ್ಮ, ದೊರೆಸ್ವಾಮಿ, ಸಿಂಡಿಕೇಟ್ ಸದಸ್ಯ ನಾಗರಾಜು, ಮುಖಂಡರಾದ ಸತೀಶ್‌ಗೌಡ, ಪ್ರದೀಪ, ಶಂಭುಲಿಂಗ ನಾಯಕ, ಶಿವಪ್ಪ ಕೋಟೆ, ಚಿಕ್ಕವೀರ ನಾಯಕ, ದೊಡ್ಡನಾಯಕ, ನರಸಿಂಹೇಗೌಡ, ಸೋಮೇಶ್, ರವಿ, ರಾಜು, ಗಣೇಶ ಚಾರಿ, ಭಾಸ್ಕರ್, ಮೀನ್ ರಾಜಣ್ಣ, ಮಹದೇವು, ಬಾಲಯ್ಯ, ಮಲ್ಲೇಶ್, ಸೋಮು, ಪರಶಿವ, ಪಲ್ಲವಿ, ಸ್ವಾಮಿ, ಮಹೇಂದ್ರ, ಶಿವರಾಜು ಇನ್ನಿತರರಿದ್ದರು.

ಸಾಹಿತಿ ಡಾ.ಉಮೇಶ್‌ಗೆ ವಿಕಾಸಶ್ರೀ ಪ್ರಶಸ್ತಿ



ಕರ್ನಾಟಕ ರಾಜ್ಯ ಒಕ್ಕಲಿಗ ವಿಕಾಸ ವೇದಿಕೆಯಿಂದ ಬನ್ನೂರಲ್ಲಿ ನಡೆದ ದಿ.ಕೆಎಚ್.ರಾಮಯ್ಯನವರ ಜಯಂತ್ಯುತ್ಸವದಲ್ಲಿ ಬೇವಿನ ಹಳ್ಳಿ ಗ್ರಾಮದ ಸಾಹಿತಿ ಡಾ.ಉಮೇಶ್ ಅವರಿಗೆ 'ವಿಕಾಸಶ್ರೀ' ರಾಜ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಂಸ್ಥಾಪಕ ಅಧ್ಯಕ್ಷೆ ಯಮುನಾ, ಒಕ್ಕಲಿಗ ಸಂಘದ ಮಂಚೇಗೌಡ ಇತರರಿದ್ದರು.

ಗಿರಿಜಾ ಕಲ್ಯಾಣದಲ್ಲಿ ವೀಣಾವಾದನ



ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯದಲ್ಲಿ ಗಿರಿಜಾ ಕಲ್ಯಾಣ ಪ್ರಯುಕ್ತ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ನಂಜನಗೂಡಿನ ಶ್ರೀವಿದ್ಯಾ ಸಂಗೀತ ಮತ್ತು ನೃತ್ಯ ಶಾಲೆಯ ವಿದ್ಯಾ ವೈಷ್ಣವಿ ಸುಬ್ರಹ್ಮಣ್ಯ ವೀಣಾ ವಾದನ ನಡೆಸಿಕೊಟ್ಟರು. ವಿದ್ವಾನ್ ದಾಸಪ್ಪ ಮೃದಂಗ ಮತ್ತು ರಾಜೀವ್ ಕೊಳಲು ವಾದನ ನುಡಿಸಿದರು.

ಸಾರ್ವಜನಿಕರು ಡೆಂಗ್ಯೂ ತಡೆಗೆ ಸಹಕರಿಸಿ

ಪುರಸಭಾ ಮುಖ್ಯಾಧಿಕಾರಿ ಮಂಜುನಾಥ್



ಡೆಂಗ್ಯೂ ಬಗ್ಗೆ ಪುರಸಭಾ ಮುಖ್ಯಾಧಿಕಾರಿ ಮಂಜುನಾಥ್ ನಿವಾಸಿಗಳಿಗೆ ಅರಿವು ಮೂಡಿಸಿದರು

ಸರಗೂರು, ಜು.13– ತಮ್ಮ ಮನೆ ಸುತ್ತಮುತ್ತಲ ಪರಿಸರ ಸ್ವಚ್ಛವಾಗಿಟ್ಟುಕೊಳ್ಳುವ ಮೂಲಕ ಡೆಂಗ್ಯೂ ತಡೆಗೆ ಮುಂದಾಗಬೇಕು ಎಂದು ಪುರಸಭಾ ಮುಖ್ಯಾಧಿಕಾರಿ ಮಂಜುನಾಥ್ ಪಟ್ಟಣದ ನಿವಾಸಿಗಳಿಗೆ ಸಲಹೆ ನೀಡಿದರು.

ಪಪಂ ಹಾಗೂ ಆರೋಗ್ಯ ಇಲಾಖೆ ಸಿಬ್ಬಂದಿಗಳೊಂದಿಗೆ ಪಟ್ಟಣದ ವಿವಿಧ ವಾರ್ಡ್‌ಗಳಿಗೆ ತೆರಳಿ ಡೆಂಗ್ಯೂ ತಡೆಗಟ್ಟುವ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಿ ಮಾತನಾಡಿದರು. ನಿವಾಸಿಗಳು ಹಸಿ ಮತ್ತು ಒಣ ತ್ಯಾಜ್ಯಗಳನ್ನು ಚರಂಡಿ ಅಥವಾ ರಸ್ತೆಯಲ್ಲಿ ಬೀಸಾಡದೆ ಪಪಂನ ಕಸ ಸಂಗ್ರಹಣೆಯ ವಾಹನಕ್ಕೆ ನೀಡಬೇಕು. ತಮ್ಮ ಮನೆ ಸುತ್ತಮುತ್ತ ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ಡೆಂಗ್ಯೂ ತಡೆಗೆ ಪಪಂ ಆರೋಗ್ಯ ಇಲಾಖೆಗೆ ಸಂಪೂರ್ಣ ಸಹಕಾರ ನೀಡಲಾಗುತ್ತದೆ ಎಂದರು.

ಸಮುದಾಯ ಆರೋಗ್ಯಾಧಿಕಾರಿ ಡಾ.ಪಾರ್ಥಸಾರಥಿ ಮಾತನಾಡಿ, ಅಧಿಕ ಜ್ವರ, ತೀವ್ರ ತಲೆನೋವು, ತೀವ್ರ ಕೀಲು ಮತ್ತು ಸ್ನಾಯು ನೋವು, ಕಣ್ಣುಗಳ ಹಿಂದೆ ನೋವು, ವಾಕರಿಕೆ, ವಾಂತಿ, ಆಯಾಸ ಇವು ಡೆಂಗ್ಯೂ ಲಕ್ಷಣವಾಗಿದ್ದು, ಇವು ಕಾಣಿಸಿಕೊಂಡಲ್ಲಿ ಹತ್ತಿರದ ಆಸ್ಪತ್ರೆಗೆ ತೆರಳಿ ಚಿಕಿತ್ಸೆ ಪಡೆಯುವಂತೆ ಸಲಹೆ ನೀಡಿದರು.

ಈ ವೇಳೆ ಆರೋಗ್ಯ ಇಲಾಖೆ ಸಿಬ್ಬಂದಿ ಜಗದೀಶ್, ಶಾಂತಿ, ಪಪಂ ಸಿಬ್ಬಂದಿ ಆರ್.ಐ.ರಾಮು, ಅರುಣ ಆರಾಧ್ಯ, ದಿನೇಶ್, ಪೌರಕಾರ್ಮಿಕರು ಇದ್ದರು.

ಜು.21, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಚುನಾವಣೆ ಹಿನ್ನೆಲೆ

ತಿ.ನರಸೀಪುರದಲ್ಲಿ ವೀರಶೈವ ಲಿಂಗಾಯತ ಮುಖಂಡರ ಸಭೆ

ಬೆನಕನಹಳ್ಳಿ ಶಿವಮಲ್ಲಪ್ಪ ನೇತೃತ್ವದಲ್ಲಿ ಚುನಾವಣೆ ಎದುರಿಸಲು ನಿರ್ಧಾರ



ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಚುನಾವಣೆ ಹಿನ್ನೆಲೆಯಲ್ಲಿ ಎಸ್‌ಎಂಆರ್ ಪ್ರಕಾಶ್ ತಂಡದ ಸದಸ್ಯರು ಸಮಾಜದ ಹಿರಿಯ ಮುಖಂಡರು, ನಿರ್ದೇಶಕರು ಸಭೆ ನಡೆಸಿದರು.

ತಿ.ನರಸೀಪುರ, ಜು.13– ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಘಟಕಕ್ಕೆ ಜು.21ರಂದು ಚುನಾವಣೆಯಲ್ಲಿ ನಡೆಯಲಿದ್ದು, ಕೃಷಿಕ ಸಮಾಜದ ಅಧ್ಯಕ್ಷ ಬೆನಕನಹಳ್ಳಿ ಶಿವಮಲ್ಲಪ್ಪ ನೇತೃತ್ವದಲ್ಲಿ ಚುನಾವಣೆ ಎದುರಿಸಲು ಇಂದಿಲ್ಲಿ ನಡೆದ ವೀರಶೈವ ಲಿಂಗಾಯತ ಮುಖಂಡರ ಸಭೆಯಲ್ಲಿ ನಿರ್ಧರಿಸಲಾಯಿತು.

ಜು.21ರಂದು ಅಖಿಲ ಭಾರತ ವೀರಶೈವ ಲಿಂಗಾಯತ ವೀರಶೈವ ಮಹಾಸಭಾ ಅಧ್ಯಕ್ಷ ಸ್ಥಾನ ಸೇರಿದಂತೆ 14 ನಿರ್ದೇಶಕರ ಸ್ಥಾನಕ್ಕೆ ಚುನಾವಣೆ ನಡೆಯಲಿದ್ದು, ಎಸ್‌ಎಂಆರ್ ಗ್ರೂಪ್ ಮಾಲೀಕ ಪ್ರಕಾಶ್ ತಂಡವನ್ನು ಬೆಂಬಲಿಸಿ ಗೆಲುವಿಗೆ ಕಾರ್ಯತಂತ್ರ ರೂಪಿಸಲು ವೀರಶೈವ ಸಮಾಜದ ಮುಖಂಡರು ನಿರ್ಧಾರ ಕೈಗೊಂಡರು.

ತಾಲೂಕು ಘಟಕದ 20 ಸ್ಥಾನಗಳ ಪೈಕಿ 7 ಮಂದಿ ಮಹಿಳೆಯರು ನಿರ್ದೇಶಕರ ಸ್ಥಾನಗಳಿಗೆ ಈಗಾಗಲೇ ಅವಿರೋಧವಾಗಿ ಆಯ್ಕೆಯಾಗಿದ್ದು, ಉಳಿದ 13 ನಿರ್ದೇಶಕರು ಹಾಗೂ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಲಿದೆ.

ವೀರಶೈವ ಸಮಾಜದ ಮುಖಂಡ, ಕೃಷಿಕ ಸಮಾಜದ ಅಧ್ಯಕ್ಷ ಬೆನಕನಹಳ್ಳಿ ಶಿವಮಲ್ಲಪ್ಪ ಸಹ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿದ್ದು, ಗೊಂದಲಕ್ಕೆ ಅವಕಾಶ ಮಾಡಿಕೊಡದಂತೆ ಕಣದಿಂದ ಹಿಂದೆ ಸರಿದು ಎಸ್‌ಎಂಆರ್ ಪ್ರಕಾಶ್ ಅವರ ತಂಡಕ್ಕೆ ಬೆಂಬಲ ಸೂಚಿಸಿರುವ ಹಿನ್ನೆಲೆಯಲ್ಲಿ ಅವರ ಮುಖಂಡತ್ವದಲ್ಲೇ ಚುನಾವಣೆ ಎದುರಿಸಲು ಮುಖಂಡರು ನಿರ್ಧಾರ ಕೈಗೊಂಡರು.

ಚುನಾವಣೆಯಲ್ಲಿ ಅವಿರೋಧವಾಗಿ ಅಧ್ಯಕ್ಷರನ್ನು ಆಯ್ಕೆ ಮಾಡಬೇಕೆಂಬ ಎಲ್ಲ ಪ್ರಯತ್ನ ವಿಫಲವಾದ ನಂತರ ಚುನಾವಣೆಗೆ ಹೋಗಲು ನಿರ್ಧರಿಸಲಾಗಿದ್ದು, ಹೆಳವರಹುಂಡಿ ಸಿದ್ದಪ್ಪ ಹಾಗೂ ಎಸ್‌ಎಂಆರ್ ಪ್ರಕಾಶ್ ತಂಡದ ನಡುವೆ ತೀವ್ರ ಪೈಪೋಟಿ ಏರ್ಪಡುವ ಸಾಧ್ಯತೆ ಹೆಚ್ಚಿದೆ. ಈ ಹಿನ್ನಲೆಯಲ್ಲಿ ಚುನಾವಣೆಯಲ್ಲಿ ಗೆಲ್ಲಲೇಬೇಕೆಂಬ ಹುಮ್ಮಸ್ಸಿನೊಂದಿಗೆ ಎಸ್‌ಎಂಆರ್ ಪ್ರಕಾಶ್ ತಂಡ ಸಮಾಜದ ಮುಖಂಡರನ್ನು ಒಗ್ಗೂಡಿಸಿ ಸಭೆಯಲ್ಲಿ ಗೆಲುವಿನ ತಂತ್ರದ ಬಗ್ಗೆ ಚರ್ಚೆ ಮಾಡಿತು.


ಈ ವೇಳೆ ಮಾತನಾಡಿದ ಹಲವು ಮುಖಂಡರು ಪ್ರತಿ ಹಳ್ಳಿಗಳಿಗೆ ತೆರಳಿ ಮತದಾರರನ್ನು ಸಂಪರ್ಕಿಸಿ ಅವರ ಮನವೊಲಿಸಿದರೆ ಅವು ಮತಗಳಾಗಿ ಪರಿವರ್ತನೆಯಾಗುವುದರಿಂದ ಎಲ್ಲರೂ ಒಗ್ಗೂಡಿ ಕೆಲಸ ಮಾಡಲು ನಿರ್ಧರಿಸಲಾಯಿತು.

ಕೃಷಿಕ ಸಮಾಜದ ಅಧ್ಯಕ್ಷ ಬೆನಕನಹಳ್ಳಿ ಶಿವಮಲ್ಲಪ್ಪ ಮಾತನಾಡಿ, ವೀರಶೈವ ಸಮಾಜದ ಅಧ್ಯಕ್ಷರನ್ನು ಅವಿರೋಧವಾಗಿ ಆಯ್ಕೆಯಾಗಬೇಕೆಂಬ ಮಹದಾಸೆ ಎಲ್ಲರದ್ದಾಗಿತ್ತಾದರೂ, ಅದು ಸಾಧ್ಯವಾಗದ ಹಿನ್ನೆಲೆಯಲ್ಲಿ ಚುನಾವಣೆ ನಡೆಸಲಾಗುತ್ತಿದೆ. ಅವಿರೋಧ ಆಯ್ಕೆ ಸರಿಯಾದ ಬೆಳವಣಿಗೆಯಲ್ಲ. ಹೀಗಾಗಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆ ನಡೆದು ಮತದಾರರ ಆಶೀರ್ವಾದ ಪಡೆದಾಗಲೇ ಉತ್ತಮ ಅಭ್ಯರ್ಥಿ ಆಯ್ಕೆ ಸಾಧ್ಯವಾಗಿ ಸಮಾಜದ ಕೆಲಸ ಮಾಡಲು ಸಾಧ್ಯವಾಗುತ್ತದೆ. ಅವಿರೋಧವಾಗಿ ಆಯ್ಕೆಯಾದರೇ ಲಾಬಿ ಆರಂಭವಾಗಿ ಗೊಂದಲಗಳು ಏರ್ಪಡುತ್ತವೆ. ಪರಿಣಾಮ ಯೋಗ್ಯ ಅಭ್ಯರ್ಥಿ ಆಯ್ಕೆಯಾಗುವ ಸಾಧ್ಯತೆ ಕಡಿಮೆ. ಎಲ್ಲಕ್ಕಿಂತ ಹೆಚ್ಚಾಗಿ ನಮ್ಮದು ರಾಜಕೀಯ ಸಂಘಟನೆಯಲ್ಲ. ಸಮಾಜದ ಏಳಿಗೆಗಾಗಿ ಮಾಡಿಕೊಂಡಿರುವ ಸಮಾಜದ ಸಂಘಟನೆ. ಹಾಗಾಗಿ ಸಮಾಜದ ಎಲ್ಲಾ ಮುಖಂಡರು ಪ್ರಕಾಶ್ ಮತ್ತು ತಂಡದ ಗೆಲುವಿಗೆ ಶಕ್ತಿ ಮೀರಿ ಶ್ರಮಿಸಬೇಕು ಎಂದು ಮನವಿ ಮಾಡಿದರು.

ಸಭೆಯಲ್ಲಿ ಕಾರ್ಯಕಾರಿ ಸಮಿತಿಗೆ ಸ್ಪರ್ಧಿಸಿರುವ ತೊಟ್ಟವಾಡಿ ಟಿ.ಪಿ.ಕುಮಾರಸ್ವಾಮಿ, ದೊಡ್ಡನಹುಂಡಿ ಜಿ.ನಂಜುಂಡಸ್ವಾಮಿ, ಕಾವೇರಿಪುರ ಕೆ.ಎಂ.ಮಲ್ಲು, ಶಂಭುದೇವನಪುರ ಎಸ್.ಬಿ.ಸುಗಂಧರಾಜು, ಕಟ್ಟೇಪುರ ಓಂಕಾರಸ್ವಾಮಿ, ಹೊಸೂರುಂಡಿ ತೋಂಟೇಶ್, ಎಂ.ಎಲ್.ಹುಂಡಿ ಶ್ರೀಕಂಠಸ್ವಾಮಿ, ಉಕ್ಕಲಗೆರೆ ಎಂ.ಪರಶಿವಮೂರ್ತಿ, ಬೆನಕನಹಳ್ಳಿ ಬಿ.ಎಂ.ವಿಜಯಕುಮಾರ್, ಪೂಜಿತ್ ಮೆಡಿಕಲ್ ಕುಮಾರ್, ಕಿರಗಸೂರು ಎಂ.ಸುರೇಶ್, ಪುರಸಭಾ ಸದಸ್ಯ ಎಸ್.ಕೆ.ಕಿರಣ್, ತುರುಗನೂರು ಬಿ.ಸುರೇಶ್, ಎಸ್‌ಎಂಆರ್ ಪ್ರಕಾಶ್ ಅವರಿಗೆ ಬೆಂಬಲ ಘೋಷಿಸಿ ನಿವೃತ್ತರಾದ ತೊಟ್ಟವಾಡಿ ನಟರಾಜು, ಕರೋಹಟ್ಟಿ ಬಸವರಾಜು, ಸಮಾಜದ ಮುಖಂಡರಾದ ಬೆ.ಗು.ಶಿವಸ್ವಾಮಿ, ಎಲ್‌ಐಸಿ ಪ್ರಕಾಶ್,ಹಿರಿಯೂರು ಸತ್ಯಪ್ಪ, ಪರಮೇಶ್ ಪಟೇಲ್, ಮೂಗೂರು ಕುಮಾರಸ್ವಾಮಿ, ಪರಶಿವಮೂರ್ತಿ, ತೊಟ್ಟವಾಡಿ ಸೋಮಶೇಖರ್ ಹಾಜರಿದ್ದರು.

> ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಚುನಾವಣೆಗೆ ಸಿದ್ಧತೆ ಕೈಗೊಂಡು ಸಮಾಜದ ಹಿರಿಯರು, ಮುಖಂಡರ ಸಲಹೆ ಪಡೆದು ಚುನಾವಣೆ ಎದುರಿಸಲು ಮುಂದಾಗಿದ್ದೇವೆ. ಈಗ ಅವಿರೋಧ ಆಯ್ಕೆಯಾಗದ ಕಾರಣ ಚುನಾವಣೆಗೆ ಉತ್ತಮ ತಂಡದೊಂದಿಗೆ, ಸಮಾಜಕ್ಕೆ ಒಳ್ಳೆಯ ಕೆಲಸ ಮಾಡಬೇಕೆಂಬ ಉದ್ದೇಶದಿಂದ ಬಂದಿದ್ದೇವೆ. ಸಮಾಜದ ಎಲ್ಲಾ ಬಂಧುಗಳು ನಮ್ಮ ಆಶಯಕ್ಕೆ ಪೂರಕವಾಗಿ ನಮ್ಮ ತಂಡಕ್ಕೆ ಮತ ನೀಡುವ ಮೂಲಕ 13 ನಿರ್ದೇಶಕರ ಆಯ್ಕೆಗೆ ಸಹಕಾರ ನೀಡಿ.
> – **ಎಸ್‌ಎಂಆರ್ ಪ್ರಕಾಶ್,** ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಸ್ಥಾನದ ಆಕಾಂಕ್ಷಿ.

ಸಂಸದ ಸುನೀಲ್ ಬೋಸ್‌ಗೆ ಅಭಿನಂದನೆ




ಸಂಸದ ಸುನೀಲ್ ಬೋಸ್ ಅವರನ್ನು ರಾಜ್ಯ ಹಿಂದುಳಿದ ವರ್ಗಗಳ ಕಾರ್ಯದರ್ಶಿ ಎಂ.ರಮೇಶ್, ಎಪಿಎಂಸಿ ಮಾಜಿ ಅಧ್ಯಕ್ಷ ತ್ರಿವೇಣಿ ನಗರ ಮಹೇಶ್ ಹಾಗೂ ಸಿದ್ದರಾಮಯ್ಯ ಅಭಿಮಾನಿ ಬಳಗದ ರಾಜ್ಯಾಧ್ಯಕ್ಷ ಹಿನಕಲ್ ಉದಯ್ ಅಭಿನಂದಿಸಿದರು.


ಇಸ್ರೇಲ್ ವೈಮಾನಿಕ ದಾಳಿ: 71 ಪ್ಯಾಲೆಸ್ತೀನಿಯರು ಸಾವು

ಗಾಜಾ: ಹಮಾಸ್‌ನ ಸೇನಾ ಮುಖ್ಯಸ್ಥನನ್ನು ಗುರಿಯಾಗಿಸಿಕೊಂಡು ಇಸ್ರೇಲಿ ಸೇನೆಯು ಗಾಜಾದ ಮೇಲೆ ಅತ್ಯಂತ ಭೀಕರ ವೈಮಾನಿಕ ದಾಳಿ ನಡೆಸಿದೆ. ಶನಿವಾರದಂದು ಗಾಜಾದಲ್ಲಿ ಹಮಾಸ್ ಸೇನಾ ಮುಖ್ಯಸ್ಥ ಮೊಹಮ್ಮದ್ ಡೀಫ್‌ನನ್ನು ಗುರಿಯಾಗಿಸಿಕೊಂಡು ಇಸ್ರೇಲಿ ವೈಮಾನಿಕ ದಾಳಿ ನಡೆಸಿದೆ ಎಂದು ಗಾಜಾ ಭದ್ರತಾ ಅಧಿಕಾರಿ ಮತ್ತು ಇಸ್ರೇಲಿ ಸೇನೆ ತಿಳಿಸಿದ್ದಾರೆ. ಇಸ್ರೇಲ್ ವಾಯುದಾಳಿಯಲ್ಲಿ ಕನಿಷ್ಠ 71 ಪ್ಯಾಲೆಸ್ತೀನಿಯರು ಸಾವನ್ನಪ್ಪಿದ್ದಾರೆ ಎಂದು ಗಾಜಾ ಎನ್‌ಕ್ಲೇವ್‌ನ ಆರೋಗ್ಯ ಸಚಿವಾಲಯ ತಿಳಿಸಿದೆ.

ಲವ-ಕುಶ ಉದ್ಯಾನವನದಲ್ಲಿ ಕಗ್ಗತ್ತಲು: ವಾಯುವಿಹಾರಿಗಳಿಗೆ ತೀವ್ರ ತೊಂದರೆ



ಮೈಸೂರಿನ ಕುವೆಂಪುನಗರದ ಲವ-ಕುಶ ಉದ್ಯಾನದಲ್ಲಿ ವಿದ್ಯುತ್ ವ್ಯವಸ್ಥೆ ಸಮರ್ಪಕವಾಗಿಲ್ಲದೆ ಕಗ್ಗತ್ತಲು ಆವರಿಸಿರುವುದು.



ಮೈಸೂರು, ಜು.13(ಎಸ್‌ಬಿಡಿ)- ಮೈಸೂರಿನ ಕುವೆಂಪುನಗರದ ಲಲಿತಾದ್ರಿ ರಸ್ತೆಯಲ್ಲಿರುವ ಲವ-ಕುಶ ಉದ್ಯಾನವನಕ್ಕೆ ಸಮರ್ಪಕ ವಿದ್ಯುತ್ ದೀಪದ ವ್ಯವಸ್ಥೆ ಇಲ್ಲದೆ ವಾಯುವಿಹಾರಿಗಳು ತೊಂದರೆ ಅನುಭವಿಸುವಂತಾಗಿದೆ.

ಮೈಸೂರಿನಲ್ಲಿ ನಿರ್ವಹಣೆಯಿಲ್ಲದೆ ಅಧ್ವಾನವಾಗಿರುವ ಉದ್ಯಾನಗಳ ನಡುವೆ 'ಲವ-ಕುಶ' ಉದ್ಯಾನವನ ಸುಂದರವಾಗಿ ಕಾಣುತ್ತದೆ. ಇದಕ್ಕೆ ಸ್ಥಳೀಯರು ಹಾಗೂ ವಾಯು ವಿಹಾರಿಗಳ ಕಾಳಜಿಯೇ ಪ್ರಮುಖ ಕಾರಣ. ಜನಪ್ರತಿನಿಧಿಗಳು ಹಾಗೂ ಸಂಬಂಧಪಟ್ಟ ಅಧಿಕಾರಿಗಳ ಬೆನ್ನುಬಿದ್ದು ಉದ್ಯಾನವನ್ನು ಉತ್ತಮ ರೀತಿಯಲ್ಲಿ ಉಳಿಸಿಕೊಂಡಿದ್ದಾರೆ. ಸಾರ್ವಜನಿಕರು ನಮಗೇಕೆ ಎಂಬ ಧೋರಣೆ ತೋರಿದ್ದರೆ ಈ ಉದ್ಯಾನವನವೂ ಹತ್ತರಲ್ಲಿ ಒಂದಾಗಿರುತ್ತಿತ್ತು.

ಕತ್ತಲಲ್ಲಿ ಕಂಟಕ: ಲವ-ಕುಶ ಉದ್ಯಾನವನದ ಗೇಟ್‌ನಲ್ಲಿ ಬೆಳಗ್ಗೆ 5ರಿಂದ 11 ಮತ್ತು ಸಂಜೆ 4ರಿಂದ ರಾತ್ರಿ 9.30ರವರೆಗೆ ಭೇಟಿ ಸಮಯ ಎಂದು ಫಲಕ ಅಳವಡಿಸಲಾಗಿದೆ ಆದರೆ ಸೂರ್ಯಾಸ್ತದ ಬಳಿಕ ಉದ್ಯಾನವನದಲ್ಲಿ ವಾಯುವಿಹಾರ ಸುರಕ್ಷಿತವಲ್ಲ. ಅದರಲ್ಲೂ ವಯಸ್ಸಾದವರಿಗೆ ತುಂಬಾ ಕಷ್ಟ, ವಾಕಿಂಗ್ ಪಾತ್‌ನಲ್ಲಿ ವಿದ್ಯುತ್ ದೀಪದ ವ್ಯವಸ್ಥೆ ಸಮರ್ಪಕವಾಗಿಲ್ಲ ಒಂದು ಲೈಟ್ ಉರಿದರೆ ಮತ್ತೊಂದು ಆಫ್ ಆಗಿರುತ್ತದೆ. ಮಬ್ಬುಗತ್ತಲಲ್ಲೇ ವಾಕಿಂಗ್ ಮಾಡುವ ಸ್ಥಿತಿ ನಿರ್ಮಾಣವಾಗಿದೆ. ಸ್ವಲ್ಪ ಮಳೆಯಾದರೂ ವಾಕಿಂಗ್ ಪಾತ್ ಮತ್ತಷ್ಟು ದುರ್ಗಮವಾಗುತ್ತದೆ. ಹಲವರು ಜಾರಿಬಿದ್ದು ಗಾಯಗೊಂಡಿದ್ದಾರೆ.

ಸರಗಳ್ಳರ ಆತಂಕ: ಈ ಉದ್ಯಾನವನದಲ್ಲಿ ಮಹಿಳೆಯರೂ ಹೆಚ್ಚಿನ ಸಂಖ್ಯೆಯಲ್ಲಿರುತ್ತಾರೆ. ಉದ್ಯೋಗಸ್ಥ ಮಹಿಳೆಯರು ಸಾಮಾನ್ಯವಾಗಿ ಸಂಜೆ ನಂತರವೇ ವಾಯುವಿಹಾರಕ್ಕೆ ಬರುತ್ತಾರೆ. ಆದರೆ ಬೆಳಕಿನ ವ್ಯವಸ್ಥೆ ಸರಿಯಿಲ್ಲದ ಕಾರಣ ಆತಂಕದಲ್ಲೇ ಓಡಾಡುವಂತಾಗಿದೆ ಮಾಂಗಲ್ಯ ಸರವನ್ನೂ ಬಿಡದ ಸರಗಳ್ಳರು ಯಾವ ಕಡೆಯಿಂದ ದಾಳಿ ನಡೆಸುತ್ತಾರೋ ಎಂಬ ಆತಂಕದಲ್ಲೇ ಹೆಜ್ಜೆ ಹಾಕುತ್ತಾರೆ.

ನಾವಲ್ಲ ಅವರು: ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳನ್ನು ನಿರಂತರವಾಗಿ ಭೇಟಿ ಮಾಡಿ ಒತ್ತಾಯಿಸಿದ್ದರ ಪರಿಣಾಮ ಉದ್ಯಾನವನ ಅಚ್ಚುಕಟ್ಟಾಗಿದೆ. ಆದರೆ ವಿದ್ಯುತ್ ಸಮಸ್ಯೆ ಮಾತ್ರ ಯಾವ ಅಧಿಕಾರಿಗಳ ಭೇಟಿಯಿಂದಲೂ ಪರಿಹಾರವಾಗುತ್ತಿಲ್ಲ. ಕಾರ್ಪೊರೇಟರ್‌ಗಳ ಅಧಿಕಾರಾವಧಿ ಮುಗಿದಿರುವುದರಿಂದ ಅಧಿಕಾರಿಗಳ ಬಳಿ ಹೋಗಿ ಸಮಸ್ಯೆ ಬಗ್ಗೆ ತಿಳಿಸಿದರೆ ಸರಿಯಾಗಿ ಸ್ಪಂದಿಸುವುದಿಲ್ಲ. ಸೆಸ್ಕ್ ಅಧಿಕಾರಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ. ವಿದ್ಯುತ್ ನಿರ್ವಹಣೆ ನಮ್ಮ ಕಾರ್ಯ ವ್ಯಾಪ್ತಿಗೆ ಬರುವುದಿಲ್ಲ ಎಂದು ಪರಸ್ಪರ ನುಣುಚಿಕೊಳ್ಳುತ್ತಾರೆ. ಈ ಸಮಸ್ಯೆ ಬಗ್ಗೆ ಶಾಸಕರ ಗಮನಕ್ಕೂ ತರಲಾಗಿದೆ. ಅವರು ಅಧಿಕಾರಿಗಳ ಗಮನಕ್ಕೆ ತರಲಾಗಿದೆ ಎಂದರಾದರೂ ಈವರೆಗೆ ಸಮಸ್ಯೆ ಬಗೆಹರಿದಿಲ್ಲ ಎಂದು ವಾಯುವಿಹಾರಿಗಳು ಬೇಸರ ವ್ಯಕ್ತಪಡಿಸಿದರು.

ಪ್ರೀತಿ ಕುರುಡು, ಆದರೆ...: ಲವ-ಕುಶ ಉದ್ಯಾನವನ ಪ್ರೇಮಿಗಳ ಅಡ್ಡವಾಗಿದೆ. ಸಾರ್ವಜನಿಕ ಉದ್ಯಾನವನಕ್ಕೆ ಎಲ್ಲರಿಗೂ ಅವಕಾಶವಿದೆ. ಆದರೆ ಇಲ್ಲಿಗೆ ಬರುವ ಪ್ರೇಮಿಗಳು ಇತರರಿಗೆ ಮುಜುಗರವಾಗದಂತೆ ವರ್ತಿಸಬೇಕು. ಪ್ರೀತಿ ಕುರುಡು ನಿಜ, ಆದರೆ ಅಲ್ಲಿಗೆ ಬರುವವರಿಗೆ ದೃಷ್ಟಿ ಇದೆ. ಸಿಮೆಂಟ್ ಹಾಗೂ ಕಲ್ಲು ಬೆಂಚಿನ ಮೇಲೆ ಕುಳಿತು ಮೈಮರೆತರೆ ಬೇರೆಯವರಿಗೆ ಮುಜುಗರವಾಗುತ್ತದೆ. ಮಹಿಳೆಯರು, ಮಕ್ಕಳು, ವೃದ್ಧರು ಹೇಗೆ ಓಡಾಡುವುದು?. ಇಂತಹವರೇ ಯಾರೋ ವಿದ್ಯುತ್ ದೀಪಗಳನ್ನು ಹಾಳು ಮಾಡುತ್ತಾರೆ ಎಂದು ಕೆಲವರು ದೂರಿದ್ದಾರೆ. ದೇಶದ ಭವಿಷ್ಯವಾಗಿರುವ ಯುವ ಜನತೆ ಜವಾಬ್ದಾರಿಯಿಂದ ನಡೆದುಕೊಳ್ಳಬೇಕು ಎಂದು ಸಾರ್ವಜನಿಕರು ಮನವಿ ಮಾಡಿದ್ದಾರೆ.

ಕಾಂಗ್ರೆಸ್ ಕಾರ್ಯಕರ್ತರ ಅಳಲು ಆಲಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ

● ಹಲವರ ಮನವಿಗೆ ತಕ್ಷಣ ಸ್ಪಂದನೆ; ಸಂಬಂಧಿಸಿದವರಿಗೆ ತಾಕೀತು ● ಜೊತೆ ಜೊತೆಗೆ ಪಕ್ಷ ಸಂಘಟನೆ ಮಾಹಿತಿ ಸಂಗ್ರಹ

ಬೆಂಗಳೂರು, ಜು.13(ಕೆಎಂಶಿ)-ಸಿದ್ದರಾಮಯ್ಯ ಅವರು ಎರಡನೇ ಬಾರಿ ಮುಖ್ಯಮಂತ್ರಿಗಳಾದ ಬಳಿಕ ಕೆಪಿಸಿಸಿ ಕಚೇರಿಯಲ್ಲಿಂದು ಮೊದಲ ಕಾರ್ಯಕರ್ತರ ಅಹವಾಲು ಸ್ವೀಕಾರ ಅಭಿಯಾನ ಹುರುಪು-ನಿರೀಕ್ಷೆ-ಭರವಸೆಗಳೊಂದಿಗೆ ನಡೆಯಿತು.

ವಿಕಲಚೇತನರ ಬಳಿಗೇ ಹೋಗಿ ಅಹವಾಲುಗಳನ್ನು ಸ್ವೀಕರಿಸುವ ಮೂಲಕ ಮುಖ್ಯಮಂತ್ರಿ ಅವರು, ಅಹವಾಲು ಸ್ವೀಕಾರ ಅಭಿಯಾನಕ್ಕೆ ಚಾಲನೆ ನೀಡಿದರು.

ತ್ರಿಚಕ್ರ ವಾಹನ, ಸರ್ಕಾರಿ ಉದ್ಯೋಗ, ನಿಗಮ-ಮಂಡಳಿಯಲ್ಲಿ ಅವಕಾಶ, ಗುತ್ತಿಗೆ ನೌಕರಿ, ಸ್ವಂತ ಉದ್ಯೋಗಕ್ಕೆ ಅನುದಾನ, ಸಾಲ ಸವಲತ್ತು ಸೇರಿದಂತೆ ಹಲವು ವಿಧದ ಬೇಡಿಕೆಗಳನ್ನು ವಿಕಲಚೇತನರು, ಕಾಂಗ್ರೆಸ್ ಕಾರ್ಯಕರ್ತರು ಮುಖ್ಯಮಂತ್ರಿಗಳ ಮುಂದಿಟ್ಟರು.

ಪ್ರತಿಯೊಬ್ಬ ಕಾರ್ಯಕರ್ತರ ಅಹವಾಲು ಮತ್ತು ಪಕ್ಷ ಸಂಘಟನೆಯಲ್ಲಿ ಅವರುಗಳು ತೊಡಗಿಸಿಕೊಂಡಿರುವ ಬಗ್ಗೆ ಮುಖ್ಯಮಂತ್ರಿಗಳು ವಿವರವಾದ ಮಾಹಿತಿ ಪಡೆದುಕೊಂಡರು.

ನಂತರ ತಮ್ಮ ಸಿಬ್ಬಂದಿಗೆ, ಅಹವಾಲುಗಳನ್ನು ಪಟ್ಟಿ ಮಾಡಿ, ಸಂಬಂಧಪಟ್ಟ ಅಧಿಕಾರಿಗಳ ಮೂಲಕ ಬೇಡಿಕೆ ಈಡೇರಿಸುವಂತೆ ಸ್ಪಷ್ಟ ಸೂಚನೆ ನೀಡಿದರು.

ತಕ್ಷಣ ಈಡೇರಿಸಬಹುದಾದ ಬೇಡಿಕೆಗಳನ್ನು ಕೂಡಲೇ ಬಗೆಹರಿಸುವಂತೆ ತಮ್ಮ ಅಧಿಕಾರಿ ಮತ್ತು ಸಿಬ್ಬಂದಿಗೆ ಮುಖ್ಯಮಂತ್ರಿ ಅವರು ಸ್ಥಳದಲ್ಲೇ ನಿರ್ದೇಶನ ನೀಡಿದರು.

ಧಾರವಾಡ ಜಿಲ್ಲೆಯಿಂದ ಬಂದಿದ್ದ ಹುಬ್ಬಳ್ಳಿ-ಧಾರವಾಡ ಬೀದಿಬದಿ ವ್ಯಾಪಾರಿಗಳ ಕಾಂಗ್ರೆಸ್ ಘಟಕದ ಇಸ್ಮಾಯಿಲ್ ಅವರು, ಸ್ಥಳೀಯ ಆಡಳಿತ ಬೀದಿಬದಿ ವ್ಯಾಪಾರಿಗಳಿಗೆ ಅನಗತ್ಯ ತೊಂದರೆ ಕೊಡುತ್ತಿದೆ, ಅಂಗಡಿಗಳನ್ನು ತೆರವುಗೊಳಿಸುತ್ತಿದ್ದಾರೆ ಎಂದು ಮುಖ್ಯಮಂತ್ರಿಗಳಿಗೆ ಅಹವಾಲು ಸಲ್ಲಿಸಿದರು.

ಇದಕ್ಕೆ ಗರಂ ಆದ ಮುಖ್ಯಮಂತ್ರಿ ಅವರು, ಸ್ಥಳದಿಂದಲೇ ಧಾರವಾಡ ಜಿಲ್ಲಾಧಿಕಾರಿಗೆ ಕರೆ ಮಾಡಿ, ಬೀದಿ ಬದಿ ವ್ಯಾಪಾರಿಗಳ ಜೊತೆ ಮಾನವೀಯವಾಗಿ ವರ್ತಿಸಿ, ಅನಗತ್ಯ ತೊಂದರೆ ಕೊಡಬಾರದು ಎಂಬ ಸೂಚನೆ ನೀಡಿದರು.

ಮೈಸೂರಿನ ಹಾಲು ಉತ್ಪಾದಕರ ಸಹಕಾರ ಸಂಘಗಳ ನೌಕರರ ಮಹಾ ಮಂಡಳದ ಎಸ್.ಶಿವನಾಗಪ್ಪ ಮನವಿ ಸಲ್ಲಿಸಿ, ಕೆಎಂಎಫ್‌ನಲ್ಲಿನ ಸಾಫ್ಟ್‌ವೇರ್ ಹಾಲು ಉತ್ಪಾದಕರಿಗೆ ಅನುಕೂಲಕರವಾಗಿಲ್ಲ, ಕನ್ನಡ ಸಾಫ್ಟ್‌ವೇರ್ ಅಳವಡಿಸುವಂತೆ ಮನವಿ ಮಾಡಿದರು. ಸ್ಥಳದಿಂದಲೇ ಫೋನ್ ಮೂಲಕ ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕರನ್ನು ಸಂಪರ್ಕಿಸಿದ ಮುಖ್ಯಮಂತ್ರಿಗಳು, ಹಾಲು ಉತ್ಪಾದಕ-ಸ್ನೇಹಿ ಸಾಫ್ಟ್‌ವೇರ್ ಅಳವಡಿಕೆಗೆ ಸೂಚಿಸಿದರು.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಏಮ್ಸ್‌ನಿಂದ ಡಿಸ್ಚಾರ್ಜ್

ನವದೆಹಲಿ, ಜು.13- ಅನಾರೋಗ್ಯದಿಂದ ರಾಷ್ಟ್ರ ರಾಜಧಾನಿಯ ಏಮ್ಸ್‌ಗೆ ದಾಖಲಾಗಿದ್ದ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಶನಿವಾರ ಡಿಸ್ಚಾರ್ಜ್ ಆಗಿದ್ದಾರೆ. ಬೆನ್ನುನೋವಿನಿಂದ ಕಳೆದೆರಡು ದಿನಗಳ ಹಿಂದೆ ದಾಖಲಾಗಿದ್ದ ರಾಜನಾಥ್ ಸಿಂಗ್ ಅವರನ್ನು ಇಂದು ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಈ ಬಗ್ಗೆ ಮಾಹಿತಿ ನೀಡಿರುವ ಏಮ್ಸ್‌ನ ಮಾಧ್ಯಮ ಕೋಶದ ಉಸ್ತುವಾರಿ ಡಾ.ರೀಮಾ ದಾದಾ, ಬೆನ್ನುನೋವಿಗಾಗಿ ರಕ್ಷಣಾ ಸಚಿವರಿಗೆ ಚಿಕಿತ್ಸೆ ನೀಡಲಾಗಿದ್ದು, ಸದ್ಯ ಅವರ ಆರೋಗ್ಯ ಪರಿಸ್ಥಿತಿ ಉತ್ತಮವಾಗಿದೆ ಎಂದು ಹೇಳಿದ್ದಾರೆ.

ವೈದ್ಯರು ಎಐ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಮುಂದಾಗಬೇಕು

ಡಾ. ಸಚಿನ್‌ಗಾಂಧಿ ಸಲಹೆ



ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಭವನದಲ್ಲಿ ಶನಿವಾರ 'ಲಾರಿಂಗೋಲಜಿ ಸಮ್ಮೇಳನ-2024'ರ ವಿಚಾರ ಸಂಕಿರಣವನ್ನು ಲಾರಿಂಗೋಲಜಿ ಅಂಡ್ ವಾಯ್ಸ್ ಸಂಘಟನೆಯ ಸಂಸ್ಥಾಪಕ ಅಧ್ಯಕ್ಷ ಡಾ.ಸಚಿನ್‌ಗಾಂಧಿ ಉದ್ಘಾಟಿಸಿದರು.

ಮೈಸೂರು, ಜು.13(ಎಂಟಿವೈ)- ಪ್ರಸ್ತುತ ಎಲ್ಲ ಕ್ಷೇತ್ರಗಳಲ್ಲೂ ಕೃತಕ ಬುದ್ಧಿಮತ್ತೆ(ಎಐ)ಯು ದೊಡ್ಡಮಟ್ಟದಲ್ಲಿ ಆವರಿಸಿಕೊಳ್ಳುತ್ತಿದ್ದು, ವೈದ್ಯರು ನಿರ್ಲಕ್ಷ್ಯ ಮಾಡದೇ ಎಐ ತಂತ್ರಜ್ಞಾನ ಅಳವಡಿಸಿಕೊಳ್ಳಲು ಮುಂದಾಗಬೇಕು ಎಂದು ಲಾರಿಂಗೋಲಜಿ ಅಂಡ್ ವಾಯ್ಸ್ ಸಂಘಟನೆಯ ಸಂಸ್ಥಾಪಕ ಅಧ್ಯಕ್ಷ ಡಾ. ಸಚಿನ್‌ಗಾಂಧಿ ಸಲಹೆ ನೀಡಿದ್ದಾರೆ.

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಭವನದಲ್ಲಿ ಶನಿವಾರ 'ಲಾರಿಂಗೋಲಜಿ ಸಮ್ಮೇಳನ-2024'ರ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದ ಅವರು,

ಶಸ್ತ್ರಚಿಕಿತ್ಸಾ ಕೊಠಡಿಯಲ್ಲಿ ರೋಗಿಗೆ ಶಸ್ತ್ರಚಿಕಿತ್ಸೆ ನಡೆಸುವ ವೇಳೆ ನಾವು ನಿಖರವಾಗಿ ಕೆಲಸ ಮಾಡಿದ್ದೇವೆ ಎಂದುಕೊಳ್ಳುತ್ತೇವೆ. ಆದರೆ ಈಗ ಎಐ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡರೆ, ನಿಗದಿತ ಭಾಗವನ್ನು ಇನ್ನೂ ಎರಡು ಇಂಚು ಕತ್ತರಿಸಬೇಕು ಎಂದು ಹೇಳುತ್ತದೆ. ಆದ್ದರಿಂದ ವೈದ್ಯರು ಹೊಸ ತಂತ್ರಜ್ಞಾನ ಬಗ್ಗೆ ಕಲಿಯಲು ಆಸಕ್ತಿವಹಿಸಬೇಕು. ಅಲ್ಲದೇ ಅದನ್ನು ನಿರಾಕರಿಸುವ ಪ್ರವೃತ್ತಿಯನ್ನು ಬಿಡಬೇಕು. ನಾವು ಹಳೆಯ ಸಂಪ್ರದಾಯವನ್ನು ಪಾಲಿಸುವವರು, ಹೊಸ ತಂತ್ರಜ್ಞಾನವೆಲ್ಲ ಈಗಿನ ತಲೆಮಾರಿಗೆ ಹೊಂದಾಣಿಕೆಯಾಗುತ್ತದೆ ಎನ್ನಬಾರದು. ಹೊಸತನ್ನು ಕುತೂಹಲದಿಂದ ಅಭ್ಯಾಸ ಮಾಡಬೇಕು ಎಂದು ಅವರು ಸಲಹೆ ನೀಡಿದರು.

ನಮ್ಮ ಸಂಸ್ಥೆಯ ವತಿಯಿಂದ ಹೊಸದಾಗಿ ಆಧ್ಯಾತ್ಮಿಕ ತರಗತಿಗಳನ್ನು ಹಾಗೂ ವ್ಯಕ್ತಿಗಳ ನಡುವೆ ಬಾಂಧವ್ಯ ವೃದ್ಧಿಸುವಂತಹ ಕೋರ್ಸ್‌ಗಳನ್ನು ಆನ್‌ಲೈನ್ ಮೂಲಕ ಆರಂಭಿಸಿದ್ದೇವೆ. ಮೂರು ತಿಂಗಳಿಗೊಮ್ಮೆ ಚಿಕಾಗೋ ವಿಶ್ವವಿದ್ಯಾನಿಲಯದ ತಜ್ಞರೊಂದಿಗೆ ಸಂವಾದ ಕಾರ್ಯಕ್ರಮವನ್ನು ನಡೆಸುತ್ತೇವೆ ಎಂದರು.

ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಸಮಕುಲಾಧಿಪತಿ ಪ್ರೊ.ಎಸ್.ಸುರೇಶ್ ಮಾತನಾಡಿ, ಔಷಧ ವಿಜ್ಞಾನ ಹಾಗೂ ವೈದ್ಯಕೀಯ ರಂಗದಲ್ಲಿ ಈಗಂತೂ ಹಲವಾರು ಬದಲಾವಣೆಗಳು ಆಗುತ್ತಿರುತ್ತವೆ. ವೈದ್ಯರು ಇದನ್ನೆಲ್ಲ ಕೂಲಂಕಷವಾಗಿ ಗಮನಿಸುತ್ತಿರಬೇಕು. ಸುಮಾರು 45 ವರ್ಷಗಳ ಹಿಂದೆ ತಮಿಳಿನ ಸೂಪರ್‌ಸ್ಟಾರ್ ಡಾ.ಎಂಜಿಆರ್ ಅವರ ಗಂಟಲಿಗೆ ಗುಂಡು ತಗುಲುತ್ತದೆ. ಆಗ ನುರಿತ ವೈದ್ಯರ ತಂಡ ಅವರಿಗೆ ಅಂದು ಇದ್ದ ಸೌಲಭ್ಯಗಳನ್ನೇ ಬಳಸಿಕೊಂಡು ಅವರನ್ನು ಪ್ರಾಣಾಪಾಯದಿಂದ ಪಾರು ಮಾಡುತ್ತಾರೆ. ಧ್ವನಿಯನ್ನು ಮೊದಲಿನಂತೆ ಹೊರಡಿಸಲು ಸಾಧ್ಯವಿಲ್ಲವಾಗುತ್ತದೆ. ಆದ್ದರಿಂದ ಈಗಿನ ವೈದ್ಯರಿಗೆ ಅಂತಹ ಸವಾಲುಗಳು ಹೆಚ್ಚಾಗಿ ಬರಲು ಸಾಧ್ಯವಿಲ್ಲ. ಏಕೆಂದರೆ ತಂತ್ರಜ್ಞಾನ ಅಭಿವೃದ್ಧಿ ಹೊಂದುತ್ತಾ ಸಾಗುತ್ತಿದೆ. ಅವುಗಳನ್ನು ಅಳವಡಿಸಿಕೊಂಡು ಉತ್ತಮ ಚಿಕಿತ್ಸೆ ನೀಡುವುದು ಅವಶ್ಯವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಲಾರಿಂಗೋಲಜಿ ಹಾಗೂ ವಾಯ್ಸ್ ಸಂಘಟನೆಯ ಅಧ್ಯಕ್ಷ ಡಾ. ಎಸ್.ತಿರುನವುಕ್ಕರಸು, ಸಂಘಟನಾ ಸಮಿತಿ ಅಧ್ಯಕ್ಷರಾದ ಡಾ. ಎಂ.ಬಿ.ಭಾರತಿ, ಡಾ. ದಿನೇಶ್ ಶೇಷಪ್ಪ, ಸಹ ಸಮಿತಿಯ ಅಧ್ಯಕ್ಷ ಡಾ. ಎ.ಆರ್.ಬಾಬು, ಕಾರ್ಯದರ್ಶಿ ಡಾ. ಬಿ.ಎಸ್.ರಾಕೇಶ್, ಅಕಾಡೆಮಿಕ್ ಛೇರ್ಮನ್ ಡಾ. ಸುಹೇಲ್ ಹಸನ್, ಹಿರಿಯ ವೈದ್ಯರಾದ ಡಾ. ಸುನೈ ಹಸ್ಸಾ, ಡಾ. ತೌರ್ ಇಲ್‌ಮಜ್, ಡಾ. ಅಹಮದ್ ಎಲ್‌ಸೊಬಿಕಿ, ಡಾ. ಮೈಕೆಲ್ ಜೆರುಟ್ವರ್ ಮತ್ತಿತರರು ಉಪಸ್ಥಿತರಿದ್ದರು.

ವೈದ್ಯರು ಆರೋಗ್ಯಕರ ಸಮಾಜ ನಿರ್ಮಾಣಕ್ಕಾಗಿ ಜೀವನ ಮುಡಿಪಾಗಿಡುತ್ತಾರೆ

ವಿಧಾನ ಪರಿಷತ್ ಸದಸ್ಯ ಡಾ|| ಡಿ.ತಿಮ್ಮಯ್ಯ ಅಭಿಮತ



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಶನಿವಾರ ಅನ್ವೇಷಣಾ ಸೇವಾ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ 'ವಿಶ್ವ ವೈದ್ಯರ ದಿನಾಚರಣೆ' ಕಾರ್ಯಕ್ರಮದಲ್ಲಿ ವಿವಿಧ ಆಸ್ಪತ್ರೆಗಳ ಹಿರಿಯ ವೈದ್ಯರಿಗೆ 'ವೈದ್ಯಶ್ರೀ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೈಸೂರು,ಜು.13(ಎಂಟಿವೈ)- ಎಲ್ಲರೂ ಮಾನಸಿಕ ಮತ್ತು ದೈಹಿಕ ಆರೋಗ್ಯ ಕಾಪಾಡಿಕೊಂಡರೆ ಆರೋಗ್ಯವಂತ ಸಮಾಜ ನಿರ್ಮಾಣ ಸಾಧ್ಯ ಎಂದು ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಶನಿವಾರ ಅನ್ವೇಷಣಾ ಸೇವಾ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ 'ವಿಶ್ವ ವೈದ್ಯರ ದಿನಾಚರಣೆ' ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿ ವರ್ಷ ಜು.1ರಂದು ವಿಶ್ವ ವೈದ್ಯರ ದಿನಾಚರಣೆ ಆಚರಿಸಲಾಗುತ್ತಿದ್ದು, ಆ ಮೂಲಕ ವೈದ್ಯಕೀಯ ಕ್ಷೇತ್ರಕ್ಕೆ ಮಹತ್ತರ ಕೊಡುಗೆ ನೀಡಿದ ಹಿರಿಯ ವೈದ್ಯರೂ ಹಾಗೂ ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ ಡಾ.ಬಿ.ಸಿ.ರಾಯ್ ಅವರ ಸೇವೆಯನ್ನು ಸ್ಮರಿಸಲಾಗುತ್ತದೆ. ಡಾ.ಬಿ.ಸಿ. ರಾಯ್ ಅವರು ಜನಪ್ರಿಯ ವೈದ್ಯರಾಗಿದ್ದು, ಅವರನ್ನು ಕಾಂಗ್ರೆಸ್ ಪಕ್ಷ ರಾಜಕೀಯ ಕ್ಷೇತ್ರಕ್ಕೆ ಜು.1ರಂದೇ ಜನಿಸಿದ್ದ ರಾಯ್ ಅವರು ಕಾಕತಾಳೀಯ ಎಂಬಂತೆ ಜು.1ರಂದೇ ಮರಣ ಹೊಂದಿದರು. ಈ ಹಿನ್ನೆಲೆಯಲ್ಲಿ ಭಾರತದ ಎಲ್ಲಾ ವೈದ್ಯಕೀಯ ಸಂಘಟನೆಗಳು ಒಮ್ಮತದಿಂದ ಜು.1ರಂದೇ ಸೇರಿ ವಿಶ್ವವೈದ್ಯರ ದಿನ ಆಚರಿಸಲು ನಿರ್ಧರಿಸಿ ಗೌರವ ಸಮರ್ಪಿಸುತ್ತಿವೆ ಎಂದರು.

ವೈದ್ಯರು ತಮ್ಮ ಜೀವನವನ್ನು ಬಡವರು, ರೋಗಿಗಳ ಜೀವನಕ್ಕಾಗಿ ಮುಡುಪಾಗಿಟ್ಟು ಬೇರೆಯವರ ಆರೋಗ್ಯ ಕಾಪಾಡಲು ಶ್ರಮಿಸುತ್ತಾರೆ. ಆ ಮೂಲಕ ಆರೋಗ್ಯವಂತ ಸಮಾಜ ನಿರ್ಮಾಣಕ್ಕಾಗಿ ಶ್ರಮಿಸುತ್ತಿದ್ದಾರೆ. ಸಮಾಜ ಆರೋಗ್ಯಕರವಾಗಿರಬೇಕಾದರೆ ಜನ ಆರೋಗ್ಯವಂತರಾಗಿರಬೇಕು. ದೈಹಿಕ, ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಬೇಕು. ಆಗ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯ. ಈ ಜವಾಬ್ದಾರಿಯನ್ನು ವೈದ್ಯರು ನಿಭಾಯಿಸುತ್ತಿದ್ದಾರೆ ಆದರೆ ಸಾಮಾಜಿಕವಾಗಿರುವ ಬಡತನ, ನಿರುದ್ಯೋಗ ಸಮಸ್ಯೆ ಹೋಗಲಾಡಿಸುವ ಅನಿವಾರ್ಯತೆ ಇದೆ ಎಂದರು.

ಈ ಹಿಂದೆ ಪ್ಲೇಗ್, ಕಾಲರ, ದಡಾರದಂತಹ ಕಮ್ಯುನಿಟಿ ಡಿಸೀಸ್ ವ್ಯಾಪಿಸುತ್ತಿದ್ದವು. ಇದೀಗ ಆ ರೋಗಗಳು ನಿಯಂತ್ರಣಕ್ಕೆ ಬಂದಿವೆ. ಆದರೆ, ವೈರಸ್‌ಗಳಿಂದ ಹಬ್ಬುವ ರೋಗಗಳು ಹೆಚ್ಚಾಗುತ್ತಿವೆ. ಬಿಪಿ, ಶುಗರ್ ಮಾತ್ರವಲ್ಲದೆ, ಜೀವನ ಶೈಲಿ, ಆಹಾರ ಪದ್ಧತಿಯಿಂದಲೂ ಸಾಕಷ್ಟು ಆರೋಗ್ಯ ಸಮಸ್ಯೆಯ ಬಾಧೆ ಕಾಡುತ್ತಿದೆ. ಈ ಹಿನ್ನೆಲೆಯಲ್ಲಿ ಎಲ್ಲರೂ ಕಾಲ ಕಾಲಕ್ಕೆ ತಪಾಸಣೆ ಮಾಡಿಸಿಕೊಂಡು ಆರೋಗ್ಯವಂತರಾಗಲು ಬದ್ಧರಾಗಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಕೆ.ಎಂ.ಲೋಕನಾಥ್ ಅವರು ಹಿರಿಯ ವೈದ್ಯರಾದ ಡಾ.ಮಾದಪ್ಪ(ಸಿಗ್ಮಾ ಆಸ್ಪತ್ರೆ), ಡಾ.ಹರ್ಷ ಬಸಪ್ಪ(ಜಯದೇವ ಹೃದ್ರೋಗ ಆಸ್ಪತ್ರೆ), ಡಾ.ಎಸ್.ರವಿಶಂಕರ್(ಕಾಮಾಕ್ಷಿ ಆಸ್ಪತ್ರೆ), ಡಾ.ಸಂದೀಪ್(ಸಹಾಯಕ ಪ್ರಾಧ್ಯಾಪಕರು ಸರ್ಕಾರಿ ಪ್ರಕೃತಿ ಮತ್ತು ಯೋಗ ಮಹಾವಿದ್ಯಾಲಯ) ಹಾಗೂ ಡಾ.ಎಸ್.ಜಯಶ್ರೀ (ಜೆಎಸ್‌ಎಸ್ ಆಸ್ಪತ್ರೆ) ಅವರಿಗೆ ವೈದ್ಯಶ್ರೀ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ನಿರ್ದೇಶಕರಾದ ಪ್ರೊ.ಎಂ.ಪುಷ್ಪಾವತಿ, ಅನ್ವೇಷಣಾ ಸೇವಾ ಟ್ರಸ್ಟ್ ಆರ್ಯ ಅಮರ್‌ನಾಥರಾಜೇ ಅರಸ್, ಮೈಸೂರು ಮೆಡಿಕಲ್ ಕಾಲೇಜು ವಿಶ್ರಾಂತ ಡೀನ್ ಡಾ.ಹೆಚ್. ಹನುಮಂತಪ್ಪ ಚುಟುಕು ಸಾಹಿತ್ಯ ಪರಿಷತ್‌ನ ಡಾ.ಎಂ.ಜಿ.ಆರ್.ಅರಸ್, ಅನ್ವೇಷಣಾ ಸೇವಾ ಟ್ರಸ್ಟ್ ಉಪಾಧ್ಯಕ್ಷ ಹೆಚ್.ಎಂ.ಟಿ. ಲಿಂಗರಾಜೇ ಅರಸ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಇಂಡಿಯನ್ 2 (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಮಹಾರಾಜ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಹಿಂದೂಸ್ತಾನಿ 2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಇಂಡಿಯನ್ 2 (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಕಲ್ಕಿ (ಕ)	4 ಪ್ರದರ್ಶನಗಳು
ರಾಜಕಮಲ್	
ಸರ್ಫಿರಾ (ಹಿಂ)	4 ಪ್ರದರ್ಶನಗಳು
ಸಂಗಂ	
ಇಂಡಿಯನ್ 2 (ತ)	4 ಪ್ರದರ್ಶನಗಳು
ಲಿಡೋ	
ಶಾಸ್ತ್ರಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಇಂಡಿಯನ್ 2 (ತ)	4 ಪ್ರದರ್ಶನಗಳು
ಪ್ರಭಾ	
ಜಾಕಿ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕಲ್ಕಿ 2898 ಎಡಿ (3ಡಿ) (ತೆ): ಬೆ.9.35ಕ್ಕೆ, ಇಂಡಿಯನ್ 2 (ತ): ಮ.1ಕ್ಕೆ, ಇನ್‌ಸೈಡ್ ಔಟ್ 2 (3ಡಿ)(ಇಂ): ಸಂ.4.35ಕ್ಕೆ, ಕಲ್ಕಿ 2898 ಎಡಿ (ಕ): ಸಂ.6.45ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 2	ಸರ್ಫಿರಾ (ಹಿಂ): ಬೆ.9.45ಕ್ಕೆ, ಮ.12.50ಕ್ಕೆ, ರಾ.7.20ಕ್ಕೆ, ರಾ.10.20ಕ್ಕೆ, ಕಲ್ಕಿ 2898 ಎಡಿ(3ಡಿ) (ತೆ): ಮ.3.55ಕ್ಕೆ.
ಸ್ಕ್ರೀನ್ 3	ಕಲ್ಕಿ 2898 ಎಡಿ (ಕ): ಬೆ.9.30ಕ್ಕೆ, ಮ.12.55ಕ್ಕೆ, ಫ್ಲೈ ಮಿ ಟು ದಿ ಮೂನ್ (ಇಂ): ಸಂ.4.20ಕ್ಕೆ, ರಾ.10.25ಕ್ಕೆ, ಕಲ್ಕಿ 2898 ಎಡಿ (3ಡಿ) (ಹಿಂ): ರಾ.7ಕ್ಕೆ.
ಸ್ಕ್ರೀನ್ 4	ಇಂಡಿಯನ್ 2 (ತ): ಬೆ.9.25ಕ್ಕೆ, ಮ.3.10ಕ್ಕೆ, ಸಂ.6.40ಕ್ಕೆ, ರಾ.10.10ಕ್ಕೆ, ಡೆಸ್ಪಿಕಬಲ್ ಮಿ 4 (3ಡಿ) (ಇಂ): ಮ.1ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಕಲ್ಕಿ 2898 ಎಡಿ (3ಡಿ) (ಹಿಂ): ಬೆ.11.15ಕ್ಕೆ, ಸಂ.6.45ಕ್ಕೆ, ಕಲ್ಕಿ 2898 ಎಡಿ (3ಡಿ) (ತೆ): ಮ.3ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.10.15ಕ್ಕೆ, ಮ.2ಕ್ಕೆ, ಸಂ.5.45ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಕಲ್ಕಿ 2898 ಎಡಿ (ತೆ): ಬೆ.10.45ಕ್ಕೆ, ಸಂ.6.15ಕ್ಕೆ, ಕಲ್ಕಿ 2898 ಎಡಿ (ಹಿಂ): ಮ.2.30ಕ್ಕೆ, ರಾ.10ಕ್ಕೆ.
ಸ್ಕ್ರೀನ್ 4	ಡೆಸ್ಪಿಕಬಲ್ ಮಿ 4 (3ಡಿ) (ಇಂ): ಬೆ.10.40ಕ್ಕೆ, ಮ.3.20ಕ್ಕೆ, ರಾ.8ಕ್ಕೆ, ರಾ.10.15ಕ್ಕೆ, ಕಿಲ್ (ಹಿಂ): ಮ.12.55ಕ್ಕೆ, ಸಂ.5.35ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821-2973519

ಸ್ಕ್ರೀನ್ 1	ಕಲ್ಕಿ 2898 ಎಡಿ (ಕ): ಬೆ.10.30ಕ್ಕೆ, ಸಂ.6ಕ್ಕೆ, ಲವ್ ಲಿ (ಕ): ಮ.1.55ಕ್ಕೆ.
ಸ್ಕ್ರೀನ್ 2	ಇಂಡಿಯನ್ 2 (ತ): ಮ.1ಕ್ಕೆ, ಸಂ.4.25ಕ್ಕೆ, ರಾ.7.50ಕ್ಕೆ.
ಸ್ಕ್ರೀನ್ 3	ಕಲ್ಕಿ 2898 ಎಡಿ (3ಡಿ)(ತೆ): ಬೆ.11.10ಕ್ಕೆ, ಮ.2.40ಕ್ಕೆ, ಇಂಡಿಯನ್ 2 (ತ): ಸಂ.6.05ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಇಂಡಿಯನ್ 2 (ತ): ಬೆ.10ಕ್ಕೆ, ಕಲ್ಕಿ 2898 ಎಡಿ (ಕ): ಮ.1.25ಕ್ಕೆ, ರಾ.7.45ಕ್ಕೆ, ಖಾಲಿ ಕುಡುಕರು (ಕ): ಸಂ.4.50ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಹೈದರಾಬಾದ್ ಬಿಲ್ಡರ್‌ಗೆ 21 ಸಲ ಇರಿದು ಕೊಲೆ

ಬೆಂಗಳೂರಿನಲ್ಲಿ ಮೂವರ ಬಂಧನ

ಬೀದರ್, ಜು.13- ಹೈದರಾಬಾದ್‌ನ ಚಿಂತಲದ ಬಿಲ್ಡರ್ ಕೊಲೆ ಪ್ರಕರಣವನ್ನು ಬೀದರ್ ಜಿಲ್ಲಾ ಪೊಲೀಸರು ಭೇದಿಸಿದ್ದಾರೆ. ಘಟನೆ ಸಂಬಂಧ ಮೂವರನ್ನು ಪೊಲೀಸರು ಬೆಂಗಳೂರಿನಲ್ಲಿ ಬಂಧಿಸಿದ್ದಾರೆ. ಇನ್ನೂ ಮೂವರ ಪತ್ತೆ ಕಾರ್ಯ ನಡೆದಿದೆ.

ಜಿಲ್ಲೆಯ ಮನ್ನಾಎಖೇಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ತಾಳಮಡಗಿ ಗ್ರಾಮದ ಧಾಬಾವೊಂದರ ಬಳಿ ಮೇ 25ರಂದು ಅಪರಿಚಿತ ವ್ಯಕ್ತಿ ಮೃತದೇಹ ಪತ್ತೆಯಾಗಿತ್ತು. 21 ಸಲ ಇರಿದು ಕೊಲೆ ಮಾಡಲಾಗಿತ್ತು. ಮೃತರ ಸಂಬಂಧಿಕರನ್ನು ಪತ್ತೆ ಹಚ್ಚಿದಾಗ, ಹೈದರಾಬಾದ್‌ನ ಚಿಂತಲದ ಬಿಲ್ಡರ್ ಮಲ್ಲಿಕಾರ್ಜುನರಾವ್ ಗೋಪಾಲರಾವ್ ಕುಪ್ಪಲ ಎಂಬುದು ಗೊತ್ತಾಯಿತು. ಮಹಾರಾಷ್ಟ್ರದ ತಾಂಬೋಳ ಗ್ರಾಮದ ಬಿಲ್ ಯಾರ್ಡ್ ರಿಕ್ರಿಯೇಶನ್ ಕ್ಲಬ್‌ಗೆ ಕಾರಿನಲ್ಲಿ ಹೋಗಿ ಹೈದರಾಬಾದ್‌ಗೆ ಮರಳುವಾಗ ತಾಳಮಡಗಿ ಸಮೀಪ ಇರಿದು ಸಾಯಿಸಲಾಗಿದೆ ಎನ್ನುವುದು ತನಿಖೆಯಿಂದ ಗೊತ್ತಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ನಗರದಲ್ಲಿ ಶನಿವಾರ ಮಾಹಿತಿ ಹಂಚಿಕೊಂಡರು.

ನಿಧನ



W/o. ಲೇಟ್ ಶ್ರೀ ಬಿ.ಆರ್. ಜ್ಯೋತಿ ಕರ್ನಾಟಕ ರಾಜ್ಯ ವಿದ್ಯುತ್ ಗುತ್ತಿಗೆದಾರರ ಮೈಸೂರು ಸಂಘದ ಮಾಜಿ ಉಪಾಧ್ಯಕ್ಷರ ಪತ್ನಿ ರವರು ದಿನಾಂಕ 13.07.2024 ರಂದು ದೈವಾಧೀನರಾಗಿದ್ದಾರೆ ಎಂದು ತಿಳಿಸಲು ವಿಷಾದಿಸುತ್ತೇವೆ. ದಿನಾಂಕ 14.07.2024 ಭಾನುವಾರ ಮೃತರ ಅಂತ್ಯಸಂಸ್ಕಾರ ವನ್ನು ಮಧ್ಯಾಹ್ನ 1.00ಘಂಟೆ ನಂತರ ಚಾಮುಂಡಿ ಬೆಟ್ಟದ ಪಾದದ ಬಳಿ ನೆರವೇರಲಿದೆ.

ಶ್ರೀಮತಿ ಶಕುಂತಲಾ

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಶನಿವಾರ	104.60 ಅಡಿ
ಒಳಹರಿವು	3406 ಕ್ಯೂಸೆಕ್
ಹೊರಹರಿವು	2257 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284 ಅಡಿ
ಶನಿವಾರ	2284 ಅಡಿ
ಒಳಹರಿವು	20000 ಕ್ಯೂಸೆಕ್
ಹೊರಹರಿವು	20000 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಶನಿವಾರ	2851 ಅಡಿ
ಒಳಹರಿವು	1673 ಕ್ಯೂಸೆಕ್
ಹೊರಹರಿವು	200 ಕ್ಯೂಸೆಕ್

ಹಸಿರು ನಮ್ಮ ಉಸಿರು

10ನೇ ವರ್ಷದ ಪುಣ್ಯಸ್ಮರಣೆ




ನೀವು ನಮ್ಮನ್ನಗಲಿ ಇಂದಿಗೆ 10 ವರ್ಷಗಳು ಕಳೆದರೂ ನಿಮ್ಮ ನೆನಪು ನಮ್ಮೆಲ್ಲರ ಹೃದಯದಲ್ಲಿ ಇಂದಿಗೂ ಅಮರವಾಗಿದೆ

ದುಃಖತಪ್ತರು: ಲಿಂಗಣ್ಣ ಮತ್ತು ಮಕ್ಕಳು ಹಾಗೂ ಕುಟುಂಬವರ್ಗ ಚಾಮರಾಜನಗರ ಜಿಲ್ಲೆ

ಶ್ರೀಮತಿ **ಮಹದೇವಮ್ಮ**

ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ



ದಿ॥ ಶ್ರೀಮತಿ ಕಮಲ ಬಾಯಿ ಗಾವಡಗೆರೆ
(80 ವರ್ಷ)

ಇವರು ದಿ: 05-07-2024ರ ಶುಕ್ರವಾರ ದಂದು ದೈವಾಧೀನರಾಗಿದ್ದು ದಿನಾಂಕ 14-07-2024ರ ಭಾನುವಾರದಂದು ಇವರ ಕಾರ್ಯ ತಿಥಿ (ಕರ್ಮಾಂತ್ರ) ಹಾಗೂ ದಿ: 15-07-2024ರ ಸೋಮವಾರ **ವೈಕುಂಠ ಸಮಾರಾಧನಾ ಕಾರ್ಯವನ್ನು** ಇವರ ಸ್ವಗೃಹ ಗಾವಡಗೆರೆಯಲ್ಲಿ ಮಧ್ಯಾಹ್ನ 12-30 ಗಂಟೆಗೆ ಏರ್ಪಡಿಸಲಾಗಿದ್ದು ಈ ಕಾರ್ಯಗಳಿಗೆ ಸಂಬಂಧಿಕರು, ಸ್ನೇಹಿತರು, ನಿಮ್ಮನ್ನು ಖುದ್ದಾಗಿ ಭೇಟಿ ಮಾಡಲು ಸಾಧ್ಯವಾಗದ ಕಾರಣ ಇದನ್ನೇ ಆಹ್ವಾನವೆಂದು ಭಾವಿಸಿ ಈ ಪುಣ್ಯ ಕಾರ್ಯದಲ್ಲಿ ಪಾಲ್ಗೊಂಡು ಅವರ ಆತ್ಮಕ್ಕೆ ಶಾಂತಿ ಕೋರುವಂತೆ ವಿನಂತಿಸಿಕೊಳ್ಳುತ್ತೇವೆ.

ಶ್ರೀ ಹೊನ್ನಪ್ಪ ರಾವ್ ಕಾಳಿಂಗೆ, ಅಧ್ಯಕ್ಷರು,
ಶ್ರೀ ಶಿವ ಛತ್ರಪತಿ ಮರಾಠ ಶ್ರೇಯೋಭಿವೃದ್ಧಿ ಸಮಿತಿ,
ಗಾವಡಗೆರೆ, ಹುಣಸೂರು ತಾಲ್ಲೂಕು ಹಾಗೂ
ದುಃಖತಪ್ತ ಕುಟುಂಬ ವರ್ಗದವರು, ಗಾವಡಗೆರೆ

WANTED

- P.R.O. (3-5 Years of Exp., in Hospital Sector)
- PEDIATRICIAN (MD / DNB)
- LIBRARIAN (MLIS / MLS & 3-5 years of experience in Nursing college)

WALK IN INTERVIEW : 10am to 12pm

St. JOSEPH'S HOSPITAL
Bannimantap, Mysore.
Mob : 9606990713
Email : stjosephhospitalhr2024@gmail.com

ಜಮೀನು ಬೇಕಾಗಿದೆ

ವಸತಿ / ಕೃಷಿ ಜಮೀನು ಖರೀದಿ ಅಥವಾ ಜಂಟಿ ಅಭಿವೃದ್ಧಿಗಾಗಿ ಪ್ರತಿಷ್ಠಿತ ಕಂಪನಿಗೆ ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಹಾಗೂ ಕೊಡಗು ಜಿಲ್ಲೆಗಳಲ್ಲಿ ಬೇಕಾಗಿದೆ. ಆಸಕ್ತರು ಸಂಪರ್ಕಿಸಿ:

Mob: 9606484588

ZOR

ಮಲಮ್ ಮತ್ತು ಲೋಷನ್
ಶೀಘ್ರ ಪರಿಹಾರ
ಕಜ್ಜಿ
ತುರಿಕೆ
ಗಜಕರ್ಣ
ಮೊಡವೆಗಳು
ಶೀತ ಬಿರುಕುಗಳು

Representatives & Managers Required
For more Information Call / Whatsapp 8217312776

12ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 12 ವರ್ಷ ಕಳೆದರೂ. ಸದಾ ನಿಮ್ಮ ನೆನಪಿನಲ್ಲಿರುವ ಮಗಳು: ಶಿಲ್ಪಶ್ರೀ, ಪತ್ನಿ – ನಾಗರತ್ನ ಮತ್ತು ಕುಟುಂಬ ವರ್ಗದವರು, ಕೆಂಪಸಿದ್ದನಹುಂಡಿ, ನಂಜನಗೂಡು ತಾ॥

ಸಿದ್ದು.ಕೆ.ಎಸ್
ಮರಣ: 14.07.2012

WANTED

QUALITY CONTROL & MARKETING
Diploma in Civil

ACE INFRATECH
Kadakola, Mysuru
95352 07443
80507 99462

ತಕ್ಷಣ ಬೇಕಾಗಿದ್ದಾರೆ

ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹೆಲ್ಪರ್ ಮತ್ತು ಕ್ಯಾಷಿಯರ್ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು

6364748485

Mahendra Developers, Mysore

Openings for

- ACCOUNTANT
- CIVIL ENGINEERS
- SUPERVISORS

Freshers & Experience.
Contact:
Mob: 8884001233

HOUSE FOR SALE

Corner South-East MUDA 40x55 House Lalithmahal Nagara / Alanahalli Layout for sale 8500/- Per Sq.ft negotiable.

Contact :- 7899708676

FOR SALE

WELL ESTABLISHED ZEROX PRINTING AND STATIONARY SHOP OPPOSITE TO V.V.C.E COLLEGE, VIJAYANAGAR, MYSORE

9535496967
7483206967

MUDA APPROVED SITES FOR SALE

"SRI KRISHNA ROYAL CITY LAYOUT"

30x40, 30x50, 30x60 AND COMMERCIAL SITE.

Scan for Location

Attached to Vinayaka Garden City Layout. 500 Mtrs from St. Joseph Central School, Near to Hyundai Car Showroom and Kirloskar Factory.

Bank loan available: HDFC Bank, ICICI Bank

Mob: 96865-73798 / 99450-70808

TAXI



Hi! TAXI

ONLY ONE WAY TAXI CHARGE
MYSORE to BANGALORE
City drop or Pick up
BANGALORE to MYSORE
Airport drop or Pick up
MYSURU
9611177599

MUDA APPROVED SITE FOR SALE

NEAR SARDAR VALLABHBHAI PATEL NAGAR
30x40
Rs 47 Lakhs Only
99458 57017

ಜಮೀನು ಮಾರಾಟಕ್ಕಿದೆ

ಮೈಸೂರು ತಾ. ಹತ್ತವಾಳ ಮುಖ್ಯರಸ್ತೆಯಲ್ಲಿ 1 ಎಕರೆ 28 ಗುಂಟೆ. ಕೋಳವಹುಂಡಿ 1 ಎಕರೆ 31 ಗುಂಟೆ. ಮದ್ದೂರು ಹುಂಡಿ 32 ಗುಂಟೆ, ಮದ್ದೂರು 25 ಗುಂಟೆ, ಮಾವಿನಹಳ್ಳಿ 3 ಎಕರೆ 7 ಗುಂಟೆ ಮತ್ತು 4 ಎಕರೆ 10 ಗುಂಟೆ ಪೆರಿಫೆರಲ್ ರಿಂಗ್ ರಸ್ತೆ ಪಕ್ಕದಲ್ಲಿದೆ. ಮಹಾಲಕ್ಷ್ಮೀ ಲೇಔಟ್ ಪಕ್ಕದಲ್ಲಿ 20 ಗುಂಟೆ ಇತರೆ ಜಮೀನು ಮತ್ತು ತೋಟಗಳು ಮಾರಾಟಕ್ಕಿವೆ. ಸಂಪರ್ಕಿಸಿ:

9945661696, 9663793666

ವಿಲ್ಲಾ ಸೈಟ್–ಹುಣಸೂರು ಸುರಕ್ಷಾ ಎನ್ ಕ್ಲೇವ್

20x30, 20x40, 30x40, 30x50
4Kms ಬಸ್ ಸ್ಟಾಂಡ್ ನಿಂದ, ಕೇವಲ 1 ಲಕ್ಷ ನೀಡಿ, ಬಾಕಿ ಬ್ಯಾಂಕ್ ಲೋನ್ Entrance Arch, DC Approved, Huda Approved, Water Tank, 40 ಅಡಿ ರಸ್ತೆ, 75% ಬ್ಯಾಂಕ್ ಲೋನ್ Rs.675/- Sqft.

9900201234

ಸಾರ್ವಜನಿಕ ತಿಳುವಳಿಕೆ ಪ್ರಕಟಣೆ

ಅನುಸೂಚಿ ಸ್ವತ್ತಿಗೆ ಸಂಬಂಧಪಟ್ಟಂತೆ ನನ್ನ ಕಕ್ಷಿದಾರರಾದ ಶ್ರೀ. ಜಿ. ಶಂಕರ್‌ರವರು ಪಿರಿಯಾಪಟ್ಟಣದ ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ : 143/2024 ಪ್ರಕರಣವನ್ನು ಶ್ರೀ.ಜಿ.ಗಿರಿಗೌಡ ರವರ ವಿರುದ್ಧ ಸಲ್ಲಿಸಿದ್ದು, ಮಾನ್ಯ ನ್ಯಾಯಾಲಯವು ದಿನಾಂಕ: 11-07-2024 ರಂದು ಮುಂದಿನ ಆದೇಶದವರೆಗೆ ಅನುಸೂಚಿ ಸ್ವತ್ತನ್ನು ಯಾವುದೇ ಬಗೆಯಲ್ಲಿ ವರ್ಗಾವಣೆ ಅಥವಾ ಮಾರಾಟ ಮಾಡುವಂತಿಲ್ಲ ಎಂದು ಮಧ್ಯಂತರ ಆದೇಶವನ್ನು ನೀಡಿರುತ್ತದೆ. ಆದುದರಿಂದ, ಸದರಿ ಪ್ರಕರಣದ 1ನೇ ಪ್ರತಿವಾದಿಯಾದ ಶ್ರೀ.ಜಿ.ಗಿರಿಗೌಡರೊಂದಿಗೆ ಅನುಸೂಚಿ ಸ್ವತ್ತಿನ ಸಂಬಂಧ ಯಾವುದೇ ವ್ಯಕ್ತಿ / ವ್ಯಕ್ತಿಗಳು, ಸಂಘ / ಸಂಸ್ಥೆಗಳು ಯಾವುದೇ ರೀತಿಯ ಪರಭಾರೆ / ಕ್ರಯದ ವ್ಯವಹಾರ ಮಾಡಿಕೊಳ್ಳುವುದು ಕಾನೂನು ಬಾಹಿರವಾಗುತ್ತದೆ ಮತ್ತು ಅಂತಹ ವ್ಯವಹಾರವು ನಮ್ಮ ಕಕ್ಷಿಗಾರರಾದ ಶ್ರೀ.ಜಿ.ಶಂಕರ್ ರವರನ್ನು ಯಾವುದೇ ರೀತಿಯಲ್ಲಿ ಬದ್ಧಪಡಿಸುವುದಿಲ್ಲ ಎಂದು ಈ ಮೂಲಕ ಸಾರ್ವಜನಿಕ ತಿಳುವಳಿಕೆ ನೀಡಲಾಗಿದೆ.

ಪಿರಿಯಾಪಟ್ಟಣ ಟೌನ್, ಬಿ.ಎಂ ರಸ್ತೆ ಖಾತೆ ಸಂಖ್ಯೆ : 1982/ಎ ರ ವಿಸ್ತೀರ್ಣ ಪೂರ್ವ ಪಶ್ಚಿಮ 13 ಅಡಿಗಳು, ಉತ್ತರ ದಕ್ಷಿಣ 30 ಅಡಿಗಳ ನಿವೇಶನ ಮತ್ತು ಇದರಲ್ಲಿರುವ ಕಟ್ಟಡ, ಒಟ್ಟು ಸ್ವತ್ತಿಗೆ ಚಕ್ಕುಬಂದಿ :
ಪೂರ್ವಕ್ಕೆ :ಶ್ರೀ. ನಂಜುಂಡಸ್ವಾಮಿರವರ ಸ್ವತ್ತು,
ಪಶ್ಚಿಮಕ್ಕೆ : ಶ್ರೀ. ಜಿ. ರಂಗಸ್ವಾಮಿ ಮತ್ತು ಶ್ರೀ. ಜಿ. ಶಂಕರ್ ರವರ ಸ್ವತ್ತು, ಉತ್ತರಕ್ಕೆ : ಬಿ.ಎಂ.ರಸ್ತೆ,
ದಕ್ಷಿಣಕ್ಕೆ : ಶ್ರೀ. ಜಿ. ಶಂಕರ್ ರವರ ಸ್ವತ್ತು.

Sd/- **H. P. Mahadevaswamy**
Advocate
Chambers - # 729, Shiva Krupa,
Opposite Bus Stop,
State Highway 88, Hinkal,
Mysuru-570030
Mob: 9886363973

ದಿನಾಂಕ: 13-07-2024

ರತ್ನ ಪ್ಯಾರಾ ಮೆಡಿಕಲ್ ಕಾಲೇಜ್

ರಮಾವಿಲಾಸ್ ರಸ್ತೆ, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಹತ್ತಿರ, ಮೈಸೂರು

ಪ್ರವೇಶ ತೆರೆದಿದೆ

ಡಿಪ್ಲೋಮಾ ಇನ್ ಮೆಡಿಕಲ್ ಲ್ಯಾಬ್ ಟೆಕ್ನಾಲಜಿ (DMLT)
SSLC / PUC Pass / Fail
ಬ್ಯಾಚುಲರ್ಸ್ ಇನ್ ಮೆಡಿಕಲ್ ಲ್ಯಾಬ್ ಟೆಕ್ನಾಲಜಿ (B.Voc)

9886654463

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

BIG Brand Sale

Celebrating 25+ YEAR
UPTO 50% On All In-house Brands
GENTS & LADIES FOOTWEAR
– PICK THE BEST FOR UR FEET –
SHOE WORLD ESTD.1998
Best Brands at Your Feet...
RAMASWAMY CIRCLE, 100th ROAD, MYSURU. ✆ : 2424252 11am to 8-30pm

Post of General Manager

We are currently seeking a dynamic and detail-oriented Operational (General Manager) to join our team

Job Description

The Operational (General Manager) will be responsible for managing and overseeing the day-to-day operations of our real estate office.

Key Responsibilities

Coordinate and manage daily operational activities.
Maintain records of property listings, agreements and transactions.
Liaise with clients, vendors, Legal and contractors to ensure smooth operations
Support the management in administrative tasks and office management
Ensure compliance with company policies and procedures.

Qualifications

Any Bachelor's degree in Business Administration or Management, Real Estate, or a related field.

Santhosh Shelters Pvt .Ltd. Bogadi, Mysore.
Email resume to: sales@santhoshshelters.com
Contact: +91-9886072789, 9611113680
Address: #06, Mamatha Farm,
Bogadi Gaddige Road, Mysuru- 570026.

ದಿ ಮೈಸೂರು ಮರ್ಚೆಂಟ್ಸ್ ಕೋ ಆಪರೇಟಿವ್ ಬ್ಯಾಂಕ್ ಲಿ.,

ಜಗನ್ಮೋಹನ ಪ್ಯಾಲೆಸ್ ರಸ್ತೆ, ಮೈಸೂರು 570001.

ಬ್ಯಾಂಕಿನ 2023-24ನೇ ಸಾಲಿನ ಅರವತ್ತೈದನೇಯ
ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕಾ

ಮೇಲ್ಕಂಡ ಬ್ಯಾಂಕಿನ 2023-24ನೇ ಸಾಲಿನ ಸರ್ವಸದಸ್ಯರ ಸಭೆಯನ್ನು
ತಾರೀಖು 14.07.2024ನೇ ಭಾನುವಾರ ಬೆಳಿಗ್ಗೆ 10.30 ಗಂಟೆಗೆ
ಮೈಸೂರು ಸಿಟಿ, ಜೆ.ಪಿ.ನಗರದ, ಇಂಡಸ್ಟ್ರಿಯಲ್ ಸಬರ್ಬ್‌ನಲ್ಲಿರುವ
ಬಸಂತ್ ಕನ್‌ವೆನ್‌ಷನ್ ಸೆಂಟರ್ ಸಮುದಾಯ ಭವನದಲ್ಲಿ
ನಮ್ಮ ಬ್ಯಾಂಕಿನ ಅಧ್ಯಕ್ಷರಾದ
ಶ್ರೀ ಆರ್.ಆನಂದ್

ರವರ ಅಧ್ಯಕ್ಷತೆಯಲ್ಲಿ ನಡೆಸಲು ಏರ್ಪಡಿಸಲಾಗಿದೆ. ಸದಸ್ಯರೆಲ್ಲರೂ ಸಕಾಲಕ್ಕೆ ಸಭೆಗೆ ದಯಮಾಡಿ ಆಗಮಿಸ ಬೇಕಾಗಿ ಕೋರಿದೆ. ಕಾರಣಾಂತರದಿಂದ ಆಹ್ವಾನಪತ್ರಿಕೆ ಯಾರಿಗಾದರು ತಲುಪದೇ ಹೋಗಿದ್ದರೆ ಇದನ್ನೇ ಆಹ್ವಾನವೆಂದು ಮನ್ನಿಸಿ ಸಭೆಗೆ ಬಂದು ಭಾಗವಹಿಸಬೇಕೆಂದು ಈ ಮೂಲಕ ಕೋರುತ್ತೇವೆ. ಸರ್ವಸದಸ್ಯರ ಸಭೆಯ ನಂತರ ಸನ್ಮಾನ್ಯ ಎಲ್ಲಾ ಸದಸ್ಯರುಗಳಿಗೂ ಭೋಜನ ವ್ಯವಸ್ಥೆ ಮಾಡಲಾಗಿದ್ದು, ಸದಸ್ಯರು ಸ್ವೀಕರಿಸಬೇಕೆಂದು ಕೋರುತ್ತೇವೆ.

ಮೈಸೂರು.
ದಿ: 22.05.2024

ಡೈರೆಕ್ಟರುಗಳ ಮಂಡಳಿ ಅಪ್ಪಣೆ ಮೇರೆಗೆ
ಸಹಿ:– ಶ್ರೀಧರ್.ಬಿ.ಕುಲಕರ್ಣಿ
ಪ್ರಧಾನ ವ್ಯವಸ್ಥಾಪಕರು

ಸನ್ಮಾನ್ಯ ದಿ ಮೈಸೂರು ಮರ್ಚೆಂಟ್ಸ್ ಕೋ ಆಪರೇಟಿವ್ ಬ್ಯಾಂಕಿನ ಎಲ್ಲಾ ಸದಸ್ಯರುಗಳಿಗೆ ತಿಳಿಯಪಡಿಸುವುದೇನೆಂದರೆ

ದಿ ಮೈಸೂರು ಮರ್ಚೆಂಟ್ಸ್ ಕೋ ಆಪರೇಟಿವ್ ಬ್ಯಾಂಕಿನ 65ನೇ ವಾರ್ಷಿಕ ಸರ್ವ ಸದಸ್ಯರ ಸಭೆಯು **ತಾರೀಖು 14.07.2024ನೇ ಭಾನುವಾರ** ಮೈಸೂರು ಸಿಟಿ, ಜೆ.ಪಿ.ನಗರದ ಇಂಡಸ್ಟ್ರಿಯಲ್ ಸಬರ್ಬ್‌ನಲ್ಲಿರುವ ಬಸಂತ್ ಕನ್‌ವೆನ್‌ಷನ್ ಸೆಂಟರ್ ಸಮುದಾಯ ಭವನದಲ್ಲಿ ನಡೆಯಲಿದ್ದು, ಈ ಸಂಬಂಧ ಸನ್ನದು ಲೆಕ್ಕಪರಿಶೋಧಕರಿಂದ ಪರಿಶೋಧಿತವಾದ ಪುಸ್ತಕವನ್ನು ಮಾನ್ಯ ಸದಸ್ಯರುಗಳಿಗೆ ಕಳುಹಿಸಲಾಗಿದೆ. ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ರವರ ಸೂಚನೆ ರೀತ್ಯಾ ಸದರಿ ಸರ್ವಸದಸ್ಯರ ಸಭೆಯಲ್ಲಿ ಚರ್ಚಿಸಬೇಕಾದ ವಿಷಯ.

"ವಿಷಯ ಸಂಖ್ಯೆ–11 : ಸಹಕಾರಿ ಕಾಯ್ದೆ 1959 ಕ್ಕೆ ತರುವ ತಿದ್ದುಪಡಿಯನ್ನು ನಮ್ಮ ಬ್ಯಾಂಕಿನ ಬೈಲಾದಲ್ಲಿ ಅಳವಡಿಸಿಕೊಳ್ಳಬೇಕಾಗಿರುವ ವಿಷಯ"

ಈ ವಿಷಯವನ್ನು ಸರ್ವಸದಸ್ಯರ ಸಭೆಯ ಅಜೆಂಡಾ 11 ಎಂದು ಪರಿಗಣಿಸಬೇಕೆಂದು ಆಡಳಿತ ಮಂಡಳಿ ಕೋರುತ್ತದೆ.

ವಿ.ಸೂ: ಸದಸ್ಯರುಗಳು ದಯವಿಟ್ಟು ನಮ್ಮ ಬ್ಯಾಂಕಿನಿಂದ ನೀಡಿರುವ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರಬೇಕಾಗಿ ವಿನಂತಿ

ಸರ್ವಸದಸ್ಯರ ಸಭೆ ನಡೆಯುವ ಸ್ಥಳದ ಮಾರ್ಗಕ್ಕಾಗಿ ಕೆಳಕಂಡ ಕ್ಯೂ ಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ

IN THE COURT OF THE PRINCIPAL DISTRICT AND SESSIONS JUDGE AT MYSURU

COM.O.S. 95/2021

PLAINTIFF: -
M/s. **BEST CORRUGATORS**
Represented by its Managing Partner, Sri. Anantha shayana K.V. S/o K.V. Vishveshwaraiah, Aged about 53 yrs, Plot No. 131/A, Belagola Industrial Area, RBI Road, Metagahalli, Mysore-16.
V/s
DEFENDANT: -
MRS. MANJU ROOBY
Prop. Of Queens Cartons,
Plot No. R-160, Hebbal Industrial Area, Hebbal, Mysuru.

PAPER PUBLICATION

Whereas the Plaintiff above named has filed suit against the Defendant for recovery of money and the above case fixed for hearing on 12\8\24 at 11am. The defendant may appear himself or through his counsel and he may file his objections, in the event of failure from appearance the Defendant may place exparte and proceed with the case. Given under my hand seal of this Hon'ble Court on this 9th day of July 2024.

By order of the Court
Sd/- Chief Administrative Officer
District & Sessions Court,
Mysuru.

Sd/- Advocate for Plaintiff
SSS LAW ASSOCIATES
1st Floor, Siddu Complex, Main Road, Srirangapatna Town.

ದಾಸ್ತಿ ಪ್ಯಾರಾ ಮೆಡಿಕಲ್ ಕಾಲೇಜು

#ಎಲ್,46/4, ಎಂ.ಜಿ.ಟವರ್ಸ್, 2ನೇ ಮಹಡಿ, (ಜಿ.ಹೆಚ್.ಬಿ. ಕಾಂಪ್ಲೆಕ್ಸ್ ಹಿಂಭಾಗ) 1ನೇ ಹಂತ, ಕುವೆಂಪುನಗರ, ಮೈಸೂರು – 570023, (ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿದೆ)

ಈ ಸಂಸ್ಥೆಯಲ್ಲಿ ಪರಿಣಿತ ವೈದ್ಯರು ಮತ್ತು ತಾಂತ್ರಿಕ ತಜ್ಞರಿಂದ ಬೋಧನೆ.
ಎಸ್.ಎಸ್.ಎಲ್.ಸಿ. ಪಾಸಾದವರಿಗೆ

"ಪ್ರವೇಶ ತೆರೆದಿದೆ, ತ್ವರೆಮಾಡಿ"

- ಡಿಪ್ಲೋಮಾ–ಇನ್–ಮೆಡಿಕಲ್ ಲ್ಯಾಬೋರೇಟರಿ ಟೆಕ್ನಾಲಜಿ (DMLT) (ಸರ್ಕಾರಿ/ಖಾಸಗಿ ಆಸ್ಪತ್ರೆಗಳಲ್ಲಿ ಟೆಕ್ನೀಷಿಯನ್ ಹುದ್ದೆಗೆ ಅವಕಾಶ)
- ಡಿಪ್ಲೋಮಾ –ಇನ್–ಮೆಡಿಕಲ್ ಹೆಲ್ತ್ ಇನ್ಸ್‌ಪೆಕ್ಟರ್ (DMHI) (ಸರ್ಕಾರಿ / ನಗರಪಾಲಿಕೆ / ನಗರಸಭೆ / ಪುರಸಭೆಗಳಲ್ಲಿ ಉದ್ಯೋಗಕ್ಕೆ ಅವಕಾಶ)

8904403905 | 9731507047

ಗುಜರಾತ್ ಕರಕುಶಲ ಉತ್ಸವ 2024



ವಿಶೇಷ ಕರಕುಶಲ ವಸ್ತುಗಳ ನೈಜ ಪ್ರಾತ್ಯಕ್ಷಿಕೆ,
ಕ್ರಿಯಾಶೀಲತೆಯುಳ್ಳ ಕರಕುಶಲಕರ್ಮಿಗಳಿಂದ
ನೇರವಾಗಿ ಗ್ರಾಹಕರಿಗೆ

05 ಜುಲೈ – 14 ಜುಲೈ 2024 | ಬೆಳಿಗ್ಗೆ 10.00 ರಿಂದ ಸಂಜೆ 9.00
ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್
ಹೆಬ್ಬಾಳು ಕೈಗಾರಿಕಾ ಪ್ರದೇಶ, ವರ್ತುಲ ರಸ್ತೆ, ಮೈಸೂರು–570 016

ಇಂದು ಕಡೇ ದಿನ

Organized by Executive Director Indext-c Govt. of Gujarat, Gandhinagar
Supported by : Sports, Youth & Cultural Activities Department Govt. of Gujarat
Sponsored by : Commissioner & Secretary Cottage and Rural Industries Govt. of Gujarat, Gandhinagar
In Association with : JSS Mysore Urban Haat Mysuru

ಪಾರ್ಕಿಂಗ್ ಹಾಗೂ ಪ್ರವೇಶ ಉಚಿತ
+91 9844550845
+91 8197583261

ಇಂದು ಸಂಜೆ ಗಂಟೆ 6 ರಿಂದ ಅಮೃತ ವಿದ್ಯಾಲಯಂ ಶಾಲಾ ಮಕ್ಕಳಿಂದ ಭರತನಾಟ್ಯ ಮತ್ತು ಕಂಸಾಳೆ ನೃತ್ಯ

ನಿಸರ್ಗ ಇಕೋ ಪ್ಯಾರಡೈಸ್

ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು

DTCP APPROVAL

ನಿಮ್ಮ ಕನಸಿನ ನಿವೇಶನ ಮೈಸೂರಿನಲ್ಲಿ

ಸುಲಭ 4 ಕಂತುಗಳ ಸೌಲಭ್ಯವಿದೆ

ಕೇವಲ ₹650/ ಪ್ರತಿ ಚದರ ಅಡಿ

30x40 | 30x50
40x60 | 50x80

ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು

ಕೆಲವೇ ಸೈಟ್‌ಗಳು ಮಾತ್ರ ಲಭ್ಯ

ಹೈಲ್ಯಾಂಡ್ ಪ್ರಾಪರ್ಟೀಸ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು

90713 86615
95133 01854